
ಕಲ್ಯಾಣ ಕಿರಣ

ಡಿಸೆಂಬರ್ - 2000

ಬೆಲೆ : 5-00





ಬೀದರ ನಗರದ ಬಸವ ಮಂಟಪದಲ್ಲಿ ಬಸವ ಗುರು ಮೂರ್ತಿಯ ಪ್ರತಿಷ್ಠಾಪನೆ ನೆರವೇರಿಸುತ್ತಿರುವ ಪೂಜ್ಯ ಮಾತಾಜಿ

★ ಕಲ್ಯಾಣ ಕಿರಣ ★

ಸಂಪುಟ 31 | ಬಸವ ಶಕೆ 867 | ಆಜೀವ ಸದಸ್ಯತ್ವ 500 ರೂ

ಸಂಚಿಕೆ 11 | ಡಿಸೆಂಬರ್-2000 | ವಾರ್ಷಿಕ ಚಂದಾ 50/- ರೂ

ಶರಣ ಮೇಳಕೆ ಬಂದು ಪಾವನನಾಗು

ಬಾ ಬಾ ಬಾ ಎಲೆ ಶರಣ ನೀನು.........
ಶರಣ ಮೇಳಕೆ ಬಂದು ಪಾವನನಾಗು ॥ ಪ ॥
ವಿಶ್ವಗುರು ಬಸವಣ್ಣ ಕೊಟ್ಟಿರುವ ಧರ್ಮದ
ಸೋದರತೆ ಬಿಂಬಿಸಲು ಬಾ ಧರ್ಮಬಂಧು ॥ ಅ. ಪ॥
ಅಂದು ಆದಿಯಲಿ ಧರ್ಮಗುರು ಬಸವಣ್ಣ
ಚೆಂದಾದ ಮಹಾಮನೆಯ ಕಟ್ಟಿ ಕರೆದರು ತಾವು
ಅನುಭವ ಮಂಟಪದ ಆನಂದ ತೊಟ್ಟಿಲಲಿ
ತತ್ತ್ವ ಜೋಗುಳ ಹಾಡಿ ಶರಣ ಶಿಶುಗಳ ತೂಗಿ ॥ 1 ॥
ನಾಡ ಬಲ್ಲಿದರೆಲ್ಲ ಕೂಡಿದರು ಹುರುಪಿನಲಿ
ಸೂಡ ಕಟ್ಟಿದರು ಶಿವ ನುಡಿಯ
ದೇವ ಮಹಿಮೆಯ ಸಾರಿ ಮನುಜ ಘನತೆಯ ತೋರಿ
ವಚನ ಧರ್ಮದ ಸಿರಿಯು ಸಂಭ್ರಮಿಸಿತಲ್ಲಿ ॥ 2 ॥
ಸಮತೆಯ ಸಾರಲಿಕೆ ಆಯಿತೊಂದು ಕ್ರಾಂತಿ
ಧರ್ಮಪಿತ ಬಸವಗುರು ಗಡಿಪಾರು ಪಡೆದಿಹರು
ಹರಳಯ್ಯ ಮಧುವಯ್ಯ ಪ್ರಾಣವನು ತೆತ್ತಿಹರು
ಮಾಚಯ್ಯ ಚೆನ್ನಯ್ಯ ನಾಗಲೆಯು ಕಾದಿದರು ॥ 3 ॥
ಶರಣರ ಕರುಳಿನ ಕರೆಯು ತಾ ಕೇಳಿಸದೆ ?
ನಿನ್ನ ಋಣ ತೀರಿಸುವ ಛಲವು ತಾ ಮೊಳೆಯದೆ ?
ವಚನ ವಾಙ್ಮಯವನ್ನು ನಮಗಾಗಿ ರಕ್ಷಿಸಲು
ಬಲಿದಾನ ಗೈದವರ ಮಹಾತ್ಯಾಗ ಅರಿಯೆಯಾ ? ॥ 4 ॥
ಕೂಡಲ ಸಂಗಮವು ಧರ್ಮಕ್ಷೇತ್ರವು ಎಂದು
ಶರಣ ವ್ರತ ಸ್ವೀಕರಿಸಿ ಶರಣ ಮೇಳಕೆ ಬಂದು
ಗಣಲಿಂಗ ದರ್ಶನವ ಪಡೆದು ಪುಳಕಿತನಾಗು
ಸಮುದಾಯ ಪ್ರಾರ್ಥನೆಯ ಮಾಡಿ ಧನ್ಯನಾಗು ॥ 5 ॥
ದೇವನೊಬ್ಬನೆ ತಂದೆ ಮನುಜರೆಲ್ಲರು ಒಂದೆ
ಎಂಬ ತತ್ತ್ವವ ತಿಳಿದು ವಿಶ್ವಧರ್ಮಿಯೆ ಆಗು
ಬಸವ ಕಿರಣವೆ ಆಗಿ ತತ್ತ್ವವನು ಪಸರಿಸು
ಸಚ್ಚಿದಾನಂದ ಪ್ರಿಯೆ ಮಾತೆಯ ಕರೆಯಿದು ॥ 6 ॥

-ಬಸವಾತ್ಮಜೆ

ಅಕ್ಷರ ಜೋಡಣೆ ಪುಟ ವಿನ್ಯಾಸ : ರಮೇಶ್ ಲಿಂಗಾಯತ

★ ಕಲ್ಯಾಣ ಕಿರಣ ★

ಸಂಪುಟ 31	ಬಸವ ಶಕೆ 867	ಆಜೀವ ಸದಸ್ಯತ್ವ 500 ರೂ
ಸಂಚಿಕೆ 11	ಡಿಸೆಂಬರ್-2000	ವಾರ್ಷಿಕ ಚಂದಾ 50 ರೂ

ಕಿರಣಗನ್ನಡಿ

ಕಲ್ಯಾಣ ಕಿರಣದ ಮುಖಪುಟ : ಬೀದರ ಬಸವ ಮಂಟಪದಲ್ಲಿ ಸ್ಥಾಪಿತವಾದ ಧರ್ಮಪಿತರ ಮೂರ್ತಿ

ನಾಲ್ಕನೆಯ ರಕ್ಷಾಪುಟ : ಬೀದರ್ ಜಿಲ್ಲಾ ಲಿಂಗಾಯತ ಧರ್ಮೀಯರ ಸಮಾವೇಶ

ಶರಣ ವ್ರತ ಸ್ವೀಕಾರದ ದಿನಗಳು

೧. ಗುರು ಸಾರಾಯ ಸಂಪದ್ ವ್ರತ : 40 ದಿವಸಗಳ ವ್ರತ ; ಡಿಸೆಂಬರ್ 6
೨. ಲಿಂಗ ಸಾರಾಯ ಸಂಪದ್ ವ್ರತ : 30 ದಿವಸಗಳ ವ್ರತ ; ಡಿಸೆಂಬರ್ 16
೩. ಜಂಗಮ ಸಾರಾಯ ಸಂಪದ್ ವ್ರತ : 20 ದಿವಸಗಳ ವ್ರತ ; ಡಿಸೆಂಬರ್ 26
೪. ಪ್ರಸಾದ ಸಾರಾಯ ಸಂಪದ್ ವ್ರತ : 10 ದಿವಸಗಳ ವ್ರತ ; ಜನವರಿ 5

E-mail : viswakalyana@yahoo.com E-mail : matemahadevi@hotmail.com

KALYANA KIRANA- Reg. No. 19988/70. Monthly Magazine printed and published by B.Shambulingaiah, at Prabhudeva Printing Press, Basava Gangotri, Kumbalgodu, Bangalore-560074. Phone : 8437234

ಅಕ್ಷರ ಜೋಡಣೆ ಪುಟ ವಿನ್ಯಾಸ : ರಮೇಶ್ ಲಿಂಗಾಯತ

ಸಂಪಾದಕೀಯ : ಲಿಂಗಾಯತವು ಅಹಿಂದು ಕಕ್ಷೆಯ ಧರ್ಮ

ಭಾನುವಾರ ದಿ.12-11-2000 ಲಿಂಗಾಯತ ಧರ್ಮದ ಇತಿಹಾಸದಲ್ಲಿ ನಿರ್ಣಾಯಕ ದಿವಸ ; ಲಿಂಗಾಯತ ಧರ್ಮವು ವನವಾಸ ಮುಗಿಸಿ, ಅಜ್ಞಾತವಾಸ ಪೂರೈಸಿ ಹೊರಬಂದು ಪಟ್ಟಕ್ಕೇರಿ ಸ್ವತಂತ್ರ ಸಾರ್ವಭೌಮನಾದ ದಿವಸ. ಪಟ್ಟಗಟ್ಟಿದ್ದು ನಾವೇ ; ಇದಕ್ಕೆ ಪೌರೋಹಿತ್ಯ ವಹಿಸಿದವರು ಕರ್ನಾಟಕ ರಾಜ್ಯದ ಹಿಂದುಳಿದ ಶಾಶ್ವತ ಆಯೋಗದ ಅಧ್ಯಕ್ಷರಾದ ಶರಣ. ರವಿವರ್ಮ ಕುಮಾರ್ ಅವರು. ಸ್ಥಳ ರಾಜಧಾನಿ ಬೆಂಗಳೂರಿನ ಲಿಂ:: ಶರಣ ಪುಟ್ಟಣ್ಣ ಚೆಟ್ಟಿ ಪುರಭವನ, ಈ ಪಟ್ಟಾಭಿಷೇಕ ಸಮಾರಂಭ ಮುಗಿಸಿ ಸಂತೋಷದಿಂದ ನಲಿನಲಿದಾಡಿ ಬಸವ ಮಂಟಪಕ್ಕೆ ಬಂದೆವು. ಸ್ವಲ್ಪ ಹೊತ್ತಿನಲ್ಲೇ ದಾವಣಗೆರೆಯ ಶ್ರೀ ಕಾಸೆಲ್ ವಿಠ್ಠಲ್ ಅವರಿಂದ ಒಂದು ಫೋನ ಬಂದಿತು.

''ಮಾತಾಜಿ ತಮ್ಮ ಬಗ್ಗೆ ನಮಗೆ ಅಪಾರ ಗೌರವ. ಹಿಂದೆಯೂ ನಿಮ್ಮ ಪ್ರವಚನ ಕೇಳಿದ್ದೆವು. ಮೊನ್ನೆ ಪೂಜ್ಯ ಗಂಗಾ ಮಾತಾಜಿಯವರ ಪ್ರವಚನವನ್ನೂ ತಪ್ಪದೆ ಕೇಳಿದೆವು. ಕಾಣಿಕೆಯನ್ನು ಸಲ್ಲಿಸಿದೆವು. ಪೂಜೆ ದಾಸೋಹದ ಪ್ರಸಾದವೂ ಬಂದಿದೆ. ಆದರೆ ಇತ್ತೀಚಿಗೆ ತಾವು ಪತ್ರಿಕೆಗಳ ಮೂಲಕ ಲಿಂಗಾಯತ-ವೀರಶೈವ ಬೇರೆ ಬೇರೆ. ಲಿಂಗಾಯತರು ಹಿಂದುಗಳಲ್ಲ ಎಂದು ಕೊಡುತ್ತಿರುವ ಹೇಳಿಕೆ ಅಪಾರ ಕಳವಳ ಉಂಟುಮಾಡುತ್ತಿದೆ. ಕಲ್ಯಾಣ ಕಿರಣವನ್ನು ಓದುವುದನ್ನು ಬಿಟ್ಟು ಬಿಡೋಣವೇ ಎಂಬ ಭಾವ ಬರುತ್ತಿದೆ. ದಯವಿಟ್ಟು ಗೊಂದಲ ಪರಿಹರಿಸಿರಿ.''

'' ಶ್ರೀ ಕಾಸೆಲ್ ವಿಠ್ಠಲ್ ಅವರೇ, ನಿಮ್ಮ ಕಳವಳ ಅರ್ಥವಾಗುತ್ತಿದೆ. ನಿಮ್ಮಂತೆಯೇ ನಾವೂ ಮಾನಸಿಕ ತೊಳಲಾಟಕ್ಕೆ ಸಿಕ್ಕಿ ಎಷ್ಟೋ ವರ್ಷಗಳಾದವು. ಆದರೇನು ಮಾಡುವುದು ಈ ನಿರ್ಧಾರ ಅನಿವಾರ್ಯ! ನಿಮ್ಮಂತಹ ಭಾವುಕರಿಗೆ ಇಂಥದೊಂದು ಕಟುಸತ್ಯವನ್ನು ಅರಗಿಸಿಕೊಳ್ಳಲು ಸಾಧ್ಯವಾಗುವುದಿಲ್ಲ ಎಂಬುದೂ ನಮಗೆ ಗೊತ್ತು. ಆದರೇನು ಮಾಡುವುದು. ಸತ್ಯವನ್ನು ನುಡಿಯಲೇ ಬೇಕಾಗಿದೆ. ಈ ಲೇಖನವನ್ನು ಪೂರಾ ಓದಿರಿ. ಇಂಥದೊಂದು ಕಠಿಣ ಸತ್ಯವನ್ನು ಅರಗಿಸಿಕೊಳ್ಳುವುದಕ್ಕೆ ನಿಮ್ಮ ಮನಸ್ಸು-ಬುದ್ಧಿಗಳು ಸಿದ್ಧವಾಗಿರುವುದಿಲ್ಲ ಎಂಬುದನ್ನು ನಾವು ಅರಿತಿದ್ದೇವೆ. ಕಲ್ಯಾಣ ಕಿರಣವನ್ನು ಓದುವುದು ಬಿಡುವುದು ನಿಮಗೆ ಬಿಟ್ಟುದು.''

ಬೇರೆ ಸ್ವಾಮಿಗಳು, ಲಿಂಗಾಯತ ಗಣ್ಯರು ಯಾವ ಸಮಸ್ಯೆಯನ್ನು ಗಂಭೀರವಾಗಿ ತೆಗೆದುಕೊಳ್ಳಲು ಹೋಗುವುದಿಲ್ಲ, ಆದರೆ ಲಿಂಗೈಕ್ಯ ಪೂಜ್ಯ ಅಪ್ಪಾಜಿ ಸಾಮಾಜಿಕ, ರಾಷ್ಟ್ರೀಯ ಸಮಸ್ಯೆಗಳನ್ನು ಗಂಭೀರವಾಗಿ ಆಲೋಚಿಸುತ್ತಿದ್ದರು. ಒಂದು ಕ್ಷಣವೂ ವ್ಯರ್ಥ ಹರಟೆ ಮಾಡದಂತೆ ಚರ್ಚೆಗೆ ಎಲ್ಲರನ್ನೂ ಎಳೆಯುತ್ತಿದ್ದರು. ''ಹಿಂದು ಅಂದರೆ ಏನು ? ಇದರ ವ್ಯಾಖ್ಯಾನ ಹೇಗೆ ?'' 1969 ಡಿಸೆಂಬರ್ ತಿಂಗಳಲ್ಲಿ ಉಡುಪಿಯಲ್ಲಿ ವಿಶ್ವ ಹಿಂದೂ ಪರಿಷತ್ ಆಶ್ರಯದಲ್ಲಿ ಒಂದು ಬೃಹತ್ ಹಿಂದೂ ಸಮ್ಮೇಳನ ನಡೆಯಿತು. ಪೂಜ್ಯ ಗುರುಗಳ ಆದೇಶದಂತೆ ಹಿಂದು ಯಾರು ? ಎಂಬ ಒಂದು ಪುಟ್ಟ ಪುಸ್ತಿಕೆಯನ್ನು ಬರೆದು ಅಲ್ಲಿ ಬಿಡುಗಡೆ ಮಾಡಿದೆವು. 10,000 ಪ್ರತಿಗಳನ್ನು ಜನರು ಮುಗಿಬಿದ್ದು ಕೊಂಡುಕೊಂಡರು. ನನ್ನ ಭಾಷಣ ಬೀರಿದ ಪ್ರಭಾವ ಅಪೂರ್ವ. ನನ್ನ ಭಾಷಣದ ನಂತರ ಶ್ರೀಮತಿ ವಿಜಯರಾಜೇ ಸಿಂಧ್ಯ ಅವರು ಹೇಳಿದರು. ''ನಾನು ಮಾತಾ ದುರ್ಗೆಯನ್ನು ಭಾವಚಿತ್ರದಲ್ಲಿ ನೋಡಿದ್ದೆ, ಗೌರವ ಪೂರ್ವಕವಾಗಿ ಆರಾಧಿಸುತ್ತಿದ್ದೆ. ಇಂದಿನ ಭಾಷಣ ಕೇಳಿದ ಮೇಲೆ ಮಾತಾ ದುರ್ಗೆಯ ದರ್ಶನವಾಯಿತು. ಇಂಥವರು ಈ ಧರ್ಮ-ದೇಶಗಳ ಉದ್ಧಾರಕ್ಕಾಗಿ ಸಹಸ್ರಾರು ಸಂಖ್ಯೆಯಲ್ಲಿ ಅವಶ್ಯವಿದ್ದಾರೆ.''

ನಾನು ಅಂದಿನಿಂದಲೂ ಚಿಂತನೆಗೆ ತೊಡಗಿದೆ. ಹಿಂದೂ ಎಂದರೆ ಏನು? ಹಿಂದು ಯಾರು? ಪುಸ್ತಕವನ್ನು ಬರೆದೆ. ಇದು ಆಂಗ್ಲ ಭಾಷೆಯಲ್ಲಿಯೂ **Who is a Hindu ?** ಎಂದು ಪ್ರಕಟಗೊಂಡಿದೆ.

ಏನೇನೋ ಸಮಜಾಯಿಷಿ ಕೊಟ್ಟು ವ್ಯಾಖ್ಯಾನವನ್ನು ಮಾಡಿದ್ದಾಯಿತು. ಆದರೆ ಎಲ್ಲೋ ಒಂದು ಕೊರತೆ.

ಓರ್ವರು ಮಾತನಾಡುವಾಗ "ಹಿಂಡೂ ಹಿಂಡೂ" ಎನ್ನುತ್ತಿದ್ದರು. "ಅದೇನ್ರಿ..... ಬ್ರಿಟಿಷರು ನಾಲಿಗೆ ಹೊರಳದೆ ಹಿಂದೂ ಎನ್ನುವ ಬದಲು ಹಿಂಡೂ ಎಂದರೆ ನೀವೂ ಹಾಗೆ ಅನ್ನುವುದೆ ?" ಎಂದು ಛೇಡಿಸಿದೆ. "ಆಂಗ್ಲಭಾಷೆಯ ಪ್ರಭಾವದಿಂದ ಹಾಗೆ ರೂಢಿಯಾಗಿದೆ..' ಎಂದರು. "ನೀವು ಹೇಳುವುದೂ ಒಂದು ರೀತಿಯಲ್ಲಿ ಸತ್ಯವೇ ! ಏಕೆಂದರೆ ಹಿಂದೂ ಸಮಾಜ 'ಹಿಂಡಿ'ನಂತೆ ಇದೆಯೇ ವಿನಾ ವ್ಯವಸ್ಥಿತ ಸಮಾಜವಾಗಿ ಅಲ್ಲ . ದನಗಳ ಹಿಂಡು, ಕುರಿಗಳ ಹಿಂಡು/ಮಂದೆ ಎಂದು ಕರೆಯುತ್ತೇವೆ. ಅವು ಸಜಾತೀಯ ಪ್ರಾಣಿಗಳಾಗಿ ಒಟ್ಟುಗೂಡಿದ್ದು ಅದು ಹಿಂಡೇ ವಿನಾ ವ್ಯವಸ್ಥಿತ ಗುಂಪಲ್ಲ. "ಹಿಂಡು, ಹಿಂಡುವಿಕೆ ಹಿಂದು ಸಮಾಜದಲ್ಲಿ ನಿರಂತರವಾಗಿ ನಡೆದಿರುವ ಕ್ರಿಯೆ. ಧರ್ಮ, ನಂಬಿಕೆಗಳ ಹೆಸರಿನಲ್ಲಿ ಹಿಂಡುವ ಕ್ರಿಯೆ (Squeezing, exploitation) ಎಲ್ಲಿ ನೋಡಿದಡಲ್ಲಿ ಎದ್ದು ಕಾಣುತ್ತದೆ. ತಲೆಗೂದಲನ್ನು ದೇವರಿಗೆ ಕೊಡುವ ಮೂಢರೊಂದು ಕಡೆ, ರಸ್ತೆಗಳಲ್ಲಿ ಹೊರಳಾಡಿ ಉರುಳು ಸೇವೆ ಮಾಡುವವರೊಂದು ಕಡೆ ; ಈ ಮೂಢರು ಮೌಢ್ಯತೆಯನ್ನು ಗೊಬ್ಬರವಾಗಿ ಮಾಡಿಕೊಂಡು ಬೆಳೆಯುತ್ತಿರುವ ದೇವಾಲಯಗಳ ಧರ್ಮದರ್ಶಿಗಳು, ರಾಜಕಾರಣಿಗಳು, ವ್ಯಾಪಾರಿಗಳು ಮತ್ತು ಪುರೋಹಿತರು ಮಗದೊಂದು ಕಡೆ. ಹಿಂದುಗಳನ್ನು ಹಿಂಡುವ ಅಷ್ಟಪದಿಗಳಾದ ಜ್ಯೋತಿಷ್ಯ, ಪಂಚಾಂಗ, ಹೋಮ-ಹವನ, ಯಜ್ಞ-ಯಾಗ, ಪ್ರಾಣಿ ಬಲಿ, ಗಿಡಗಂಟೆ, ದೇವತೆಗಳ ಪೂಜೆ, ಭೂತ-ಪ್ರೇತ ಆರಾಧನೆ ಒಂದೆ ಎರಡೆ. ಈ ನಂಬಿಕೆಗಳಿಂದ ಹೊರಬರಲಾರದ ಭಯಗ್ರಸ್ಥ ಮನಸ್ಸುಗಳು.

ಹೊಸದೊಂದು ವರ್ಣ ವ್ಯವಸ್ಥೆಯನ್ನು ಕಲ್ಪಿಸಬಹುದಾದರೆ ಮೂಢಭಕ್ತರೇ ಶೂದ್ರರು, ಇದರಿಂದ ಉತ್ತಮ ಸಂಪಾದನೆ ಮಾಡಿಕೊಳ್ಳುವ ವ್ಯಾಪಾರಿಗಳೇ ವೈಶ್ಯರು, ಇದರ ಮೂಲಕ ಪ್ರಭಾವ-ಅಧಿಕಾರ ಗಿಟ್ಟಿಸಿಕೊಳ್ಳುವವರೇ ಕ್ಷತ್ರಿಯರು, ಮೂಢನಂಬಿಕೆ ಬೆಳೆಸಿ ತನ್ಮೂಲಕ ತಮ್ಮ ಉಪಜೀವನ ಸಾಧಿಸುವವರೇ ಬ್ರಾಹ್ಮಣರು. ಇದನ್ನು ಜಾತಿ ವಾಚಕವಾಗಿ ತೆಗೆದುಕೊಳ್ಳದೆ ಆರ್ಥಿಕ ವ್ಯವಸ್ಥೆಯ ಮೇಲೆ ಅರ್ಥಮಾಡಿ ವರ್ಗೀಕರಿಸಬಹುದು. ಹಿಂದು ಸಮಾಜದ ಮೂಢನಂಬಿಕೆಗಳಲ್ಲಿ ಸಿಕ್ಕಿ ಭಯಗ್ರಸ್ತರಾಗಿರುವ ಧಾರ್ಮಿಕರ ಸ್ಥಿತಿಯನ್ನು ಕುರಿತು ನನ್ನಲ್ಲಿ ನಾನೇ ಆಲೋಚಿಸುವಾಗ ಕೆಸರಿನ ಮಡುವಿನಲ್ಲಿ ಸಿಕ್ಕಿ ಪರಿತಪಿಸುವ ಒಂದು ಪಶುವಿನಂತೆ ಅವರ ಸ್ಥಿತಿ ತೋರುತ್ತದೆ. ಧರ್ಮಪಿತ ಬಸವಣ್ಣನವರ ಒಂದು ವಚನವು ಭವಕಾಸಾರದಲ್ಲಿ ಸಿಕ್ಕಿ ಬಿದ್ದ ಜೀವಾತ್ಮನ ಪರಿಸ್ಥಿತಿಯನ್ನು ಪರಿಣಾಮಕಾರಿಯಾಗಿ ಚಿತ್ರಿಸುತ್ತದೆ.

ಬಡಪಶು ಪಂಕದಲ್ಲಿ ಬಿದ್ದಡೆ
ಕಾಲ ಬಡಿವುದಲ್ಲದೆ ಬೇರೆ ಗತಿಯುಂಟೆ ?
ಶಿವ ಶಿವಾ ! ಹೋದಹೆ ಹೋದಹೆನಯ್ಯಾ
ನಿಮ್ಮ ಮನದತ್ತಲೆನ್ನ ತೆಗೆಯಯ್ಯಾ
ಪಶುವಾನು, ಪಶುಪತಿ ನೀನು !
ತುಡುಗಣಿಯೆಂದು ಎನ್ನ ಹಿಡಿದು ಬಡಿಯದ ಮುನ್ನ
ಒಡೆಯಾ, ನಿಮ್ಮ ಬಯ್ಕದಂತೆ ಮಾಡು, ಲಿಂಗದೇವಾ.

ಕೆಸರಿನಲ್ಲಿ ಬಿದ್ದ ಬಡ ಪಶುವಿನಂತೆ
ಆನು ದೆಸೆದೆಸೆಗೆ ಬಾಯಿಬಿಡುತ್ತಿದ್ದೇನಯ್ಯಾ !
ಆರಯ್ವರಿಲ್ಲ-ಅಕಟಕಟಾ ಪಶುವೆಂದೆನ್ನ!
ಲಿಂಗದೇವ ಕೊಂಬ ಹಿಡಿದೆತ್ತುವನ್ನಕ್ಕ.

ಕೆಳಗೆ ಕಾಲು ಕುಸಿಯುತ್ತಿದೆ. ಆ ಮುಗ್ಧ ಪಶು ಏನೂ ಮಾಡಲು ತೋಚದೆ ಬಾಯಿ ಬಿಡುತ್ತದೆ, ಹಲುಬುತ್ತದೆ.

ವರ್ಣಾಶ್ರಮ ಜಾತಿ ಪದ್ಧತಿ, ಅಸ್ಪಶ್ಯತೆ, ಬಹುದೇವತೋಪಾಸನೆ, ಮೂಢನಂಬಿಕೆ ಇತ್ಯಾದಿ ಇತ್ಯಾದಿ ಕೆಸರಿನಲ್ಲಿ ಹಿಂದೂ ಸಮಾಜದ ಜನರು ಸಿಕ್ಕಿದ್ದಾರೆ. ಇದರಿಂದ ಹೊರಬರುವ ದಾರಿ ತೋಚುತ್ತಿಲ್ಲ. ಒಂದು ಕಡೆಯಲ್ಲಿ ಯೋಗಿರಾಜ ಶಿವ, ಅರವಿಂದರು, ವಿವೇಕಾನಂದರು, ಮಹಾತ್ಮಾ ಗಾಂಧೀಜಿ ಮುಂತಾದವರ ವ್ಯಕ್ತಿತ್ವ -ಸಂದೇಶಗಳು ಬೆಂಡಿನಂತೆ ಮೇಲೆತ್ತುತ್ತವೆ. ಜಾತಿ ಪದ್ದತಿ, ಅಸ್ಪೃಶ್ಯತೆ, ಮೂಢನಂಬಿಕೆ ಮುಂತಾದವು ಕಾಲಲ್ಲಿ ಕಟ್ಟಿದ ಕಲ್ಲುಗುಂಡಿನಂತೆ ಹಿಂದೂ ಧರ್ಮದ ಸಮುದ್ರದೊಳಗೆ ಕೆಳಗೆ ಜಗ್ಗುತ್ತಿವೆ. ಕಲ್ಲು ಗುಂಡು ಕೊಳೆಯುವುದಿಲ್ಲ. ಬೆಂಡು ನಿಧಾನಕ್ಕೆ ಕೊಳೆಯುತ್ತದೆ. ಆದ್ದರಿಂದ ಸಮುದ್ರದಲ್ಲಿ ತೇಲಲೂ ಆಗದೆ ಮುಳುಗಲೂ ಆಗದೆ ಅಂತರದಲ್ಲಿ ತೇಲಾಡುವ ವ್ಯಕ್ತಿ ಬೆಂಡು ಕೊಳೆಯುವ ಮುನ್ನ, ಗುಂಡು ಮುಳುಗಿಸುವ ಮುನ್ನ ಸಮುದ್ರದಿಂದ ಹೊರಬರಬೇಕು.

ಹಿಂದೂ ಸಮಾಜದಲ್ಲಿ ಅನೇಕ ಮಠಗಳಿವೆ. ಇವುಗಳಿಗೆ ಗುರುಗಳು ಬ್ರಾಹ್ಮಣ ಪೀಠಾಧಿಪತಿಗಳು, ಪೂಜಾರಿಗಳು ಬ್ರಾಹ್ಮಣಪುರೋಹಿತರು. ಇವರುಗಳು ಒಟ್ಟಾರೆ ಹಿಂದು ಸಮಾಜದ ಹಿತ ಚಿಂತನೆ ಮಾಡುತ್ತಿರುವರೆ ? ಅವರು ಅವರವರ ಜಾತಿಯ ಜನರ ಹಿತಾಸಕ್ತಿ ಕುರಿತು ಚಿಂತನೆ ಮಾಡುವರು. ಇನ್ನು ಒಕ್ಕಲಿಗ, ಕುರುಬ, ಮರಾಠಾ, ದೇವಾಂಗ ಇತ್ಯಾದಿ. ಎಲ್ಲರಿಗೂ ಈಗ ಗುರುಪೀಠಗಳು ಆಗುತ್ತಿವೆ. ಅವರುಗಳು ಅವರವರ ಜಾತಿಯ ಹಿತಚಿಂತನೆ ಮಾಡುವರು. ಅದೂ ಎಂತಹ ಹಿತಚಿಂತನೆ ? ಧಾರ್ಮಿಕ ಗುರುಗಳ ನೇತೃತ್ವದಲ್ಲಿ ಬಲಿಷ್ಠ ರಾಜಕಾರಣಿಗಳು ಸೇರಿ, ಹಣ ಸಂಗ್ರಹಿಸಿ, ಬೃಹತ್ ಸಮ್ಮೇಳನ ಮಾಡುವರು. ಅವರಲ್ಲಿನ ಶ್ರೀ ಸಾಮಾನ್ಯರನ್ನು ಸಂದರ್ಶಿಸುವರೆ ? ಹೋಗಲಿ ಅಧ್ಯಾತ್ಮದ ಆವಶ್ಯಕತೆ ಏನು ಎಂದು ಅಧ್ಯಾತ್ಮ ಬೋಧೆ ಮಾಡುವರೆ ? ಒಮ್ಮೆ ಯಾರೋ ಹೇಳಿದರು, "ಜಾತೀಯ ಗುರು ಪೀಠಗಳು ಭಯೋತ್ಪಾದನೆಯ ಕೇಂದ್ರಗಳಾಗಿವೆ. ಜಾತಿಗೊಬ್ಬರು ಗುರುವಾಗಿ ಅವರ ಜನಗಳಲ್ಲಿ ಹೋಗಿ ಒತ್ತಾಯದಿಂದ ಹಣ ಸಂಗ್ರಹಿಸುವರು. ರಾಜಕೀಯ ಬಲಿಷ್ಠರ ಜೊತೆ ಹೋಗಿ ಹಣ ಸಂಗ್ರಹಿಸುವುದರಿಂದ ಇಲ್ಲವೆನ್ನಲಾಗದೆ ಜನರು ತುಂಬಾ ಹಿಂಸೆ ಪಡುವರು. ವ್ಯಕ್ತಿಗಿಷ್ಟು, ಕುಟುಂಬಕ್ಕೆ ಇಷ್ಟು ಎಂದು ಒತ್ತಾಯದಿಂದ ಹಣ ಪಡೆಯುವರು, ಕೊಡದೆ ಇದ್ದರೆ ದಂಡ-ಬಹಿಷ್ಕಾರ ಹಾಕುವರು." ಒಂದು ಕಡೆ ಧರ್ಮದಲ್ಲಿ ಅನಾಸಕ್ತಿ, ತಿರಸ್ಕಾರ ಬೆಳೆಯುತ್ತಿದ್ದರೆ ಇನ್ನೊಂದು ಕಡೆ ಜಾತಿಪ್ರಜ್ಞೆ ಬೆಳೆಯುತ್ತಿದೆ. ಎಲ್ಲರೂ ಕೇವಲ ರಾಜಕೀಯ ಸ್ಥಾನಮಾನದ ದೃಷ್ಟಿಯಿಂದ ತಮ್ಮ ಜಾತಿಗಳ ಬೆಳಗಣಿಗೆಯ ಚಿಂತನೆ ಮಾಡಿದರೆ, ಎಲ್ಲರ ಚಿಂತನೆಯನ್ನು ಅಧ್ಯಾತ್ಮಿಕ ದೃಷ್ಟಿಯಿಂದ ಮಾಡುವ ಪ್ರವೃತ್ತಿಯೇ ಕಡಿಮೆಯಾಗುತ್ತಿದೆ ಬಸವಣ್ಣನವರು ಆ ದೃಷ್ಟಿಯಿಂದಲೇ ಚಿಂತನೆ ಮಾಡಿ, "ಸಕಲ ಜೀವಾತ್ಮರಿಗೆ ಲೇಸನ್ನು ಬಯಸುವವನೇ ಶರಣ." ಎಂಬ ವಿಶ್ವಮಾನವನ (universal man) ಪರಿಕಲ್ಪನೆ ನೀಡಿದರು.

"ಹಿಂದು"- ಇದರ ವ್ಯಾಖ್ಯಾನ ಹೇಗೆ ? ತತ್ತ್ವದ ತಳಹದಿಯ ಮೇಲೆಯೆ ? ಅಥವಾ ಒಬ್ಬ ಗುರುವಿನ ಬೋಧನೆಯ ತಳಹದಿಯ ಮೇಲೆಯೆ ? ದಿ.12-11-2000 ದಂದು ಲಿಂಗಾಯತ ಧರ್ಮೀಯರ ಸಮಾವೇಶ ಉದ್ಘಾಟಿಸಿದ ಪ್ರೊ. ರವಿವರ್ಮ ಕುಮಾರ್ ಹೇಳಿದರು. "ಹಿಂದು ಪದವು' ಪರಕೀಯರಿಂದ ಬಂದುದು. ಇದಕ್ಕೆ ವ್ಯಾಖ್ಯಾನವೇ ಇಲ್ಲ. ಯಾರು ಬೌದ್ಧ, ಜೈನ, ಸಿಖ್, ಮುಸ್ಲಿಂ, ಕ್ರೈಸ್ತ, ಯಹೂದಿಗಳಲ್ಲವೋ ಅವರೆಲ್ಲರೂ ಹಿಂದುಗಳು ಎಂದು ತಿಳಿಯಲಾಗುತ್ತಿದೆ". ನಿಜ, ಸುಮ್ಮನೆ ಆಲೋಚನೆ ಮಾಡಿದರೆ ಈ ವಿವರಣೆಯು ಸತ್ಯವೆನಿಸುತ್ತದೆ. ಒಂದು ದೊಡ್ಡ ಮೀನಿನ ಬಲೆಯನ್ನು ಬೀಸಿ ಅದರೊಳಗೆ ಸಿಕ್ಕವೆಲ್ಲವೂ ಮೀನುಗಳು ಎಂದಂತೆ ಇದೆ ಈ ವ್ಯಾಖ್ಯಾನ. ಆ ಮೀನಿನ ಬಲೆಯೊಳಗೆ

ಆಮೆಯೂ ಇರಬಹುದು, ಮೃದ್ವಂಗಿಯೂ ಇರಬಹುದು ; ಏಡಿಯೂ ಇರಬಹುದು. ಇವೆಲ್ಲವೂ ಮೀನಲ್ಲವಷ್ಟೆ.

"ಹಿಂದು ಒಂದು ವಿಶಿಷ್ಟ ಧರ್ಮವಲ್ಲ ; ಹಲವಾರು ಧರ್ಮಗಳ ಒಕ್ಕೂಟ. ಇದೊಂದು ಹಲವು ಹೂಗಳಿಂದ ಕೂಡಿದ ಹೂಮಾಲೆಯಂತೆ, ಹಲವು ನದಿಗಳಿಂದ ಕೂಡಿದ ಸಮುದ್ರದಂತೆ, ಹಲವು ಗಿಡಮರಗಳಿಂದ ಕೂಡಿದ ತೋಟದಂತೆ" ಎಂದು ಪೂಜ್ಯ ಲಿಂಗೈಕ್ಯ ಅಪ್ಪಾಜಿ ಮತ್ತು ನಾವು ಪ್ರತಿಪಾದಿಸುತ್ತಿದ್ದೆವು. ಈಗಲೂ ಪ್ರತಿಪಾದಿಸಲು ಸಿದ್ಧ. ಒಳಗಿರುವವರನ್ನು ವೈದಿಕ ಹಿಂದು, ಜೈನ ಹಿಂದು, ಬೌದ್ಧ ಹಿಂದು, ಸಿಖ್ ಹಿಂದು ಎಂದು ಕರೆದರೆ ಆಗ ಲಿಂಗಾಯತ ಹಿಂದು ಎನಿಸಿಕೊಳ್ಳಲು ನಾವೂ ಸಿದ್ಧರು. ಆದರೆ ಜನಗಣತಿ ಈ ಅರ್ಥದಲ್ಲಿ ನಡೆಯದೆ ಹಿಂದುವನ್ನು ಒಂದು ಧರ್ಮವೆಂದೇ ಪರಿಗಣಿಸಿ ಅನುಯಾಯಿಗಳ ಗಣತಿ ಮಾಡಲಾಗುತ್ತಿದೆ.

ಹಿಂದು ಒಂದು ಧರ್ಮ ಎಂದು ಒಪ್ಪಿದರೆ ಒಂದು ಧರ್ಮದಲ್ಲಿ ಇನ್ನೊಂದು ಧರ್ಮ ಇರಲು ಸಾಧ್ಯವಿಲ್ಲ ; ಆಗ ಹಿಂದುದಲ್ಲಿ ಲಿಂಗಾಯತವು ಒಂದು ಜಾತಿಯಾಗಿ ಉಳಿಯುತ್ತದೆ. ವಾಸ್ತವಿಕವಾಗಿ ಲಿಂಗಾಯತ ಒಂದು ಜಾತಿಯಲ್ಲ, ಧರ್ಮವು. ಮಾತ್ರವಲ್ಲ ಪರಿಪೂರ್ಣ ಧರ್ಮದ ಲಕ್ಷಣಗಳನ್ನು ಹೊಂದಿದೆ. ಯಾರಿಗೆ ಬೇಕಾದರೂ ದೀಕ್ಷೆ ನೀಡಿ ತನ್ನೊಳಗೆ ಇಂಬಿಟ್ಟುಕೊಳ್ಳಬಲ್ಲುದಾಗಿದೆ. ಹಿಂದು ಸಮಾಜ ರಚನೆ 5 ವರ್ಣಗಳಿಂದ ಕೂಡಿದೆ. ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ, ಪಂಚಮ (ಅಸ್ಪೃಶ್ಯ) ಎಂಬುವು 5 ವರ್ಣಗಳು ಲಿಂಗಾಯತರು ಹಿಂದುಗಳೇ ಆದರೆ ಆಗ ಅವರು ಈ 5ರಲ್ಲಿ ಯಾವ ವರ್ಣದಲ್ಲಿ ಸೇರಬೇಕು ? ಜನ್ನಿವಾರ ಇಲ್ಲದವರು, ಅರ್ಥಾತ್ ದ್ವಿಜ ಸಂಸ್ಕಾರ ಇಲ್ಲದವರು ಶೂದ್ರರು. ಲಿಂಗಾಯತರಿಗೆ ಜನ್ನಿವಾರವಿಲ್ಲ, ದ್ವಿಜ ಸಂಸ್ಕಾರವಿಲ್ಲ ಹಾಗಾದರೆ ಅವರು ಶೂದ್ರರೆ ? ಶೂದ್ರರಿಗೆ ಪೂಜೆಯ ಹಕ್ಕಿಲ್ಲ. ಎಲ್ಲ ಹಿಂದೂಗಳಿಗೂ ಕಡ್ಡಾಯವಾದ ದೀಕ್ಷಾ ಸಂಸ್ಕಾರವಿಲ್ಲ. ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ವರ್ಣದ ಪುರುಷರಿಗೆ ಉಂಟು. ಶೂದ್ರ ಪುರುಷರಿಗೂ ಇಲ್ಲ. ಎಲ್ಲಾ ವರ್ಣದ ಸ್ತ್ರೀಯರೂ ಶೂದ್ರರಾದುದರಿಂದ ಅವರಿಗೆ ಧಾರ್ಮಿಕ ದೀಕ್ಷಾ ಸಂಸ್ಕಾರವಿಲ್ಲ. ಲಿಂಗಾಯತರಿಗೆ ಕಡ್ಡಾಯವಾದ ದೀಕ್ಷೆ ಇದೆ. ಪೂಜೆಯ ಹಕ್ಕಿದೆ. ಶ್ರೇಣೀಕೃತ ವರ್ಣಾಶ್ರಮ ವ್ಯವಸ್ಥೆಯಲ್ಲಿ ಬ್ರಾಹ್ಮಣ ಅತ್ಯಂತ ಶ್ರೇಷ್ಠ, ಕ್ಷತ್ರಿಯ ಬ್ರಾಹ್ಮಣನ ಕೆಳಗೆ, ವೈಶ್ಯ ಇನ್ನೂ ಕೆಳಗೆ. ಬ್ರಾಹ್ಮಣ, ಕ್ಷತ್ರಿಯ ಪುಣ್ಯ ಯೋನಿಜರು, ವೈಶ್ಯರು, ಶೂದ್ರರು, ಸ್ತ್ರೀಯರು ಪಾಪ ಯೋನಿಜರು. ಇದನ್ನು ಅತ್ಯಂತ ವಿಧೇಯರಾಗಿ ಬಹುಪಾಲು ವೈಶ್ಯರು, ಶೂದ್ರರು, ಹಿಂದು ಸ್ತ್ರೀಯರು ಒಪ್ಪಿದ್ದಾರೆ. ಆದರೆ ಕ್ರಾಂತಿಪುರುಷ ಬಸವಣ್ಣನವರು ಇವರೆಲ್ಲರ ಪರವಾಗಿ ಎಂದೋ ಪ್ರತಿಭಟಿಸಿ ನೆಲೆ ಇಲ್ಲದ ಇವರಿಗೆ ಹೊಸ ಧರ್ಮ ಸ್ಥಾಪಿಸಿ ಲಿಂಗಾಯತದ ಹೊಸ ಮನೆಯೊಳಗೆ ಸುರಕ್ಷಿತವಾಗಿ ಇರಿಸಿದ್ದಾರೆ. ಇಂಥ ಕಟು ಸತ್ಯವನ್ನು ಇಂದು ಅರಿಯಲೇ ಬೇಕಾಗಿದೆ.

ಲಿಂಗಾಯತವು ಹಿಂದು ವಿರೋಧಿಯಲ್ಲ

ಲಿಂಗಾಯತವು ಸ್ವತಂತ್ರ ಧರ್ಮ ; ಇದು ಅಹಿಂದು ಧರ್ಮ ಎಂದ ಮಾತ್ರಕ್ಕೆ ಹಿಂದೂ ವಿರೋಧಿಯಲ್ಲ. ಹಿಂದು ಸಂಸ್ಕೃತಿ ಭಾರತೀಯರಲ್ಲಿ ಹಾಸು ಹೊಕ್ಕಾಗಿದೆ. ಕಾಷಾಯ ವಸ್ತ್ರ ವಿಭೂತಿ, ರುದ್ರಾಕ್ಷಿ, ಸೀರೆ, ಬಳೆ, ಕುಂಕುಮ, ಕಾಲುಂಗುರ ಮುಂತಾದವು ಭಾರತೀಯರ ಜೀವನದಲ್ಲಿ ಸಹಜವಾಗಿವೆ. ತಾತ್ತ್ವಿಕವಾಗಿ, ಆಚರಣೆಯ ದೃಷ್ಟಿಯಿಂದ, ಕೆಲವು ನಂಬಿಕೆ-ಆಚಾರ-ವಿಚಾರಗಳ ದೃಷ್ಟಿಯಿಂದ ಲಿಂಗಾಯತರು ಹಿಂದುಗಳಲ್ಲ ; ಆದರೆ ಭಾರತೀಯ ಪರಂಪರೆಗೆ ಎಂದೂ ಹೊರಗಲ್ಲ, ಹೊರಗಾಗುವುದೂ ಇಲ್ಲ. ಜೈನರು ಸ್ವತಂತ್ರ ಧರ್ಮವಾಗಿದ್ದರೂ ಭಾರತೀಯ ಸಂಸ್ಕೃತಿಗೆ ಹೊರಗಾಗಿಲ್ಲ ಮತ್ತು ಎಂದೂ ಹಿಂದೂ ವಿರೋಧಿಗಳಾಗಿ ವರ್ತಿಸುವುದೂ ಇಲ್ಲ. ಅದೇ ರೀತಿ ಸಿಖ್ಖರು ಅವರು ಸ್ವತಂತ್ರ

ಧರ್ಮಾನುಯಾಯಿಗಳಾಗಿದ್ದರೂ ಈ ರಾಷ್ಟ್ರದ ಹೆಮ್ಮೆಯ ಸಂತಾನವಾಗಿದ್ದಾರೆ. ಅದೇ ರೀತಿ

ಆದಿಯಲಾಗಲಿ, ವೇದದಲಾಗಲಿ ಶಾಸ್ತ್ರದಲಾಗಲಿ ಸಮಯದಲಾಗಲಿ
ಎನ್ನವರೆನ್ನೆನು ಎನ್ನವರೆನ್ನೆನು !
ಎನ್ನವರೆಂದಡೆ ಲಿಂಗಾ ನಿಮ್ಮಲ್ಲಿಗೆ ದೂರ
ಎನ್ನವರಾದರೆ ಜನ್ನಕ್ಕೆ ನಡೆವರೆ ?
ಎನ್ನವರಲ್ಲ, ಲಿಂಗದೇವಾ ನಿಮ್ಮಾಣೆ.

ಧಾರ್ಮಿಕವಾಗಿ, ವೇದಗಳ ಪ್ರಾಮಾಣ್ಯದಿಂದಾಗಲೀ ಲಿಂಗಾಯತರು ಸಾಂಪ್ರದಾಯಿಕ ಹಿಂದುಗಳಿಂದ ಬೇರೆ. ಏಕೆಂದರೆ ಬಸವ ಭಕ್ತರು ಯಜ್ಞ-ಯಾಗಾದಿಗಳನ್ನು ಮಾಡಕೂಡದು ; ಮಾಡಿದರೆ ಲಿಂಗದೇವನಿಗೆ ದ್ರೋಹ ಬಗೆದಂತಾಗುವುದು ಎನ್ನುತ್ತದೆ ಬಸವ ಗುರುವಿನವಾಣಿ. **-ಮಾತಾಜಿ**

ಚಿತ್ರದುರ್ಗದಲ್ಲಿ ಲಿಂಗಾಯತ ಧರ್ಮೀಯರ ಸಮಾವೇಶ


ಭಾನುವಾರ ದಿ. 26-11-2000ದಂದು ಚಿತ್ರದುರ್ಗ ನಗರದ ಮಧ್ಯಭಾಗದಲ್ಲಿರುವ ಪುರಭವನದ ಕಲ್ಯಾಣ ಮಂಟಪದಲ್ಲಿ ಲಿಂಗಾಯತ ಧರ್ಮೀಯರ ಸಮಾವೇಶ. ಇದರ ಉದ್ದೇಶವು ಬಹುಮುಖಿಯಾದುದು. ಮುಂಬರುವ 2001ನೆಯ ಜನಗಣತಿಯ ನಿಮಿತ್ತ ಮತ ಎಂಬ 8ನೆಯ ಕಾಲಮ್‌ನಲ್ಲಿ ಲಿಂಗಾಯತ ಧರ್ಮೀಯರು ಕೇವಲ ಲಿಂಗಾಯತ ಎಂದು ಬರೆಸಲು ಜನಜಾಗರಣ ಕಾರ್ಯಕ್ರಮ. ಕ್ರಾಂತಿಗಂಗೋತ್ರಿ ಅಕ್ಕನಾಗಲಾಂಬಿಕಾ ಮಹಿಳಾ ಗಣದ ಪ್ರಾರಂಭೋತ್ಸವ ಮತ್ತು ಶರಣ ಮೇಳದ ಪ್ರಚಾರ.

ಧರ್ಮಪಿತ ಬಸವಣ್ಣನವರ ಪೂಜೆಯನ್ನು ಲಲಿತಮ್ಮ ಇಂಧುಧರ್, ಅಕ್ಕಮಹಾದೇವಿ ತಿಪ್ಪೇಸ್ವಾಮಿ, ಶಾರದಮ್ಮ ಚೆನ್ನಪ್ಪ ನೆರವೇರಿಸಿದರು. ಗೋಕಾಕ ಬಸವ ಮಂಟಪದ ಪೂಜ್ಯ ಶ್ರೀ ಬಸವ ಕುಮಾರ ಸ್ವಾಮಿಗಳು ಬಸವ ಧ್ವಜಾರೋಹಣ ಮಾಡಿದರು. ಲಿಂಗಾಯತ ಧರ್ಮ ಮಹಾಸಭಾದ ಗೌರವಾಧ್ಯಕ್ಷರಾದ ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರು ಸಮಾವೇಶವನ್ನು ಉದ್ಘಾಟಿಸಿದರು. ಅಕ್ಕನಾಗಲಾಂಬಿಕಾ ಮಹಿಳಾ ಗಣದ ಉದ್ಘಾಟನೆಯನ್ನು ದ್ವಿತೀಯ ಮಹಿಳಾ ಜಗದ್ಗುರುಗಳಾದ ಪೂಜ್ಯ ಶ್ರೀ ಮಾತೆ ಗಂಗಾದೇವಿಯವರು ನೆರವೇರಿಸಿದರು. ಭಾನುವಾರದ ಸಮುದಾಯ ಪ್ರಾರ್ಥನೆಯನ್ನು ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರು ಮಾಡಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಚಿತ್ರದುರ್ಗ ರಾಷ್ಟ್ರೀಯ ಬಸವ ದಳ ಟ್ರಸ್ಟ್ ಅಧ್ಯಕ್ಷರಾದ ಶರಣ. ಬಿ.ವಿ.ಸತ್ಯನಾರಾಯಣ ಶೆಟ್ಟರು, ಸನ್ನಿಧಿಯನ್ನು ಪೂಜ್ಯ ಶ್ರೀ ಚನ್ನಬಸವರಾಜ ಸ್ವಾಮಿಗಳು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಕರ್ನಾಟಕ ರಾಜ್ಯ ರಾಷ್ಟ್ರೀಯ ಬಸವ ದಳದ ಅಧ್ಯಕ್ಷರಾದ ಶರಣ. ವೀರಣ್ಣ ಕೊರ್ಲಹಳ್ಳಿ ಆಗಮಿಸಿದ್ದರು. ವಿಶೇಷ ಆಹ್ವಾನಿತರಾಗಿ ಆಗಮಿಸಿದ್ದ ರಾಷ್ಟ್ರೀಯ ಬಸವ ದಳಗಳ ಪ್ರಮುಖರಾದ ಶಿವಮೊಗ್ಗದ ಜಯಮ್ಮ ಚಂದ್ರಪ್ಪ, ಚಳ್ಳಕೆರೆಯ ತಿಪ್ಪೇರುದ್ರಪ್ಪ, ಹಿರಿಯೂರಿನ ಜಿ.ಬಿ.ಮಲ್ಲಯ್ಯ, ಎ. ತಾರಕನಾಥ, ಗಣನಾಯಕನಹಳ್ಳಿಯ ಎಂ.ವಿ.ತಿಪ್ಪೇಸ್ವಾಮಿ, ಜಿ.ಶಾಂತಯ್ಯ. ಸಿ.ಎಸ್.ತಾರಕನಾಥ, ನಂದಿಹಳ್ಳಿಯ ಮಂಜುನಾಥ, ಚಳ್ಳಕೆರೆ ರಾಷ್ಟ್ರೀಯ ಬಸವ ದಳ ತಾಲ್ಲೂಕು ಅಧ್ಯಕ್ಷ, ಸಿ.ಆರ್.ವೀರಭದ್ರಯ್ಯ, ಭದ್ರಾವತಿಯ ಷಡಕ್ಷರಪ್ಪ, ತುಮಕೂರಿನ ಕಲ್ಲಪ್ಪ ಮತ್ತು ವೆಂಕಟೇಶ್, ದೊಡ್ಡಉಳ್ಳರ್ತಿಯ ಹನುಮಂತರೆಡ್ಡಿ, ತಿಮ್ಮಪ್ಪಯ್ಯನಹಳ್ಳಿಯ ಕೆ.ವೀರೇಶ್ ಮುಂತಾದವರು ಭಾಗವಹಿಸಿ ಉಪನ್ಯಾಸ ಮಾಡಿದರು. ಈರಮ್ಮ ನಾಗರಾಜು ಸ್ವಾಗತಿಸಿದರೆ ಸಿ. ತಿಪ್ಪೆಸ್ವಾಮಿ ಶರಣು ಸಮರ್ಪಣೆ ಮಾಡಿದರು. ವಚನ ಸುಧಾ ಸಭಾ ನಿರ್ವಹಣೆ ಮಾಡಿದರು. ಶರಣ ಎಸ್.ಎನ್ ಚಂದ್ರಣ್ಣ ಮತ್ತು ಶರಣ ಟಿ. ಮಹಾಂತೇಶ್ ಮತ್ತು ಇನ್ನೂ ಅನೇಕ ದಾಸೋಹಿಗಳು ಪ್ರಸಾದ (ಊಟ) ದಾಸೋಹದ ವ್ಯವಸ್ಥೆ ಮಾಡಿದ್ದರು. ಜನರು ಅಸಂಖ್ಯಾತರಾಗಿ ಭಾಗವಹಿಸಿ ಸಂತೋಷಪಟ್ಟರು. □□



ಚಿತ್ರದುರ್ಗ ನಗರದಲ್ಲಿ ಭಾನುವಾರ ದಿ.26-11-2000ರಂದು ಲಿಂಗಾಯತ ಧರ್ಮೀಯರ ಸಮಾವೇಶ ಎಡದಿಂದ ಬಲಕ್ಕೆ ಶರಣ. ವೀರಣ್ಣ ಹೊಲ್ತಕ್ಕಿ ಶರಣ. ಬಿ.ವಿ. ಸತ್ಯನಾರಾಯಣಶೆಟ್ಟರು, ಪೂಜ್ಯ ಶ್ರೀ ಮಾತಾಜಿ, ಪೂಜ್ಯ ಶ್ರೀ ಮಾತೆ ಗಂಗಾದೇವಿ, ಪೂಜ್ಯ ಶ್ರೀ ಬಸವಕುಮಾರ ಸ್ವಾಮಿಗಳು, ಪೂಜ್ಯ ಶ್ರೀ ಚನ್ನಬಸವರಾಜ ಸ್ವಾಮಿಗಳು



ಸಮಾವೇಶ ಉದ್ಘಾಟನೆ ಪೂಜ್ಯ ಮಾತಾಜಿಯವರಿಂದ.
ಎಡದಿಂದ ಬಲಕ್ಕೆ : ಚಿತ್ರದುರ್ಗ ರಾಷ್ಟ್ರೀಯ ಬಸವ ದಳ ಅಧ್ಯಕ್ಷರಾದ ಬಿ.ವಿ.ಸತ್ಯನಾರಾಯಣಶೆಟ್ಟರು, ಪೂಜ್ಯ ಶ್ರೀ ಮಾತಾಜಿ, ಪೂಜ್ಯ ಶ್ರೀ ಮಾತೆ ಗಂಗಾದೇವಿ, ಪೂಜ್ಯ ಶ್ರೀ ಬಸವ ಕುಮಾರ ಸ್ವಾಮಿಗಳು



ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರಿಂದ
ಚಿತ್ರದುರ್ಗದ ಅಕ್ಕನಾಗಲಾಂಬಿಕಾ ಮಹಿಳಾಗಣ ಉದ್ಘಾಟನೆ

ಚಿತ್ರದುರ್ಗ ನಗರದಲ್ಲಿ ದಿ. 27-11-2000ರಂದು ಕರೆದ ಪತ್ರಿಕಾ ಗೋಷ್ಠಿಯಲ್ಲಿ ಬಿಡುಗಡೆ ಮಾಡಿದ ಹೇಳಿಕೆ.

1. ಲಿಂಗಾಯತರು ವೀರಶೈವ ಪದ ನಿಷೇಧಿಸಬೇಕು.
2. ಆಕ್ರಮಣಶೀಲತೆ ಧರ್ಮಕ್ಕೆ ಸಲ್ಲದ ನಡತೆ

- ಜಗದ್ಗುರು ಮಾತೆ ಮಹಾದೇವಿ

ಲಿಂಗಾಯತವು 12ನೆಯ ಶತಮಾನದಲ್ಲಿ ಕ್ರಾಂತಿ ಪುರುಷ ಬಸವಣ್ಣನವರಿಂದ ಸ್ಥಾಪಿತವಾದ ಸ್ವತಂತ್ರ ಸ್ವಾವಲಂಬಿ, ಪ್ರಗತಿಪರ, ಪರಿಪೂರ್ಣ ಧರ್ಮ. ಇದಕ್ಕೆ ಆಧಾರ ಬಸವಾದಿ ಪ್ರಮಥರು ಮತ್ತು ಅವರ ಸಮಕಾಲೀನರು ಕೊಟ್ಟ ವಚನ ಸಾಹಿತ್ಯ. ವೀರಶೈವವು ಬಸವ ಪೂರ್ವದ ಒಂದು ಶೈವ ಪಂಥ. ಅಲ್ಲಿ ವರ್ಣಾಶ್ರಮ ವ್ಯವಸ್ಥೆ ಇದೆ. ಅದಕ್ಕೆ ವೇದ ಆಗಮ ಪುರಾಣಗಳೇ ಆಧಾರ. ವಿಶ್ವಗುರು ಬಸವಣ್ಣನವರು ಗೋಳಾಕಾರದ ಇಷ್ಟಲಿಂಗದ ಪರಿಕಲ್ಪನೆ ನೀಡಿ ಸಮಾನತೆಯನ್ನು ಪ್ರತಿಪಾದನೆ ಮಾಡುವ ಗಣಧರ್ಮವೊಂದನ್ನು ಕೊಟ್ಟಾಗ ತಮಿಳುನಾಡು, ಆಂಧ್ರಗಳ ಕೆಲವು ಭಾಗಗಳಲ್ಲಿದ್ದ ವೀರಶೈವ ಪಂಥೀಯರು ಬಂದು ಸೇರಿದರು. ಆದರೆ ಲಿಂಗಾಯತವು ವೀರಶೈವದಿಂದ ಪೂರ್ತಿ ಬೇರೆಯೇ ಆದ ಸ್ವತಂತ್ರ ಧರ್ಮ. ಆದ್ದರಿಂದ ಲಿಂಗಾಯತ ಧರ್ಮೀಯರು ತಮ್ಮನ್ನು ವೀರಶೈವರೆಂದು ಕರೆದುಕೊಳ್ಳುವುದನ್ನು ಕೈಬಿಡಬೇಕು. ವೀರಶೈವ ಪದವನ್ನು ನಿಷೇಧಿಸಿ, ಮುಂಬರುವ 2001ನೆಯ ಇಸವಿಯ ಜನಗಣತಿಯ ಮತ ಪ್ರಶ್ನೆಗೆ ಉತ್ತರವಾಗಿ ಕೇವಲ ಲಿಂಗಾಯತ ಎಂದು ಮಾತ್ರ ಬರೆಸಬೇಕು. ಈ ತಿಳುವಳಿಕೆ ನೀಡಲು ರಾಜ್ಯದಾದ್ಯಂತ ಲಿಂಗಾಯತ ಧರ್ಮೀಯರ ಸಮಾವೇಶಗಳನ್ನು ನಡೆಸಲಾಗುತ್ತಿದೆ !'' ಎಂದು ಕೂಡಲ ಸಂಗಮದ ಬಸವ ಧರ್ಮ ಪೀಠದ ಅಧ್ಯಕ್ಷರಾದ ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರು ನುಡಿದರು.

ಚಿತ್ರದುರ್ಗ ನಗರದಲ್ಲಿ ಇಂದು ಕರೆದಿದ್ದ ಪತ್ರಿಕಾ ಗೋಷ್ಠಿಯನ್ನು ಉದ್ದೇಶಿಸಿ ಮಾತನಾಡುತ್ತಿದ್ದ ಮಾತೆ ಮಹಾದೇವಿಯವರು ''ಲಿಂಗಾಯತ ಧರ್ಮವೂ ಹಿಂದು ಧರ್ಮದೊಳಗಣ ಒಂದು ಜಾತಿ ಎಂಬ ತಪ್ಪು ಕಲ್ಪನೆ ಅನೇಕರಿಗಿದೆ. ಲಿಂಗಾಯತ ಧರ್ಮಕ್ಕೆ ತನ್ನದೇ ಆದ ಸ್ಥಾಪಕರಿದ್ದಾರೆ, ಸ್ವತಂತ್ರವಾದ ಸಾಹಿತ್ಯವಿದೆ. ಜಾತಿಗೊಂದು ದೀಕ್ಷೆ, ಧರ್ಮಸಂಸ್ಕಾರವಿರದು. ಲಿಂಗಾಯತ ಧರ್ಮಕ್ಕೆ ವಿಶಿಷ್ಟ ಧಾರ್ಮಿಕ ಸಂಸ್ಕಾರವಿದೆ. ಜಾತಿ ಮತ ಪಂಥ ಲಿಂಗಭೇದವಿಲ್ಲದೆ ಲಿಂಗಾಯತ ಧರ್ಮವು ಯಾರಿಗೆ ಬೇಕಾದರೂ ದೀಕ್ಷಾ ಸಂಸ್ಕಾರವನ್ನು ನೀಡುತ್ತದೆ. ಬೌದ್ಧ, ಜೈನ, ಸಿಖ್, ಕ್ರೈಸ್ತ, ಇಸ್ಲಾಂ ಧರ್ಮಗಳಂತೆ ಲಿಂಗಾಯತವೂ ಸ್ವತಂತ್ರ ಧರ್ಮದ ಸ್ಥಾನವನ್ನು ಸಂವಿಧಾನಾತ್ಮಕವಾಗಿ ಪಡೆಯಲು ಅರ್ಹವಾಗಿದೆ. ವೀರಶೈವ ಮತವು ಅಂಥ ಮಾನ್ಯತೆ ಹೊಂದಲು ಅಗತ್ಯವಿರುವ ಲಕ್ಷಣಗಳನ್ನು ಹೊಂದಿಲ್ಲ'' ಎಂಬುದನ್ನು ಪೂಜ್ಯ ಶ್ರೀ ಮಾತೆ ಮಹಾದೇವಿಯವರು ಸ್ಪಷ್ಟಪಡಿಸಿದರು.

ಲಿಂಗದೇವ ವಚನಾಂಕಿತ ದಾರ್ಶನಿಕ ಮಹತ್ವ ಉಳ್ಳದ್ದು

ಗುರು ಬಸವಣ್ಣನವರು ಲಿಂಗೈಕ್ಯರಾದ 800 ವರ್ಷಗಳ ಸ್ಮರಣಾರ್ಥ ಪ್ರಕಟಿಸಿದ ಬಸವ ವಚನ ದೀಪ್ತಿ ಎಂಬ ಬಸವಣ್ಣನವರ ವಚನಗಳ ಗ್ರಂಥದ ಕೆಲವು ವಚನಗಳಲ್ಲಿ ''ಕೂಡಲ ಸಂಗಮದೇವ'' ಮುದ್ರಿಕೆಯ ಬದಲಾಗಿ ''ಲಿಂಗದೇವ'' ಮುದ್ರಿಕೆ ಅಳವಡಿಸಲಾಗಿದೆ. ಕೆಲವರು ಇದನ್ನೇ ನೆಪವಾಗಿಟ್ಟುಕೊಂಡು ಸಮಾಜದಲ್ಲಿ ಗೊಂದಲವನ್ನು ಸೃಷ್ಟಿಸಲು ಯತ್ನಿಸಿದರು. ಆದರೆ ಇದೀಗ ಸತ್ಯದ ಅರಿವಾದ ಬಳಿಕ ಗೊಂದಲವು ಪರಿಹಾರವಾಗುತ್ತಿದೆ. ಪ್ರತಿಯೊಂದು ಧರ್ಮವೂ ದೇವರನ್ನು ತನ್ನದೇ ಆದ ಪರಿಭಾಷೆಯಲ್ಲಿ

ಗುರುತಿಸಿ, ಕರೆದಿದೆ. ಯಾವ ಚೈತನ್ಯವನ್ನು ವೇದಾಂತಿಗಳು ಪರಬ್ರಹ್ಮನೆಂದು, ಆಗಮಿಕರು ಪರಶಿವನೆಂದು, ಮುಸಲೀಮರು ಅಲ್ಲಹ ಎಂದು ಕರೆದಿದ್ದಾರೋ ಅದೇ ಚೇತನವನ್ನು ಲಿಂಗದೇವ ಎಂಬುದಾಗಿ ಬಸವಣ್ಣನವರು ಕರೆದಿದ್ದಾರೆ. ಈ ಪವಿತ್ರವಾದ ಹೆಸರು ನನ್ನ ಕಲ್ಪನೆಯಲ್ಲ ಬಸವಣ್ಣನವರ ಶ್ರೇಷ್ಠ ಕೊಡುಗೆ. ಕೂಡಲ ಸಂಗಮದ ದೇವಾಲಯದಲ್ಲಿ ಅರ್ಚಕರಾಗಿದ್ದ ಬಸವಣ್ಣನವರು ಬಾಲ್ಯದಲ್ಲಿ ಸಂಗಮನಾಥನನ್ನು ಪೂಜಿಸಿದರೂ ನವ ಧರ್ಮ ದ್ರಷ್ಟಾರರಾದ ಬಳಿಕ ಕಡ್ಡಾಯವಾದ ಏಕದೇವೋಪಾಸನೆಯನ್ನು ಬೋಧಿಸಿದರು. ಅದಕ್ಕಾಗಿ ನಾನು ಬಸವಣ್ಣನವರು ಸಾಕ್ಷಾತ್ಕಾರ ಪೂರ್ವದಲ್ಲಿ ಬರೆದ ವಚನಗಳಲ್ಲಿ, ಶಿವನ ಕಲ್ಪನೆ ಇರುವಲ್ಲಿ ಕೂಡಲ ಸಂಗಮದೇವ ಎಂಬುದನ್ನು ಉಳಿಸಿಕೊಂಡು ನಿರಾಕಾರ ಪರಮಾತ್ಮನ ವರ್ಣನೆ ಬಂದಲ್ಲಿ ಲಿಂಗದೇವ ಎಂಬುದನ್ನು ಬಳಸಿದ್ದೇನೆ. ಲಿಂಗಾಯತ ಧರ್ಮೀಯರು ನಂಬುವುದು, ಪೂಜಿಸುವುದು ಲಿಂಗದೇವನನ್ನೇ ಹೊರತು ಬೇರೆನನನ್ನೂ ಅಲ್ಲ. ಹೀಗಾಗಿ ಲಿಂಗದೇವ ಪದವು ದಾರ್ಶನಿಕ ಸತ್ಯವನ್ನು ಒಳಗೊಂಡಿದೆ. ಎಂಬುದನ್ನು ಹೆಮ್ಮೆಯಿಂದ ಹೇಳಬಹುದು.'' ಎಂದು ಪೂಜ್ಯ ಶ್ರೀ ಮಾತೆ ಮಹಾದೇವಿಯವರು ವಚನಾಂಕಿತ ಬದಲಾವಣೆಯನ್ನು ಸಮರ್ಥಿಸಿಕೊಂಡರು.

ಮುರುಘಾಮಠದ ಆಕ್ರಮಣಶೀಲತೆ ಧರ್ಮಕ್ಕೆ ಸಲ್ಲದ ನಡತೆ

''ಲಿಂಗದೇವ'' ದಂತಹ ತಾತ್ತ್ವಿಕ, ದಾರ್ಶನಿಕ ಸತ್ಯವನ್ನು ವಿರೋಧಿಸುವ ಮುರುಘಾಮಠದ ಶ್ರೀಗಳು ಧರ್ಮದ ಸೋಗಿನಲ್ಲಿ ಮಾಡುತ್ತಿರುವ ದೌರ್ಜನ್ಯ ಆಕ್ರಮಗಳು ನ್ಯಾಯ ಸಮ್ಮತವೆ ?'' ಎಂದು ಪ್ರಶ್ನಿಸಿದ ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರು ಚಿತ್ರದುರ್ಗ ನಗರದಲ್ಲಿ ಕಟ್ಟಿದ ಬಸವ ಮಂಟಪದ ಸ್ಥಿತಿ ವಿವರಿಸಿದರು. ರಾಷ್ಟ್ರೀಯ ಬಸವ ದಳ ಅಧಿಕೃತ ಟ್ರಸ್ಟ್ ಚಿತ್ರದುರ್ಗ ಮತ್ತು ಸುತ್ತಲಿನ ದಾನಿಗಳಿಂದ ಸಂಗ್ರಹಿಸಿದ ಹಣವನ್ನು ಬಳಸಿ ಸುಂದರವಾದ ಬಸವ ಮಂಟಪವನ್ನು ನಿರ್ಮಿಸಿತು. ಮಂಟಪದಲ್ಲಿ ನಡೆಯುತ್ತಿದ್ದ ಸಾಮೂಹಿಕ ಪ್ರಾರ್ಥನೆ, ದಾಸೋಹ, ಮಾಸಿಕ ಕಾರ್ಯಕ್ರಮಗಳು ಎಷ್ಟು ಜನಪ್ರಿಯತೆ ಗಳಿಸಿದ್ದವೆಂದರೆ ಕೆಲವೇ ತಿಂಗಳಲ್ಲಿ ಸುತ್ತಲಿನ ಜನರು ಕಿಕ್ಕಿರಿದು ಸೇರಿ ಧಾರ್ಮಿಕ ಚಟುವಟಿಕೆಗಳಲ್ಲಿ ಭಾಗಿಗಳಾಗುತ್ತಿದ್ದರು. ಆದರೆ ಬೃಹನ್ಮಠದವರು ಒಂದು ದಿನ ಪ್ರಾರ್ಥನೆ ಮಾಡುತ್ತಿದ್ದವರ ಮೇಲೆ ಹಲ್ಲೆ ಮಾಡಲು ಪ್ರಚೋದಿಸಿ ದೌರ್ಜನ್ಯದಿಂದ ಬಸವ ಮಂಟಪವನ್ನು ವಶಪಡಿಸಿಕೊಂಡು ಲಿಂಗಾಯತ ಧರ್ಮಕ್ಕೆ ಸಂಬಂಧಿಸಿದ ಪೂಜೆ-ಪ್ರಾರ್ಥನೆ ನಡೆಸದೆ ತಮ್ಮನ್ನು ಓಲೈಸುವ ಕೆಲವು ಜನರನ್ನಿಟ್ಟು ಬಸವ ಮಂಟಪವನ್ನು ಬಾಡಿಗೆ ಕೊಡುವ ಕೆಲಸ ನಡೆಸಿದ್ದಾರೆ. ಇದು ಧಾರ್ಮಿಕ ಜನರು ಮಾಡುವ ಕೆಲಸವೆ ?'' ಎಂದು ಪ್ರಶ್ನಿಸಿದರು.

''ಇದೊಂದೇ ಅಲ್ಲ, ಬೆಂಗಳೂರಿನ ಮಧ್ಯ ಭಾಗದಲ್ಲಿರುವ ಸರ್ಪಭೂಷಣ ಮಠವನ್ನು ಇದೇ ರೀತಿ ವಶಪಡಿಸಿಕೊಂಡಿದ್ದಾರೆ. ಬಸವ ಕಲ್ಯಾಣದ ಅನುಭವ ಮಂಟಪದ ಮೇಲೂ ಆಗಲೇ ಇವರ ದೃಷ್ಟಿ ಬಿದ್ದಿದ್ದು ಮಠಾಧೀಶರ ಇಂಥಾ ಆಕ್ರಮಣಕಾರಿ ಪ್ರವೃತ್ತಿಯಿಂದ ಜನರು ಧರ್ಮದಲ್ಲೇ ಶ್ರದ್ಧೆ ಕಳೆದುಕೊಳ್ಳುವಂತಾಗುತ್ತಿದೆ.'' ಎಂದು ವಿಷಾದಿಸಿದರು. ಚಿತ್ರದುರ್ಗದಲ್ಲೇ ಹುಟ್ಟಿ ಬೆಳೆದ ನಮ್ಮ ಮನೆತನ ಮೊದಲಿನಿಂದಲೂ ಬೃಹನ್ಮಠದ ಬಗ್ಗೆ ಅಭಿಮಾನ ಹೊಂದಿತ್ತು. ಲಿಂಗೈಕ್ಯ ಜಯದೇವ ಜಗದ್ಗುರುಗಳ ಕಾಲದಲ್ಲಿ ಅತ್ಯುನ್ನತ ಸ್ಥಾನಕ್ಕೆ ಏರಿದ ಮುರುಘಾಮಠದ ಕೀರ್ತಿ ಈಗಿನ ವ್ಯವಹಾರಗಳಿಂದ ಪಾತಾಳಕ್ಕೆ ಇಳಿಯುತ್ತಿರುವುದು ಜನಜನಿತವಾಗುತ್ತಿದ್ದರೂ, ಏಕೆ ಶ್ರೀಗಳಲ್ಲಿ ತಿಳುವಳಿಕೆ ಮೂಡುತ್ತಿಲ್ಲ ಎಂಬುದು ಆಶ್ಚರ್ಯಕರವಾಗಿದೆ.

ಈಗಿನ ಕಾಲದಲ್ಲಿ ಲೌಕಿಕ ಆಕರ್ಷಣೆ ವಿಪರೀತವಾಗುತ್ತಿರುವಾಗ ಜನರು ಧರ್ಮದ ಬಗ್ಗೆ ಆಸಕ್ತಿ ವಹಿಸುವುದೇ ಕಷ್ಟಸಾಧ್ಯ. ನಮ್ಮ ಸಂಸ್ಥೆಯ ಮಹಿಳಾ ಧರ್ಮ ಪ್ರಚಾರಕರಾದ ಪೂಜ್ಯ ಶ್ರೀ ಜಗದ್ಗುರು ಮಾತೆ

ಗಂಗಾದೇವಿಯವರು ದಾವಣಗೆರೆಯ ಸರ್ಕಾರಿ ಪ್ರೌಢಶಾಲಾ ಮೈದಾನದಲ್ಲಿ 55 ದಿವಸಗಳ ಕಾಲ ವಿಶ್ವಧರ್ಮ ಪ್ರವಚನ ಮಾಡಿ ಸಹಸ್ರಾರು ಜನರನ್ನು ಆಕರ್ಷಿಸುವಾಗ ಪ್ರವಚನದ ಉತ್ಕರ್ಷ ಸಹಿಸದೆ ಗೂಂಡಾ ಜನರನ್ನು ಬಿಟ್ಟು ಮಹಿಳಾ ಗುರುಗಳು ಮತ್ತು ಸಾಧಕಿಯರ ಮೇಲೆ ಹಲ್ಲೆ ಮಾಡಲಾಯಿತು. ಹಣದ ಪ್ರಭಾವದಿಂದ ಕಾನೂನನ್ನು ಕೊಳ್ಳಬಹುದು ಎಂಬ ನಂಬಿಕೆ ಬೃಹನ್ಮಠದವರದ್ದು ಇರಬಹುದು. ಆದರೆ ಜಗತ್ತಿನ ನ್ಯಾಯಾಧೀಶನಾದ ದೇವರ ಕಣ್ಣನ್ನು ತಪ್ಪಿಸಲು ಸಾಧ್ಯವಿಲ್ಲ ಎಂಬುದು ಮುರುಘಾಮಠದವರಿಗೆ ಏಕೆ ಮನವರಿಕೆಯಾಗುತ್ತಿಲ್ಲವೋ ? ಆದ್ದರಿಂದ ಬೃಹನ್ಮಠದ ಶ್ರೀಗಳು ಬಸವ ತತ್ತ್ವವನ್ನು ಬೋಧೆ ಮಾಡುವುದು ಅಸಂಬದ್ಧವೂ, ಹಾಸ್ಯಾಸ್ಪದವೂ ಆಗಿ ತೋರುತ್ತಿದೆ. ಈಗಲೂ ಕಾಲ ಮಿಂಚಿಲ್ಲ; ಕಂಡವರ ಮಠಗಳನ್ನು ಕಬಳಿಸಿ ಅಲ್ಲಿ ನಡೆಯುತ್ತಿರುವ ಧಾರ್ಮಿಕ ಚಟುವಟಿಕೆಗಳು ನಿಲ್ಲುವಂತೆ ಮಾಡುವ ಹೀನ ಕಾರ್ಯ ಬಿಟ್ಟು ತಮ್ಮ ಕೈಲಾದ ಒಳ್ಳೆಯ ಕೆಲಸಗಳನ್ನು ಮಾಡಲು ಸೃಷ್ಟಿಕರ್ತ ಲಿಂಗದೇವನು ಅವರಿಗೆ ಸದ್ಬುದ್ಧಿನೀಡಲಿ ಎಂದೇ ನಮ್ಮ ಹಾರೈಕೆ. ಎಂದು ಪೂಜ್ಯ ಶ್ರೀ ಮಾತೆ ಮಹಾದೇವಿಯವರು ನುಡಿದರು.

-ವರದಿ. ಶಿವಕುಮಾರ ಡಾಕುಳಗೆ

ಬೀದರ ನಗರದಲ್ಲಿ ಅಭೂತಪೂರ್ವ ಪ್ರವಚನ ಕಾರ್ಯಕ್ರಮ

ಕರ್ನಾಟಕ ಮಾತೆಯ ಕಿರೀಟದಂತಿರುವ ಬೀದರ ಜಿಲ್ಲೆ ಧರ್ಮಪಿತ ಬಸವಣ್ಣನವರು ಮತ್ತು ಅವರ ಸಮಕಾಲೀನ ಶರಣರಿಂದ ಅಂದಿನಿಂದ ಇಂದಿನವರೆಗೆ ಇನ್ನೂ ಅನೇಕ ಶರಣರು ಶಿವಯೋಗಿಗಳಿಂದ ಪಾವನಗೊಂಡ ಪುಣ್ಯನಾಡು. ಲಿಂಗಾಯತ ಧರ್ಮೀಯರ ಸಮಾವೇಶ, ಬಸವ ತತ್ತ್ವ ತರಬೇತಿ ಕಮ್ಮಟ, ವಿಶ್ವಧರ್ಮ ಪ್ರವಚನ, ಬಸವ ಗುರು ಮೂರ್ತಿಯ ಅಮೃತಶಿಲಾ ಪುತ್ಥಳಿಯ ಪ್ರತಿಷ್ಠಾಪನೆ- ಈ ಬಹುಬಗೆಯ ಕಾರ್ಯಕ್ರಮದಿಂದ ಬೀದರ ನಗರವು ಸುಮಾರು 12 ದಿವಸಗಳಿಂದ ತೇಜಸ್ವಿಯಾಗಿ ಕಂಗೊಳಿಸಿತು.

ಮುಂಬರುವ 2001ನೆಯ ಇಸವಿಯಲ್ಲಿ ನಡೆಯುವ ಜನಗಣತಿಯ ಪ್ರಚಾರಾಂದೋಲನದ ನಿಮಿತ್ತ ಲಿಂಗಾಯತ ಜನಗಣತಿ ಜಾಗರಣ ಸಮಿತಿಯು ಕಾರ್ಯಕ್ರಮವನ್ನು ಹಮ್ಮಿಕೊಂಡು 75 ದಿವಸಗಳಾಗಿದ್ದವು. ಜಗನ್ಮಾತಾ ಅಕ್ಕಮಹಾದೇವಿ ಅನುಭಾವ ಪೀಠದ ದ್ವಿತೀಯ ಮಹಿಳಾ ಜಗದ್ಗುರುಗಳಾದ ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರ ಪ್ರಚಾರ ಕಾರ್ಯಕ್ರಮವನ್ನು 75 ದಿವಸಗಳ ಕಾಲ ನಗರ ಮತ್ತು ಸುತ್ತುಮುತ್ತಿನ ಊರುಗಳಲ್ಲಿ ಏರ್ಪಡಿಸಲಾಗಿದ್ದು ದಿ.14-10-2000ದಂದು ಜಿಲ್ಲಾ ಮಟ್ಟದ ಸಮಾವೇಶವನ್ನು ಏರ್ಪಡಿಸಲಾಗಿದ್ದಿತು. ಬೀದರ ಜಿಲ್ಲೆಯಾದ್ಯಂತ ಮಾತ್ರವಲ್ಲದೆ ಪಕ್ಕದ ಗುಲಬರ್ಗಾ ಜಿಲ್ಲೆ, ಆಂಧ್ರಪ್ರದೇಶದ ಮೇದಕ್ ಜಿಲ್ಲೆ ಹೈದರಾಬಾದ ನಗರ, ಮಹಾರಾಷ್ಟ್ರದ ಉದಗೀರ, ಲಾತೂರ್‌ಗಳಿಂದೆಲ್ಲ ಲಿಂಗಾಯತ ಧರ್ಮಬಂಧುಗಳು ಬಂದು ಭಾಗವಹಿಸಿದ್ದರಿಂದ ಲಿಂಗಾಯತ ಧರ್ಮೀಯರ ಸಮಾವೇಶವು ಅತ್ಯಂತ ಯಶಸ್ವಿಯಾಗಿ ನಡೆಯಿತು..

ಬಸವ ತತ್ತ್ವ ತರಬೇತಿ ಕಮ್ಮಟ

ಬೀದರ ನಗರದ ಅತ್ಯಂತ ಸುಂದರ ಪ್ರದೇಶ ಪಾಪನಾಶಿನಿ ಕ್ಷೇತ್ರ. ನಿಸರ್ಗದತ್ತವಾಗಿ ಹರಿಯುವ ಝುರಿ, ಸುಂದರ ಶಿವಾಲಯದ ಹಿಂದೆ ತಲೆ ಎತ್ತಿ ನಿಂತ ಎತ್ತರವಾದ ಗುಡ್ಡ, ಅದರ ಮೇಲೆ ಬೆಳೆದ ವೃಕ್ಷರಾಶಿ, ಮುಂದೆ ಝುರಿಯಿಂದ ಒಡಗೂಡಿದ ಕೊಳ್ಳ ; ಅದನ್ನು ಮುತ್ತಿದ ಹಸಿರು ವನ ಸದಾ ಬೀಸುವ ತಂಗಾಳಿ ಇಂಥ ಸುಂದರ ಪರಿಸರದ ಮಧ್ಯೆ, 5 ದಿವಸಗಳ ಬಸವ ತತ್ತ್ವ ತರಬೇತಿ ಕಮ್ಮಟ. ಸುಮಾರು 300 ಜನ

ಶಿಬಿರಾರ್ಥಿಗಳು ಶರಣ-ಶರಣೆಯರು ಶಾಲಾ ಮಕ್ಕಳು ಮತ್ತು ಯುವ ವಯಸ್ಸಿನವರು ಕಮ್ಮಟದಲ್ಲಿ ಭಾಗಿಗಳಾದರು. ಪ್ರವಚನ ಜ್ಞಾನವಲ್ಲದೆ ಪ್ರಾಯೋಗಿಕ ತರಬೇತಿ, ತ್ರಾಟಕ ಯೋಗ, ಧಾರ್ಮಿಕ ವಿಧಿ-ವಿಧಾನಗಳ ತರಬೇತಿ ಸಹ ಕೊಡಲಾಯಿತು. ಅನೇಕ ದಾನಿಗಳು ದಾಸೋಹದ ವ್ಯವಸ್ಥೆ ಮಾಡಿದ್ದರು. 5 ದಿವಸಗಳ ಕಾಲ ನಡೆದ ಕಮ್ಮಟವು ದಿ.19-10-2000ದಂದು ಸಮಾಪ್ತಿಯಾಯಿತು.

ವಿಶ್ವಧರ್ಮ ಪ್ರವಚನ


ಪ್ರಥಮ ಮಹಿಳಾ ಜಗದ್ಗುರುಗಳು, ಬಸವ ಧರ್ಮ ಪೀಠದ ಅಧ್ಯಕ್ಷರೂ ಆದ ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರಿಂದ ವಿಶ್ವಧರ್ಮ ಪ್ರವಚನವು ದಿ. 15-10-2000ದಂದು ಪ್ರಾರಂಭವಾಯಿತು. ಅಖಂಡವಾಗಿ, ಅವ್ಯಾಹತವಾಗಿ ಒಂದು ವಾರ ಕಾಲ ನಡೆದು ದಿ.22-10-2000ರಂದು ಮಂಗಲಗೊಳ್ಳಲು 3 ದಿವಸಕಾಲ ವಿಸ್ತರಿಸಲಾಯಿತು. ದಿ. 25-10-2000ದಂದು ಸಂಜೆ ಬಸವೇಶ್ವರ ವೃತ್ತದಲ್ಲಿರುವ ಅಶ್ವಾರೂಢ ಬಸವಣ್ಣನವರ ಪುತ್ಥಳಿಗೆ ಪೂಜ್ಯ ಶ್ರೀ ಮಾತಾಜಿಯವರು ಮಾಲಾರ್ಪಣೆ ಮಾಡಿದ ನಂತರ ಲಿಂಗಾಯತ ಧರ್ಮವು ಸ್ವತಂತ್ರ ಧರ್ಮವೆಂದು ಸಂವಿಧಾನಾತ್ಮಕವಾದ ಮನ್ನಣೆ ಹೊಂದುವವರೆಗೆ ಪ್ರಯತ್ನ ಮಾಡುವುದಾಗಿ ಸಂಕಲ್ಪ ತೊಟ್ಟು ಪ್ರತಿಜ್ಞೆ ಮಾಡಲಾಯಿತು. ಅಲ್ಲಿಂದ ಕೆ.ಇ.ಬಿ. ಹತ್ತಿರದ ಸಭಾ ಮಂಟಪದವರೆಗೆ ಭವ್ಯವಾದ ಮೆರವಣಿಗೆಯಲ್ಲಿ ಪ್ರಥಮ ಮತ್ತು ದ್ವಿತೀಯ ಮಹಿಳಾ ಜಗದ್ಗುರುಗಳವರನ್ನು, ಜಂಗಮ ಮೂರ್ತಿಗಳಾದ ಆಂಧ್ರಪ್ರದೇಶದಲ್ಲಿ ಧರ್ಮಪ್ರಚಾರ ಮಾಡಿ ಆಗಮಿಸಿದ ಪೂಜ್ಯ ಶ್ರೀ ಚನ್ನಬಸವರಾಜ ಸ್ವಾಮಿಗಳನ್ನು ಪೂಜ್ಯ ಶ್ರೀ ಬಸವ ಕುಮಾರ ಸ್ವಾಮಿಗಳನ್ನು, ಪೂಜ್ಯ ಶ್ರೀ ಸಿದ್ಧೇಶ್ವರಾನಂದ ಸ್ವಾಮಿಗಳನ್ನು ಕರೆತರಲಾಯಿತು. ಸಹಸ್ರಾರು ಜನರು ಜಯಘೋಷ, ಮಂತ್ರ ಘೋಷಗಳೊಡನೆ ಮೆರವಣಿಗೆಯಲ್ಲಿ ಪಾಲ್ಗೊಂಡರು. ಅಪೂರ್ವವಾದ ಪರಿಣಾಮವನ್ನು ಬೀರಿದ ಪ್ರವಚನವು ದಿ.25-10-2000ದಂದು ಮುಕ್ತಾಯಗೊಂಡಿತು. ಬೀದರ ನಗರ, ಜಿಲ್ಲೆ ಮಾತ್ರವಲ್ಲ ಪಕ್ಕದ ಮಹಾರಾಷ್ಟ್ರ, ಆಂಧ್ರಗಳಿಂದಲೂ ಸದ್ಭಕ್ತರು ಭಾಗಹಿಸಿದ್ದರು.

ಕೋಳಾರದಲ್ಲಿ ಕಾರ್ಯಕ್ರಮ

ಬೀದರಿಗೆ ಸನಿಹದ ಊರು ಕೋಳಾರ. ಮಹಾಚೈತ್ರ ಎಂಬ ಶರಣ ನಿಂದಕ ಪುಸ್ತಕವು ಗುಲಬರ್ಗಾದ ವಿಶ್ವವಿದ್ಯಾಲಯದಲ್ಲಿ ಪಠ್ಯವಾಗಿದ್ದಾಗ ಅದನ್ನು ನಿಷೇಧಿಸಲು ನಡೆದ ಸಾತ್ವಿಕ ಚಳುವಳಿಯಲ್ಲಿ ಕೋಳಾರ ರಾಷ್ಟ್ರೀಯ ಬಸವ ದಳದವರದ್ದು ಪ್ರಮುಖ ಪಾತ್ರ. ಕಳ್ಳರನ್ನು ಹಿಡಿಯಲಾಗದಾಗ ಆರಕ್ಷಕರು, ಹಿಡಿದು ತಂದವರನ್ನೆ ಕಳ್ಳರನ್ನು ಮಾಡುವಂತೆ ವಿನಾಕಾರಣ ಸಾತ್ತ್ವಿಕ ಚಳುವಳಿಯಲ್ಲಿ ನಿರತರಾದವರನ್ನು ಸುಳ್ಳು ಕೇಸು ಮಾಡಿ ಸತಾಯಿಸಿದ್ದರು. ಸುಮಾರು 5 ವರ್ಷ 7 ತಿಂಗಳು ಕಾಲ ಅಲೆದಾಡಿಸಿದ್ದುಂಟು. ಬೀದರದಲ್ಲಿ ಪ್ರವಚನ ನಡೆದ ಕಾಲದಲ್ಲೇ ಮೊಕದ್ದಮೆ ತೀರ್ಪಾಯಿತು. ರಾಷ್ಟ್ರೀಯ ಬಸವ ದಳದವರು ನಿರ್ದೋಷಿಗಳೆಂದು ತೀರ್ಪಾಗಿ ಮೊಕದ್ದಮೆ ವಜಾ ಆಗಿತ್ತು. ಹೀಗಾಗಿ ಕೋಳಾರದ ಮುಖಂಡರಾದ ಶರಣ. ಅಮೃತಪ್ಪ ಪಾಪಡೆ ಅವರು ಪೂಜ್ಯ ಮಾತಾಜಿಯವರನ್ನು ವೈಭವದಿಂದ ಬರಮಾಡಿಕೊಂಡು ಕಾರ್ಯಕರ್ತರನ್ನು ಅಭಿನಂದಿಸುವ ವಿಶೇಷ ಸಮಾರಂಭವನ್ನು ಇಟ್ಟುಕೊಂಡರು. ಬೀದರ ನಗರದಿಂದ ಸುಮಾರು ಷಟ್ಕೋನ ಧ್ವಜ ಕಟ್ಟಿದ 60 ವಾಹನಗಳಲ್ಲಿ ಶರಣ ಬಂಧುಗಳು ಶಿಸ್ತಾಗಿ ಕುಳಿತು 10 ಕಿ.ಮೀ ದೂರದ ಕೋಳಾರದವರೆಗೆ ಪೂಜ್ಯ ಮಾತಾದ್ವಯರನ್ನು ಭವ್ಯವಾಗಿ ಕರೆದೊಯ್ದರು. ಕಾರ್ಯಕರ್ತರಿಗೆ ವಿಶೇಷ ಪದಕ ನೀಡಿ ಮಾತಾಜಿಯವರು ಆಶೀರ್ವದಿಸಿ, ಅಭಿನಂದಿಸಿದರು. "ಧರ್ಮವು ಕೇವಲ ಭೃತ್ಯಾಚಾರ, ಸೇವೆಯಿಂದ ಮಾತ್ರ ಉಳಿಯದೆ ಗಣಾಚಾರ, ಧೀಮಂತಿಕೆಯಿಂದ ಕೂಡಿದ




ಬಸವೇಶ್ವರ ಪುತ್ಥಳಿಗೆ ಮಾಲಾರ್ಪಣೆ ಮಾಡಿದ ಬಳಿಕ ಪೂಜ್ಯ ಮಾತಾಜಿ ನೆರೆದ ಸಮೂಹಕ್ಕೆ ಪ್ರತಿಜ್ಞಾವಿಧಿ, ಬೋಧಿಸುತ್ತಿರುವುದು. ಕರ್ನಾಟಕ ರಾಜ್ಯ ರಾಷ್ಟ್ರೀಯ ಬಸವ ದಳ ಅಧ್ಯಕ್ಷ, ಶರಣ. ವೀರಣ್ಣ ಕೊರ್ಲ್ಹಳ್ಳಿ, ಬೀದರ ಜಿಲ್ಲಾ ಕಾರ್ಯಾಧ್ಯಕ್ಷರಾದ ಶರಣೆ. ಚಂದ್ರಮ್ಮ ಪಾಟೀಲ್, ಗಾದಗಿ ಪ್ರತಿಜ್ಞಾವಿಧಿಯಲ್ಲಿ ಪಾಲ್ಗೊಂಡರು



ಧರ್ಮಪಿತ ಬಸವಣ್ಣನವರ ಮೂರ್ತಿಯನ್ನು ವಿಧ್ಯುಕ್ತವಾಗಿ ಪ್ರತಿಷ್ಠಾಪಿಸಿ ಆರತಿ ಮಾಡುತ್ತಿರುವ ಪೂಜ್ಯ ಮಾತಾಜಿಯವರು



ಬೀದರ ನಗರದಲ್ಲಿ ವಿಶ್ವಧರ್ಮ ಪ್ರವಚನ ಮುಕ್ತಾಯ ಸಮಾರಂಭಕ್ಕೆ ಮುನ್ನ ಅಲಂಕೃತ ಟ್ರಾಕ್ಟರಿನಲ್ಲಿ [illegible]



ಬಸವ ಗುರು ಮೂರ್ತಿಯ ಪ್ರತಿಷ್ಠಾಪನೆಗಾಗಿ ಆಗಮಿಸುತ್ತಿರುವ ಪೂಜ್ಯರಿಗೆ ಸ್ವಾಗತ



ಪೂಜ್ಯ ಮಾತಾಜಿಯವರನ್ನು ಬೀದರ ಬಸವ ಮಂಟಪದಿಂದ ದಿ. 26-10-2000ದಂದು ಬೀಳ್ಕೊಡುತ್ತಿರುವ ಶರಣ ಬಂಧುಗಳು



ಆಂಧ್ರ ಪ್ರದೇಶದ ಮಹಬೂಬ್ ನಗರದ ರಾಷ್ಟ್ರೀಯ ಬಸವ ದಳದ ಶರಣ. ಕೊಂಡಾ ಬಸವರಾಜ್ ಅವರು ಶಿಕ್ಷಕರ ದಿನಾಚರಣೆಯಂದು ರಾಷ್ಟ್ರಪತಿಯವರಿಂದ ರಾಷ್ಟ್ರಪ್ರಶಸ್ತಿ ಸ್ವೀಕರಿಸುತ್ತಿರುವುದು.

ಧೈರ್ಯದಿಂದ ಉಳಿಯಲು ಸಾಧ್ಯ. ನಿಮ್ಮಲ್ಲಿನ ಧೀಮಂತಿಕೆ, ಒಗ್ಗಟ್ಟು ಮಹಾಚೈತ್ರ ಪಥ್ಯದಿಂದ ರದ್ದಾಗಲು ಕಾರಣ. ಆದ್ದರಿಂದ ನಿಮ್ಮ ಸೇವೆ ಅಭಿನಂದನಾರ್ಹ. ಮಹಾಚೈತ್ರವು ಬಸವಾದಿ ಪ್ರಮಥರನ್ನು ಹೀನವಾಗಿ ನಿಂದಿಸಿದ ಪುಸ್ತಕ. ಶರಣರ ಬಗ್ಗೆ ವಿಕೃತ ಚಿತ್ರಣ ನೀಡುವ ಅದು ಪಠ್ಯವಾಗಲು ಅನರ್ಹವಾದುದು. ಇಂಥದನ್ನು ವಾಪಸ್ಸು ಪಡೆಯಲು ಸರ್ಕಾರ ಒಪ್ಪದಾಗ ಶರಣ ಬಂಧುಗಳು ಮಾಡಿದ ಪ್ರತಿಭಟನೆ ಸರ್ಕಾರವನ್ನು ಮಣಿಸಿತು. ಈ ಚಳುವಳಿಯಲ್ಲಿ ಬೀದರ ಜಿಲ್ಲೆಯವರ, ಕೋಳಾರದ ಕಾರ್ಯಕರ್ತರ ಪಾತ್ರ ಬಹು ಹಿರಿದು'' ಎಂದು ಪೂಜ್ಯ ಮಾತಾಜಿ ಕೊಂಡಾಡಿದರು.

ಬಸವ ಮಂಟಪದಲ್ಲಿ ಮೂರ್ತಿ ಪ್ರತಿಷ್ಠಾಪನೆ

ಬೀದರ ನಗರದ ಬಸವ ಮಂಟಪ ವಿಶಾಲವಾದ, ಸುಂದರ ಕಟ್ಟಡ. ಏಕದೇವೋಪಾಸನೆಯ ಜೊತೆಗೆ ಏಕಗುರೂಪಾಸನೆಯೂ ಅಗತ್ಯ ಎಂದು ಬಸವ ಮಂಟಪಗಳಲ್ಲಿ ಶ್ರೀ ಗುರು ಬಸವಣ್ಣನವರ ಮೂರ್ತಿಯನ್ನು ಪ್ರತಿಷ್ಠಾಪಿಸಲು ನಿರ್ಧರಿಸಿದ ಬಳಿಕ ಈಗಾಗಲೇ ಗೋಕಾಕ್, ಈಚಲಕರಂಜಿ, ಗುಲಬರ್ಗಾ, ಬೆಂಗಳೂರು ಬಸವ ಮಂಟಪಗಳಲ್ಲಿ ಅಮೃತ ಶಿಲಾ ಮೂರ್ತಿಯನ್ನು ಪ್ರತಿಷ್ಠಾಪಿಸಲಾಗಿದೆ. ಬೀದರದ್ದು ಸಿದ್ಧವಾಗಿ ಬಹಳ ದಿನವಾದರೂ ಮೂರ್ತಿಯ ಪ್ರತಿಷ್ಠಾಪನೆಗೆ ಸಮಯವು ಹೊಂದಿಕೆಯಾಗಿರಲಿಲ್ಲ. 2000ದ ಜನವರಿ 9 ರಂದು ದಿನಾಂಕವನ್ನು ಕೇಳಿದ್ದರು. ಶರಣ ಮೇಳ ಹತ್ತಿರವಿದ್ದ ನಿಮಿತ್ತ ದಿನಾಂಕ ಕೊಡಲು ಆಗಿರಲಿಲ್ಲ. ಮುಂದೆ ಬಸವ ಜಯಂತಿಯಂದು ಮಾಡಬೇಕೆಂದಿದ್ದರು. ಅಂದು ಬೆಂಗಳೂರು ಬಸವ ಮಂಟಪದಲ್ಲಿ ಮೂರ್ತಿಯ ಪ್ರತಿಷ್ಠಾಪನೆ ಇದ್ದುದರಿಂದ ಪೂಜ್ಯ ಮಾತಾಜಿಯವರು ಲಭ್ಯವಾಗಲಿಲ್ಲ. ದಿ. 26-10-2000ದಂದು ಶಿವಶರಣಪ್ಪ ಪಾಟೀಲರ ಮನೆಯಲ್ಲಿ ಪೂಜೆ ಪೂರೈಸಿದ ಪೂಜ್ಯ ಮಾತಾಜಿಯವರನ್ನು ಅನೇಕ ಶರಣರು ಗೌರವ ಪೂರ್ವಕವಾಗಿ ಬಸವ ಮಂಟಪಕ್ಕೆ ಕರೆತಂದರು. ಮುಚ್ಚಿದ್ದ ಪ್ಲಾಸ್ಟಿಕ್ ಆವರಣವನ್ನು ಕಳಚಿ, ಶುದ್ಧ ನೀರಿನಿಂದ ಮಜ್ಜನ ಮಾಡಿ, ವಿಧ್ಯುಕ್ತವಾಗಿ ಪೂಜೆ ನೆರವೇರಿಸಿ ಶ್ರೀ ಮೂರ್ತಿಗೆ ಚಿತ್ಕಳಾಧಾರಣೆಯನ್ನು ಪೂಜ್ಯ ಮಾತಾಜಿ ನೆರವೇರಿಸಿದಾಗ ನೆರೆದಿದ್ದ ಶರಣರ ಜಯಘೋಷ ಹರ್ಷೋದ್ಗಾರಗಳಿಂದ ಮುಗಿಲು ಮುಟ್ಟಿತು. ಪೂಜೆ, ಪುಷ್ಪವೃಷ್ಟಿ, ಆರತಿಗಳಿಂದ ತೊಳಗಿ ಬೆಳಗಿನ ಬಸಸವ ಗುರು ಮೂರ್ತಿಯನ್ನು ಶರಣರು ಕಣ್ತುಂಬಾ ನೋಡಿ ಹರ್ಷಪುಳಕಿತರಾದರು. ಪ್ರತಿಷ್ಠಾಪನೆಯ ನಂತರ ಬಸವ ಮಂಟಪದಲ್ಲಿ ಸುಮಾರು 25 ವರ್ಷಗಳಿಗೂ ಹೆಚ್ಚು ಕಾಲ ನಿಷ್ಠೆಯಿಂದ ಸೇವೆ ಸಲ್ಲಿಸುತ್ತಲಿರುವ ಪೂಜ್ಯ ಶ್ರೀ ಚೆನ್ನಯ್ಯ ಸ್ವಾಮಿಯವರನ್ನು ಶಾಲು ಹೊದ್ದಿಸಿ, ಸತ್ಕರಿಸಿ ನಿಷ್ಠೆಯಿಂದ ನಿತ್ಯವೂ ಪೂಜಿಸುವಂತೆ ಪೂಜ್ಯ ಮಾತಾಜಿ ಸೂಚಿಸಿದರು.

ಈವರೆಗೆ ಕೇವಲ ಪ್ರಾರ್ಥನಾ ಮಂಟಪವಾಗಿದ್ದ ಬಸವ ಮಂಟಪ ಈಗ ಪೂಜಾ ಮಂಟಪವೂ ಆದುದು ಶರಣ ಬಂಧುಗಳನ್ನು ಸಂತಸದಿಂದ ಬೀಗುವಂತೆ ಮಾಡಿತು. ಅಂದಿನಿಂದ ಇಂದಿನವರೆಗೆ ನಿತ್ಯವೂ ಶರಣ ಬಂಧುಗಳು ನೂರಾರು ಜನ ದಿನ ನಿತ್ಯ ಪೂಜೆಯನ್ನು ಸಲ್ಲಿಸುತ್ತಿದ್ದಾರೆ. ಬೀದರಿನ ಶರಣರು ಅಂದು ಬಸವ ಮಂಟಪದಿಂದ ಕೋಳಾರಕ್ಕೆ, ಮರುದಿನ ಬೆಂಗಳೂರಿಗೆ ಹೊರಟ ಪೂಜ್ಯ ಮಾತಾಜಿಯವರಿಗೆ ಭವ್ಯವಾದ ಬೀಳ್ಕೊಡುಗೆಯನ್ನು ನೀಡಿದರು.

-ಶಿವಕುಮಾರ ಡಾಕುಳಗೆ

ಉಡುಗೊರೆಯಾಗಿ ಕಲ್ಯಾಣ ಕಿರಣ

ನಿಮ್ಮ ಆತ್ಮೀಯರುದ ಪರಿಚಿತರು, ಬಂಧು ಮಿತ್ರರಿಗೆ, ಕಲ್ಯಾಣ ಕಿರಣ ಮಾಸ ಪತ್ರಿಕೆಯನ್ನು ಉಡುಗೊರೆಯಾಗಿ ಕಳಿಸಿರಿ. ಅವರಿಗಾಗಿ ಮಾಸಿಕ ಚಂದಾ ರೂ. 50. ಆಜೀವ ಸದಸ್ಯತ್ವ 500 ರೂ. ತುಂಬಿದರೆ ನೀವು ಕೊಟ್ಟ ವಿಳಾಸದಾರರಿಗೆ ನಿಮ್ಮ ಉಡುಗೊರೆಯಾಗಿ ಕಲ್ಯಾಣ ಕಿರಣ ಕಳಿಸಲಾಗುವುದು.

ಸಂಪಾದಕೀಯ 2 : ವೀರಶೈವ ಮಹಾಸಭೆ ಎಂಬ ಹುಚ್ಚು ಕುದುರೆ

ಜನಗಣತಿ ಹತ್ತಿರ ಬರುತ್ತಿದ್ದಂತೆಯೇ ವೀರಶೈವ ಮಹಾಸಭೆ ಎಂಬ ಕುದುರೆಗೆ ಹುಚ್ಚು ಜಾಸ್ತಿಯಾಗಿ ಅತ್ತ ಇತ್ತ ಧೌಡಾಯಿಸುತ್ತಲಿದೆ. ಜೊತೆಗೆ ಸಿಕ್ಕ-ಸಿಕ್ಕವರನ್ನು ಕಚ್ಚುತ್ತಲಿದೆ. ಎಷ್ಟು ಛಲ ತೊಟ್ಟು ತನ್ನ ಸಮಾಜಕ್ಕೆ ಅನ್ಯಾಯ ಮಾಡುತ್ತಲಿದೆಯಲ್ಲಾ ಎಂದು ದುಃಖವಾಗುತ್ತಲಿದೆ. ಆದರೆ ಈ ಹುಚ್ಚು ಕುದುರೆಯ ಬೆನ್ನೇರಿರುವವರು, ಇದರ ಬೆನ್ನು ಹತ್ತಿರುವವರು ಲಿಂಗಾಯತರಲ್ಲಿ ಸವರ್ಣೀಯರು, ಮೇಲ್ಜಾತಿಯವರೆಂದು ಬೀಗುವವರು, ಬಸವ ತತ್ತ್ವದ ಗಂಧವೂ ಇಲ್ಲದವರು, ಶ್ರೀಮಂತರು, ಬಲಿಷ್ಠರೂ ಆದ ಮುಂದಾಳುಗಳು ಮತ್ತು ತತ್ತ್ವ ತಿಳಿಯದ ರಾಜಕಾರಣಿಗಳು. ಬಹುಶಃ ಈ ಹುಚ್ಚು ಕುದುರೆಯ ಉದ್ದೇಶ ಬೆನ್ನೇರಿದವರನ್ನು ಗುರಿ ಮುಟ್ಟಿಸುವುದು ಎನ್ನುವುದಕ್ಕಿಂತಲೂ ಕೆಡವಿ, ಕಚ್ಚಿ, ತುಳಿದು ಹಾಕುವುದು. ಇಷ್ಟು ಕಠೋರ ಪದಗಳನ್ನು ನಾನು ಬಳಸುವುದು ಆಧಾರವಿಲ್ಲದೆ ಅಲ್ಲ ; ಸಾಧಾರಪೂರ್ವಕವಾಗಿ-

1. ನಾನು ಬೀದರ್ ಪ್ರವಾಸಕ್ಕೆ ಹೋಗಿದ್ದಾಗ ಬೆಂಗಳೂರಿನಲ್ಲಿ ವೀರಶೈವ ಮಹಾಸಭಾದ ಪ್ರಧಾನ ಕಾರ್ಯದರ್ಶಿ ಶ್ರೀ ಹೆಚ್.ವಿ. ನಾಗೇಂದ್ರಪ್ಪ ಅವರ ಅಭಿನಂದನ ಸಮಾರಂಭವಿತ್ತು. ಸ್ವತಃ ನಾಗೇಂದ್ರಪ್ಪ ಅವರ ಮಗಳು ವಾಣಿಯವರು ಬಸವ ಮಂಟಪಕ್ಕೆ ಬಂದು ಆಹ್ವಾನ ಪತ್ರವನ್ನು ಕೊಟ್ಟು ಆಹ್ವಾನಿಸಿ ಹೋಗಿದ್ದರು ಎಂದು ಶರಣ. ಶ್ರೀಕಂಠಕುಮಾರ್ ಅವರು ಒಂದು ಬಸವಗುರುಭಾವಚಿತ್ರದೊಡನೆ ಹೋಗಿ, ಶ್ರೀ ನಾಗೇಂದ್ರಪ್ಪನವರಿಗೆ ಶುಭವನ್ನು ಕೋರಿದ್ದಾರೆ. ಯಾವುದೇ ಸಭೆ-ಸಮಾರಂಭ, ಮದುವೆ ಮನೆ ಮುಂತಾದ ಕಡೆಗೆ ಹೋದರೂ ಕರಪತ್ರಗಳನ್ನು ನಮ್ಮವರು ಹಂಚುತ್ತಾರೆ. ಇದನ್ನು ಎಲ್ಲರೂ ಬಲ್ಲರು. ''ನಾಯಿಗಳಿವೆ ಎಚ್ಚರಿಕೆ'' ಎಂಬ ಬೋರ್ಡ್ ತಗುಲಿ ಹಾಕಿದ ಮನೆಯ ದ್ವಾರ ನೋಡುತ್ತಲೇ ವ್ಯವಹಾರ ಬುದ್ಧಿ ಇದ್ದವರು ಎಚ್ಚರವಾಗಿ ಗಮನಿಸುತ್ತಾರೆ. ವೀರಶೈವವಾದಿಗಳನ್ನು ''ನಮ್ಮವರು'' ಎಂದು ಭ್ರಮಿಸಿದ ವ್ಯವಹಾರ ಜ್ಞಾನವಿಲ್ಲದ ಶ್ರೀಕಂಠಕುಮಾರ ಒಂದೆಡೆ ನಿಂತು ಜನಗಣತಿಯ ಕರಪತ್ರ, ''ಲಿಂಗಾಯತ ಎಂದೇ ಬರೆಸಲು ಕರೆ'' ಎಂಬುದನ್ನು ಹಂಚುತ್ತಿದ್ದರಂತೆ. ಅಷ್ಟರಲ್ಲಿ ವೀರಶೈವ ಮಹಾಸಭೆಯ ಕೆಲವು ಕಾರ್ಯಕರ್ತರು ಹದ್ದುಗಳಂತೆ ಎರಗಿ ಶ್ರೀಕಂಠಕುಮಾರರ ಮೇಲೆ ಹಲ್ಲೆ ಮಾಡಿ, ಮೈಮೇಲಿನ ಬಟ್ಟೆಗಳನ್ನು ಹರಿದುಹಾಕಿ, ಕರಪತ್ರಗಳನ್ನು ಕಿತ್ತುಕೊಂಡು ಹರಿದು ಹಾಕಿದರಂತೆ.

2. ಬೆಳಗಾಂವಿಯಲ್ಲಿ ಜಾಥಾದ ಸಭೆ ನಡೆದಿತ್ತು. ಮಹಾಸಭಾದವರು ಮಾತನಾಡುವಾಗ ಓರ್ವ ವ್ಯಕ್ತಿ (ಅವರಾದಿಯ ಶರಣ. ಅಶೋಕ ಅಳ್ನಾವರ ಎಂಬುವವರು) ಸಭೆಯಲ್ಲಿ ಎದ್ದು ನಿಂತು, ''ವೀರಶೈವ-ಲಿಂಗಾಯತ ಪದಗಳನ್ನು ಸಮಾನಾರ್ಥದಲ್ಲಿ ಬಳಸಬೇಡಿರಿ. ವೀರಶೈವ ಒಂದು ಧರ್ಮವೆ? ಅಲ್ಲ, ಅದೊಂದು ಸಪ್ತಶೈವಗಳಲ್ಲಿ ಒಂದಾದ ಪಂಥ. ಅದರ ಸ್ಥಾಪಕರು ಯಾರು ? ಎಂದು ಕೇಳಿದಾಗ ನಾಗನೂರು ಶ್ರೀಗಳು, ''ನೀವೇ ಬಂದು ಹೇಳಿರಿ'' ಎಂದರಂತೆ. ವೇದಿಕೆಗೆ ಹೋಗಬೇಕು ಎಂದು ಆ ವ್ಯಕ್ತಿಯು ಹೋಗುತ್ತಿರುವಾಗ ಎಂಟು ಹತ್ತು ಜನ ಕಾರ್ಯಕರ್ತರು ನುಗ್ಗಿ ಬಂದು ಅಶೋಕ್ ಅವರನ್ನು ಹಿಗ್ಗಾ ಮುಗ್ಗಾ ಥಳಿಸ ತೊಡಗಿದರಂತೆ. ಅಷ್ಟರಲ್ಲಿ ಪೋಲೀಸರು ಬಂದು ರಕ್ಷಿಸಿ ಕರೆದೊಯ್ದರಂತೆ.

3. ಶ್ರೀ ಚಿದಾನಂದ ಮೂರ್ತಿಯವರು ವೀರಶೈವರು ಹಿಂದುಗಳು ಎಂದು ದೃಢವಾಗಿ ಪ್ರತಿಪಾದಿಸುತ್ತಿರುವರು. ಸುಮ್ಮಸುಮ್ಮನೆ ವೀರಶೈವದ ಜೊತೆ ಲಿಂಗಾಯತವನ್ನು ( ) ಕಂಸಿನಲ್ಲಿ ಹಾಕಿ, ಎರಡೂ ಪದಗಳನ್ನೂ ಸಮೀಕರಿಸುವ ಪ್ರಮಾದವನ್ನು ಚಿ.ಮೂ. ಮಾಡುತ್ತಿರುವರಾದರೂ ವೇದಾಗಮ ಶ್ರುತಿ ಪುರಾಣದ ಮೇಲೆ ಆಧಾರಿತವಾದ ವೀರಶೈವವು ಹಿಂದು ಧರ್ಮದ ಅವಿಭಾಜ್ಯ ಅಂಗ ಎಂಬಲ್ಲಿ ಸತ್ಯವೊಂದನ್ನು ಪ್ರತಿಪಾದಿಸುತ್ತಿದ್ದಾರೆ.

ಇದಕ್ಕಾಗಿ ಶ್ರೀ ಡಾ. ಚಿದಾನಂದ ಮೂರ್ತಿಯವರಿಗೆ ಸಾಮಾಜಿಕ-ಧಾರ್ಮಿಕ ಬಹಿಷ್ಕಾರ ಹಾಕಿ, ವೀರಶೈವ ಮಹಾಸಭೆಯ ಅಧ್ವರ್ಯುಗಳು ನೋಟೀಸ್ ಕಳಿಸಿದ್ದಾರೆಂದು ವದಂತಿ.

ಇಂಥ ಪ್ರಸಂಗಗಳು ಹುಚ್ಚು ಕುದುರೆಯ ಕಡಿತಗಳಲ್ಲದೆ ಮತ್ತೆ ಇನ್ನೇನಿದ್ದಾವು? ಲಿಂಗಾಯತ ಸಮಾಜದಲ್ಲಿ ಬಹಿಷ್ಕಾರ ಎಂಬ ಪದ್ಧತಿಯೇ ಇಲ್ಲ. ವಚನ ಸಾಹಿತ್ಯ ಸಂವಿಧಾನವು ತನ್ನ ಹುಟ್ಟಿನ ಕಾಲದಿಂದಲೂ ಮುಕ್ತ ಚಿಂತನೆಗೆ ಅವಕಾಶ ಮಾಡಿಕೊಟ್ಟಿದೆ. ಎರಡನೆಯದಾಗಿ, ಲಿಂಗಾಯತವು ಒಂದು ಸಮಾಜದ ಅಖಂಡತೆ, ಭದ್ರತೆ ಹೊಂದಿದೆಯೆ ? ಪ್ರತಿಯೊಬ್ಬ ಮುಸ್ಲೀಮ್, ಪ್ರತಿಯೊಬ್ಬ ಸಿಖ್ ತನ್ನ ಧರ್ಮ ಮಂದಿರ; ಸಮಾಜ, ಧರ್ಮಗ್ರಂಥಗಳೊಡನೆ ನಿಕಟವಾದ ಸಂಬಂಧವನ್ನು ಹೊಂದಿರುತ್ತಾನೆ. ಅವುಗಳಿಂದ ಬೇರ್ಪಡಿಸುವ ಬಹಿಷ್ಕಾರವನ್ನು ಹಾಕಿದಾಗ ಅವನು ಮಾನಸಿಕ ಯಾತನೆಗೆ ಒಳಗಾಗುತ್ತಾನೆ. ಹೀಗಾಗಿ ತನ್ನ ವಿಚಾರಗಳಲ್ಲಿ ಅವನು ಬದಲಾವಣೆ, ರಾಜಿ ಮಾಡಿಕೊಳ್ಳಲೂಬಹುದು. ಇಲ್ಲಿ -ಲಿಂಗಾಯತ ಸಮಾಜದಲ್ಲಿ ಹಾಗಲ್ಲ. ಚಿದಾನಂದ ಮೂರ್ತಿಯವರು ಇಷ್ಟಲಿಂಗವನ್ನೇ ಧರಿಸಿಲ್ಲ ; ಇದನ್ನು ಕೇಳುವವರು ಯಾರು ? ಅವರು ತಮ್ಮದೇ ಆದ ಯಾವುದೇ ಮಠ, ಮಂದಿರದೊಂದಿಗೆ ನಿಕಟ ಸಂಬಂಧವನ್ನೆ ಇರಿಸಿಕೊಂಡಿಲ್ಲ. ಸಮಾಜ ಕಟ್ಟುವ ವಿಧಾನವೂ ಗೊತ್ತಿಲ್ಲದೆ ಯಾವುದೋ ಮೂಲೆಯಿಂದ ಯಾವುದಾದರೂ ಉದಾಹರಣೆಯನ್ನು ಹೆಕ್ಕಿ ತೆಗೆದು ಕುರುಡನು ಆನೆ ಮುಟ್ಟಿ ನೋಡಿ ವರ್ಣಿಸಿದಂತೆ ಒಂದು ವಿಷಯವನ್ನು ದಿನ ಪತ್ರಿಕೆಯಲ್ಲಿ ಬರೆದುಬಿಡುತ್ತಾರೆ. ಇವರ ಬರಹ ಧರ್ಮ-ಸಮಾಜಗಳ ಬಗ್ಗೆ ಸಮಗ್ರ ಕಲ್ಪನೆ ಕೊಡುವುದಿಲ್ಲ. ವೀರಶೈವ ಮಹಾಸಭೆಯವರ ಬಹಿಷ್ಕಾರದ ಫತ್ವಾ ಗಾಳಿಯಲ್ಲಿ ಗುಂಡು ಹಾರಿಸಿದಂತೆ; ಹುಸಿಯಾಗಿ ಶಬ್ದ ಮಾಡುವುದು. ಇಂಥ ವಿಲಕ್ಷಣ ಸನ್ನಿವೇಶದಲ್ಲಿ ತಿಪ್ಪೆಯ ಮೇಲೆ ಕುಳಿತ ಓರ್ವ ಹುಚ್ಚ ಕಸದ ತೊಟ್ಟಿಯಿಂದ ಪ್ಲಾಸ್ಟಿಕ್ ಚೀಲವನ್ನು ಆಯ್ದು ಅದನ್ನು ಕಿರೀಟವೆಂದು ಭಾವಿಸಿ ತನ್ನ ತಲೆಯ ಮೇಲೆ ಇಟ್ಟುಕೊಂಡು ''ನಾನು ಚಕ್ರವರ್ತಿ, ನನ್ನ ಮುಂದೆ ನೀನು ಶರಣಾಗು'' ಎಂದು ಡಾ|| ಚಿದಾನಂದ ಮೂರ್ತಿಯವರಿಗೆ ಹೇಳಿದಂತೆ, ಅಖಿಲ ಭಾರತ ವೀರಶೈವ ಮಹಾಸಭೆಯವರ ಈ ಬಹಿಷ್ಕಾರದ ಪ್ರಕ್ರಿಯೆ ನಗೆಪಾಟಲಿನ ಪ್ರಸಂಗ ಮಾತ್ರ.

ಚರ್ಚೆಗೆ ಹೆದರುವವರು.

ವೀರಶೈವ ಪದದ ಅರ್ಥವೇನು ? ಇದರ ಸಂಬಂಧ ಲಿಂಗಾಯತರಿಗೆ ಎತ್ತಣದು ? ಏಕೆ ಇದನ್ನು ಬಳಸಿ ಲಿಂಗಾಯತ ಸಮಾಜಕ್ಕೆ ಅನ್ಯಾಯ ಮಾಡುವಿರಿ ? ಎಂಬ ಪ್ರಶ್ನೆಗಳಿಗೆ ವೀರಶೈವ ಮಹಾಸಭೆಯವರಿಂದ ಉತ್ತರವೇ ಇಲ್ಲ. ಯಾರಾದರೂ ಪ್ರಶ್ನೆ ಕೇಳುತ್ತಲೇ ಸಿಡಿದು ಬೀಳುವರು, ಕೇಳಿದವರನ್ನು ಹಿಗ್ಗಾ-ಮುಗ್ಗಾ ಥಳಿಸುವರು. ''ನೀವು ಸಭೆ ಕರೆಯಿರಿ. ನಾವು ಮಂಡಿಸುತ್ತೇವೆ.'' ಎಂದು ಹೇಳಿದೆವು. ಒಪ್ಪಲಿಲ್ಲ. ''ನಾವು ಕರೆಯುತ್ತೇವೆ. ನೀವು ಬಂದು ಚರ್ಚಿಸಿರಿ'' ಎಂದರೆ ಅದಕ್ಕೂ ಪ್ರತಿಕ್ರಿಯೆ ಇಲ್ಲ.

ಇದು ಧ್ರುವೀಕರಣಕ್ಕೆ ಸಕಾಲ. ವಿಶ್ವಗುರು ಬಸವಣ್ಣ-ಧರ್ಮಗುರು, ವಚನ ಸಾಹಿತ್ಯ-ಧರ್ಮ ಸಂಹಿತೆ, ಕೂಡಲಸಂಗಮ-ಧರ್ಮಕ್ಷೇತ್ರ ಹೀಗೆ ಖಚಿತವಾಗಿ ನಂಬಿದವರು ಒಂದು ಕಡೆ, ಲಿಂಗಾಯತ ಎಂಬ ಶೀರ್ಷಿಕೆಯಡಿಯಲ್ಲಿ. ಈ ಸೂತ್ರ ಒಪ್ಪದೆ ಶಿವೋಪಾಸಕರಾದವರು ಮತ್ತೊಂದೆಡೆ, ವೀರಶೈವದ ಶೀರ್ಷಿಕೆಯಡಿಯಲ್ಲಿ ಇರುವುದು ಬಹಳ ನೆಮ್ಮದಿಯ ಸಂಗತಿ. ಕೂಡಿದ್ದು ಜಗಳವಾಡುವುದು ಬೇಡ, ಬೇರೆ ಬೇರೆ ಇದ್ದು ಸಾಮರಸ್ಯದಿಂದಿರುವುದು ಲೇಸು, ವೀರಶೈವವಾದಿಗಳ ಅಪ್ರಾಮಾಣಿಕತೆ, ದೌರ್ಜನ್ಯ, ಮಿಥ್ಯಾವಾದ ನೋಡಿ ರೋಸಿ ಹೋದುದಾಗಿದೆ. ಅವರು ಲಿಂಗಾಯತ ಧರ್ಮವನ್ನು ಸೇರಿದಾಗಿನಿಂದಲೂ ಹರಿಶ್ಚಂದ್ರನಿಗೆ ವಿಶ್ವಾಮಿತ್ರ-ನಕ್ಷತ್ರಕ ಗಂಟು ಬಿದ್ದಂತೆ, ಅನುಭವ ಮಂಟಪದ

ಕಾಲದಿಂದಲೂ ತೊಂದರೆ ಕೊಡುತ್ತಲೇ ಬಂದಿದ್ದಾರೆ. ಇನ್ನಾದರೂ ಬಸವ ಧರ್ಮೀಯರು ನೆಮ್ಮದಿಯಿಂದ ಬದುಕಬೇಕು ಎಂದರೂ ಬದುಕಲು ಬಿಡುತ್ತಿಲ್ಲ. ಅರ್ಹತೆಯ ಆಧಾರದ ಮೇಲೆ ಅಲ್ಲಮಪ್ರಭುವನ್ನು ಶೂನ್ಯ ಪೀಠಾಧೀಕಾರಿಯಾನ್ನಾಗಿ ಮಾಡಿದಾಗ ಜಾತಿವಾದಿಗಳಾದ ಇವರು ಪ್ರತಿಭಟಿಸಿದುದುಂಟು. ವೀರಶೈವ ಮತವು ಸ್ವತಂತ್ರ ಧರ್ಮದ ಲಕ್ಷಣಗಳನ್ನಾಗಲೀ ಶಕ್ತಿಯನ್ನಾಗಲೀ ಹೊಂದಿಲ್ಲದೆ ಇರುವುದರಿಂದ ಕ್ರಾಂತಿಪುರುಷ ಬಸವಣ್ಣನವರು ಕೊಟ್ಟ ಲಿಂಗಾಯತ ಧರ್ಮದ ಪುಣ್ಯದ ಬಲದಿಂದ ವೀರಶೈವದ ಅಸ್ತಿತ್ವ ಉಳಿಸಿಕೊಳ್ಳಲು ಕೆಲವರು ಯತ್ನಿಸುತ್ತಿದ್ದಾರೆ. ಕರ್ನಾಟಕ ಮತ್ತು ಅದರ ಪಕ್ಕದ ರಾಜ್ಯಗಳಲ್ಲಿರುವ ಗೋಳಾಕಾರದ ಇಷ್ಟಲಿಂಗ ಧರಿಸುವ ಲಿಂಗಾಯತರಿಗೆ ಏನೂ ಸಂಬಂಧವಿಲ್ಲದ ವೀರಶೈವವನ್ನು ಉಳಿಸುವ ಈ ಕಪಟ ಮತ್ತು ದುಃಸ್ಸಾಹಸವನ್ನು ವೀರಶೈವ ಮಹಾಸಭೆ ಮಾಡುತ್ತಲಿದೆ.

ಈಗ ಒಂದು ವಾರದ ಕೆಳಗೆ ಒಬ್ಬರು ಡಾ॥ ಚಂದ್ರಶೇಖರ್ ಎನ್ನುವವರು ಬಂದಿದ್ದರು. ಅವರು ಬ್ರಿಟನ್ನಿನಲ್ಲಿ ನೆಲೆಸಿ 30 ವರ್ಷವಾಗಿದೆ. ಅವರಿಗೆ ಇಲ್ಲಿ ನಾವು ನಡೆಸಿರುವ ಜನಜಾಗರಣ ಏನೂ ಗೊತ್ತಿಲ್ಲ. ''ಒಮ್ಮೆ ಭಾರತೀಯ ವೈದ್ಯರ ಒಂದು ಸಮಾವೇಶ ಇತ್ತು. ಅಲ್ಲಿಗೆ ಇಬ್ಬರು ಮಹಿಳಾ ವೈದ್ಯರು ಬಂದಿದ್ದರು. ಅವರು ವೀರಶೈವರು ಎಂದು ತಿಳಿದು ಪರಿಚಯ ಮಾಡಿಕೊಂಡೆ. ಅಂದು ಅಲ್ಲಿ ಸಸ್ಯಾಹಾರ, ಮಾಂಸಾಹಾರ ಎರಡೂ ಇದ್ದವು. ನಾನು ಸಸ್ಯಾಹಾರ ಮಾಡಿದೆ. ಅವರು ಮಾಂಸಾಹಾರ ಮಾಡಿದಾಗ ನನಗೆ ದಿಗ್ಭ್ರಾಂತಿಯಾಯಿತು. ವೀರಶೈವರಾಗಿ ಮಾಂಸಾಹಾರ ಮಾಡುತ್ತೀರಲ್ಲಾ ಎಂದಾಗ ''ಅಹುದು ನಮ್ಮಲ್ಲಿ ಇದೇನೂ ನಿಷಿದ್ಧವಲ್ಲ. ನಾವೆಲ್ಲ ಮಾಂಸಾಹಾರಿಗಳು'' ಎಂದಾಗ ನಾನು ತುಂಬಾ ಗೊಂದಲಕ್ಕೊಳಗಾದೆ'' ಎಂದರು. ಈ ಮಾಹಿತಿಯಿಂದ ನನಗೆ ಇನ್ನಷ್ಟು ಸಂತೋಷವಾಯಿತು. ''ಅದಕ್ಕೆ ಡಾಕ್ಟ್ರೆ , ನಾವು ಹೇಳುವುದು. ಆ ವೀರಶೈವವೇ ಬೇರೆ ನಮ್ಮ ಲಿಂಗಾಯತ ಧರ್ಮವೇ ಬೇರೆ'' ಎಂದು. 1976-77ರಲ್ಲಿ ನಾನು ಇಂಗ್ಲೆಂಡನ್ನು ಸಂದರ್ಶಿಸಿದಾಗ ಓರಿಯಂಟಲ್ ಮತ್ತು ಆಫ್ರಿಕನ್ ಅಧ್ಯಯನ ವಿಭಾಗದ ಮುಖ್ಯಸ್ಥರು ಡಾ॥ ಪಿಯಾಟೋಗಾರ್ಸ್ಕಿ ಎಂಬ ರಷಿಯನ್ ಪ್ರೊಫೆಸರ್ ಇದ್ದರು. ವಾರಾಂತ್ಯದ ಶನಿವಾರ-ಭಾನುವಾರ ನಾನು ಭಾಷಣ ಕಾರ್ಯಕ್ರಮಗಳಿಗೆ ಹೋಗುತ್ತಿದ್ದೆ. ಉಳಿದ 5 ದಿವಸಗಳನ್ನು ವ್ಯರ್ಥಮಾಡಬಾರದೆಂದು ಬ್ರಿಟಿಷ್ ಮ್ಯೂಸಿಯಮ್ ಲೈಬ್ರರಿಗೆ ಹೋಗುತ್ತಿದ್ದೆ ಮತ್ತು ಅಲ್ಲೆ ಪಕ್ಕದಲ್ಲಿದ್ದ ಲಂಡನ್ ವಿಶ್ವವಿದ್ಯಾಲಯದ ಓರಿಯಂಟಲ್ ಸ್ನಾತಕೋತ್ರ ತರಗತಿಗಳಿಗೆ ಅನುಮತಿ ಪಡೆದು ಹೋಗಿ ಕುಳಿತುಕೊಳ್ಳುತ್ತಿದ್ದೆ. ಡಾ॥ ಪಿಯಾಟೋಗಾರ್ಸ್ಕಿ ನನ್ನ ಪರಿಚಯ ಕೇಳಿ ಧರ್ಮ ಯಾವುದು ? ಎಂದರು. ''ಲಿಂಗಾಯತ'' ಎಂದೆ. ವೀರಶೈವರೇ ಎಂದರು. ''ಇಲ್ಲ... ಎರಡೂ ಬೇರೆ ಬೇರೆ'' ಎಂದು ವಿವರಿಸಿದಾಗ ಅವರು ಹರ್ಷದಿಂದ ''ಯೂ ಆರ್ ರೈಟ್'' ಎಂದರು. ಏಕೆಂದರೆ ಅವರು ಶೈವ ಸಿದ್ಧಾಂತ ಅಧ್ಯಯನ ಮಾಡಿದ್ದವರು. ಸಪ್ತ ಶೈವಗಳ ಬಗ್ಗೆ ತಿಳಿದವರೂ ಆಗಿದ್ದರು. ''ಈ ಜನಕ್ಕೆ ಅರ್ಥವಾದಷ್ಟು ಬೇಗನೆ ನಮ್ಮ (ದಡ್ಡ) ಜನಕ್ಕೆ ಏಕೆ ಅರ್ಥವಾಗದು?'' ಎನ್ನಿಸಿ ಸೋಜಿಗವಾಯಿತು. ವೀರಶೈವವನ್ನು ರಕ್ಷಿಸಲಿಕ್ಕೆ ಲಿಂಗಾಯತ ಧರ್ಮವನ್ನು ಗುರಾಣಿಯನ್ನಾಗಿ ವೀರಶೈವ ಮಹಾಸಭೆಯವರು ಬಳಸಿಕೊಳ್ಳುತ್ತಿದ್ದಾರೆ. ಆದರೆ ಇದೀಗ ಲಿಂಗಾಯತ ಧರ್ಮೀಯ ಬಸವ ಭಕ್ತರು ಎಚ್ಚೆತ್ತುಕೊಳ್ಳದೆ ಇದ್ದರೆ ವೀರಶೈವ ರಕ್ಷಣೆಯಾಗುವುದಿಲ್ಲ ; ಬದಲಾಗಿ ವೀರಶೈವದ ಸಖ್ಯದಿಂದ ಲಿಂಗಾಯತ ಧರ್ಮ ಪುನಃ ತನ್ನ ಸ್ವಾತಂತ್ರ್ಯ, ಸಾರ್ವಭೌಮತೆಯನ್ನು ಕಳೆದುಕೊಳ್ಳಬೇಕಾದೀತು. ಲಿಂಗಾಯತ ಅಥವಾ ವೀರಶೈವ ಎಂದು ಬರೆಸಿರಿ ಎಂದು ಪ್ರಚಾರ ಮಾಡುತ್ತಿರುವ ಶ್ರೀ ಭೀಮಣ್ಣ ಖಂಡ್ರೆ ಮತ್ತು ವೀರಶೈವ ಮಹಾಸಭೆಯವರು ಮುಂದೆ ತಮ್ಮ ಸ್ವಧರ್ಮ, ಸಮಾಜಗಳಿಗೆ ಕೇಡು ಬಗೆದ ಪಾಪಕ್ಕೆ ಪಾತ್ರರಾಗುತ್ತಾರೆ.

ಕೆಲವು ಮುಗ್ಧ ಜನರು (ಮತ್ತು ಮೂಢ ಜನರು) ವೀರಶೈವ ಮಹಾಸಭೆಯವರು

ವೀರಶೈವ-ಲಿಂಗಾಯತ ಎರಡರಲ್ಲಿ ಯಾವುದಾದರೂ ಬಳಸಿರಿ ಎನ್ನುತ್ತಿದ್ದಾರೆ. ಅವರು ಒತ್ತಾಯ ಯಾವುದಕ್ಕೂ ಮಾಡುವುದಿಲ್ಲ ಎಂದು ನುಡಿಯುತ್ತಾರೆ. ವೀರಶೈವ ಮಹಾಸಭೆಯವರು ಒತ್ತಾಯ ಮಾಡುವುದಿಲ್ಲ ನಿಜ, ಆದರೆ ನಂಬಿದ ಜನರಿಗೆ ಮೋಸ ಮಾಡುತ್ತಿದ್ದಾರೆ. ಎರಡೂ ಒಂದೇ ಎಂದು ಸಾಧಿಸುವ ದುರಾಲೋಚನೆ ಅವರದು.

ವೀರಶೈವ/ಲಿಂಗಾಯತ ಎಂದು ಬರೆಸಬೇಕು ಎಂದು ಸರ್ಕಾರದಿಂದ ಆರ್ಡರ್ ಅನ್ನು ವೀರಶೈವ ಮಹಾಸಭೆಯವರು ತಂದಿದ್ದಾರಂತೆ ಎಂದು ಇನ್ನು ಕೆಲವು ಜನರು ಹೇಳುತ್ತಾರೆ ಜನಗಣತಿಯವರು ನೀವು ಏನನ್ನು ಬರೆಸಬೇಕು ಎಂಬ ಬಗ್ಗೆ ತಾವು ಹೇಳುವುದಿಲ್ಲ. ನಮ್ಮ ನಮ್ಮ ಧರ್ಮ ಕುರಿತು ನಾವು ಬರೆಸಲು ಸ್ವಾತಂತ್ರ್ಯ ನೀಡಿದ್ದಾರೆ. ವೀರಶೈವ ಮಹಾಸಭೆಯವರು ತಾವು ವೀರಶೈವ ಲಿಂಗಾಯತ ಬರೆಸುತ್ತೇವೆ ಎಂದುದಕ್ಕೆ ನಿಮಗೆ ಅವಕಾಶವಿದೆ, ಬರೆಸಿಕೊಳ್ಳಿ ಎಂದು ಇವರ ಪತ್ರಕ್ಕೆ ಉತ್ತರ ನೀಡಿದ್ದಾರೆ. ಅದನ್ನು, ''ಆರ್ಡರ್ ಕಾಪಿ, ಹೀಗೆಯೇ ಬರೆಸಬೇಕು.'' ಎಂದು ಸುಳ್ಳು ಹೇಳುತ್ತ ವೀರಶೈವ ಮಹಾಸಭೆಯವರು ಅಧ್ಯಯನ ಶೀಲರಲ್ಲದ ಜನರಿಗೆ ಹೇಳುತ್ತಾ ಮೋಸ ಮಾಡುತ್ತಿದ್ದಾರೆ.

ಜನಗಣತಿಯಲ್ಲಿ ಭಾರತದ ಪ್ರಜೆ ತನಗೆ ಬೇಕಾದಂತೆ ತನ್ನ ಧರ್ಮದ ಹೆಸರನ್ನು ದಾಖಲಿಸಬಹುದು. ಇದಕ್ಕೆ ಯಾರೂ ಅಡ್ಡಿ ಮಾಡುವುದಿಲ್ಲ. ಹೀಗಾಗಿ ಅವರು ನೀವು ಹೀಗೇ ಬರೆಸಿ, ಹಾಗೇ ಬರೆಸಿ ಎಂದು ಹೇಳುವುದಿಲ್ಲ.

ಭೀಮಣ್ಣ ಖಂಡ್ರೆ ಮತ್ತು ಗುರು-ಲಿಂಗ-ಜಂಗಮ ದ್ರೋಹ

ದಿವಂಗತ ಶರಣ. ಐ.ಎಂ.ಮಗದುಮ್ ಅವರಿಗೆ ಲಿಂಗಾಯತ-ವೀರಶೈವಗಳ ವ್ಯತ್ಯಾಸ ಮೊದಲು ತಿಳಿದಿರಲಿಲ್ಲ. ನಮಗೂ ಮೊದಲು ತಿಳಿದಿರಲಿಲ್ಲ. 'ನಮ್ದೂ ಅದೇ' ಎಂದು ಮಹಾಸಭೆ, ಚಿದಾನಂದ ಮೂರ್ತಿ ಮುಂತಾದವರು ಹೇಳಿದ್ದನ್ನು ನಂಬಿದ್ದೆವು. ಮುಂದೆ ಸ್ವಾಧ್ಯಾಯದಿಂದ ತಿಳಿದಾಗ ಶ್ರೀ ಮಗದುಮ್ ಅವರಿಗೆ ಪೂಜ್ಯ ಅಪ್ಪಾಜಿ, ನಾವು ಮನವರಿಕೆ ಮಾಡಿಕೊಟ್ಟೆವು. ಅವರು ಒಂದು ಬಹಿರಂಗ ಚರ್ಚೆ ಏರ್ಪಡಿಸಿಸಲು ಸಹ ಒಪ್ಪಿದ್ದರು. ಅಷ್ಟರಲ್ಲಿ ಪಾರ್ಶ್ವವಾಯು ಪೀಡಿತರಾಗಿ, ಚೇತರಿಸಿಕೊಳ್ಳದೆ, ಲಿಂಗೈಕ್ಯರಾದರು. ನಮ್ಮ ಅಧ್ಯಯನ ಆಳವಾಗುತ್ತ ಹೋದಂತೆ ಲಿಂಗಾಯತ-ವೀರಶೈವ ಬೇರೆ ಬೇರೆ ಎಂಬುದು ಖಚಿತವಾಯಿತು. ಒಮ್ಮೆ ಜನರಲ್ ಬಾಡಿ ಮೀಟಿಂಗ್‌ಗೆ ಬರುವ ಲಿಂಗಾಯತ ಪ್ರಮುಖರಿಗೆ ತಿಳಿಸಿದಾಗ ಧಾರವಾಡದಿಂದ ಬಂದ ಅವರು ಮಹಾಸಭೆಯ ಮೀಟೀಂಗ್‌ಲ್ಲಿ ವಿಷಯ ಎತ್ತಿದ್ದುಂಟು. ವೀರಶೈವ ಬದಲು ಲಿಂಗಾಯತ ಮಹಾಸಭೆ ಎಂದು ಮಾಡುವ ಪ್ರಸ್ತಾಪವು ಆಯಿತು. ಆದರೆ ಹಾಗೆ ಮಾಡದೆ ಮೂಲತಃ ನಿಯಮಾವಳಿಯಲ್ಲಿ ಕೇವಲ ವೀರಶೈವ ಪದ ಇದ್ದಾಗ ನಂತರ ಕೃತಕವಾಗಿ ಲಿಂಗಾಯತ ಪದವನ್ನು ಸೇರಿಸಿ ನಿಯಮಾವಳಿಯನ್ನು ತಿದ್ದುಪಡಿ ಮಾಡಿದ್ದಾರೆ. (ಇದನ್ನು ನಾವು ವೀರಶೈವ ಮಹಾಸಭೆ ವಿರುದ್ಧ ಹಾಕಿರುವ ಮೊಕದ್ದಮೆಯಲ್ಲಿ ತಿಳಿಸಿದ್ದೇವೆ.) ಈಗಿನ ಅಧ್ಯಕ್ಷರಾದ ಭೀಮಣ್ಣ ಖಂಡ್ರೆ ಅವರಿಗೆ ಲಿಂಗಾಯತದ ವೈಶಿಷ್ಟ್ಯ, ವೀರಶೈವದ ದೌರ್ಬಲ್ಯ ಎರಡೂ ಗೊತ್ತಿವೆ. ಆದರೂ ವೀರಶೈವ ಪದ ಬಿಡಲಾರದ ಅವರ ಪ್ರಯತ್ನದಲ್ಲಿ ದೌರ್ಬಲ್ಯವಿದೆಯೋ, ಸ್ವಾರ್ಥವಿದೆಯೋ ಅರ್ಥವಾಗುತ್ತಿಲ್ಲ. ಒಟ್ಟಾರೆ ಅವರು ಗುರು-ಲಿಂಗ-ಜಂಗಮ ದ್ರೋಹ ಮಾಡುತ್ತಿದ್ದಾರೆ. ಹೇಗೆಂದರೆ

1. **ಧರ್ಮ ಗುರುದ್ರೋಹ** : ಧರ್ಮಗುರು ಬಸವಣ್ಣನವರನ್ನು ಧರ್ಮಗುರು ಸ್ಥಾಪಕ ಎಂದು ಒಪ್ಪದವರ ಜೊತೆ ಸೇರಿ ಗುರುದ್ರೋಹ ಮಾಡುತ್ತಿದ್ದಾರೆ.

ದೀಕ್ಷಾ ಗುರು ದ್ರೋಹ : ಲಿಂಗೈಕ್ಯ ಶತಾಯುಷಿ ಭಾಲ್ಕಿಯ ಪೂಜ್ಯ ಶ್ರೀ ಚನ್ನಬಸವ ಪಟ್ಟದ್ದೇವರ ಶಿಷ್ಯರಾಗಿಯೂ ಈ ವಿಷಯದಲ್ಲಿ ಗುರುಗಳ ಆಶಯಕ್ಕೆ ವಿರುದ್ಧವಾಗಿ ನಡೆದು ದೀಕ್ಷಾಗುರು ದ್ರೋಹ

ಎಸಗುತ್ತಿದ್ದಾರೆ. ಖಂಡ್ರೆಯವರ ಶಾಲಾ ಸರ್ಟಿಫಿಕೇಟಿನಲ್ಲಿ ಕೇವಲ ಲಿಂಗಾಯತ ಎಂದು ಮಾತ್ರ ಇದೆ ಎಂಬುದಾಗಿ ಕೇಳಿದ್ದೇನೆ.

2. ಲಿಂಗದ್ರೋಹ : ನಮ್ಮದು ಲಿಂಗವನ್ನು ಆಯತ ಮಾಡಿಕೊಂಡು ಲಿಂಗದೇವನನ್ನು ಪೂಜಿಸುವ ಧರ್ಮ. ಶಿವನನ್ನು ಪೂಜಿಸುವ ಧರ್ಮವಲ್ಲ. ಅಂದಾಗ ಲಿಂಗಾಯತ ಧರ್ಮವನ್ನು ವೀರಶೈವ ಎನ್ನುವುದು ಕಟ್ಟಿಕೊಳ್ಳುವ ಲಿಂಗಕ್ಕೆ, ಸೃಷ್ಟಿಕರ್ತ ಲಿಂಗದೇವನಿಗೆ ಬಗೆಯುವ ದ್ರೋಹ.

3. ಜಂಗಮದ್ರೋಹ : ಜಂಗಮ ಎಂದರೆ ಸಮಾಜವೆಂದೂ ಅರ್ಥ. ವೀರಶೈವ ಪದ ಬಳಸಿದರೆ ಅದಕ್ಕೆ ಸ್ವತಂತ್ರ ಧರ್ಮದ ಸ್ಥಾನ ಮಾನ ಸಿಕ್ಕದು, ಅದು ಹಿಂದು ಧರ್ಮದೊಳಗಣ ಶೈವ ಮತದ ಒಂದು ಪ್ರಭೇದ ; ಲಿಂಗಾಯತ ಪದವು ಸ್ವತಂತ್ರ ಧರ್ಮದ ಸ್ಥಾನಮಾನವನ್ನು ನೀಡುವುದಲ್ಲದೆ, ಮುಂದೆ ಜೈನ, ಬೌದ್ಧ, ಸಿಖ್ ಧರ್ಮಗಳಂತೆ ರಾಷ್ಟ್ರೀಯ ಧಾರ್ಮಿಕ ಅಲ್ಪಸಂಖ್ಯಾತರ ಸೌಲಭ್ಯ, ಸ್ಥಾನಮಾನ ನೀಡುವ ಶಕ್ತಿ ಹೊಂದಿದೆ. ಇದನ್ನು ಮನವರಿಕೆ ಮಾಡಿಕೊಟ್ಟರೂ ಹಟ ತೊಟ್ಟು ತನ್ನ ಸಮಾಜಕ್ಕೆ ಕೇಡು ಬಗೆಯುವುದು ಜಂಗಮ ದ್ರೋಹವಲ್ಲದೆ ಮತ್ತೇನು ? ಲಿಂಗಾಯತ ಸಮಾಜದಲ್ಲಿ ಬಳಕೆಯಲ್ಲೇ ಇರದಿದ್ದ ಸನ್ನಿವೇಶದಲ್ಲಿ ಕೃತಕವಾಗಿ ವೀರಶೈವ ಸೇರ್ಪಡೆ ಮಾಡಿದ್ದು ಸಮಾಜಕ್ಕೆ ಎಸಗಿದ ದ್ರೋಹವಲ್ಲವೆ ? ಒಂದು ಕಡೆಯಿಂದ ಹಿಂದೂ-ವೀರಶೈವವಾದಿಗಳಾದ ಚಿದಾನಂದ ಮೂರ್ತಿಯವರು, ಮತ್ತೊಂದು ಕಡೆಯಿಂದ ಲಿಂಗಾಯತ ಧರ್ಮೀಯರಾದ ನಾವು ವೈಚಾರಿಕವಾಗಿ, ಶಾಸ್ತ್ರೀಯವಾಗಿ ವಿಷಯಗಳನ್ನು ಮನವರಿಕೆ ಮಾಡಿಕೊಡುತ್ತಿದ್ದರೂ ಮನವರಿಕೆಯನ್ನು ಮಾಡಿಕೊಳ್ಳದಂತೆ ವೀರಶೈವ ಮಹಾಸಭೆಯವರು ವರ್ತಿಸುವುದನ್ನು ನೋಡಿದಾಗ ಅನೇಕ ಸಂದೇಹಗಳು ಜನರಲ್ಲಿ ಏಳುವುದು ಸ್ವಾಭಾವಿಕ. ಇವರ ಉದ್ದೇಶ ಏನಿರಬಹುದು ?

1. ಜನಗಣತಿ ಹತ್ತಿರ ಬರುತ್ತಿದೆ. ಇದೇ ಕಾವಿನಲ್ಲೆ ಒತ್ತಾಯ ಮಾಡಿ ಸದಸ್ಯತ್ವದ ಹಣವನ್ನು ಜನರಿಂದ ಸಂಗ್ರಹಿಸಲು ಸಕಾಲ.
2. ನಿವೃತ್ತ ರಾಜಕಾರಣಿಗಳು, ನಿವೃತ್ತ ಅಧಿಕಾರಿಗಳಿಗೆ ಆರಾಮವಾಗಿ ಸಂಪಾದಿಸಲು ಸುವರ್ಣ ಅವಕಾಶ.
3. ಕಾರ್ಯಕ್ರಮ, ಜಾಥಾ ಎಂದು ಲೆಕ್ಕಕ್ಕೆ ಸಿಗದಂತೆ ಬೇಕಾದಷ್ಟು ಹಣವನ್ನು ಯಾರ್ಯಾರೋ ಎತ್ತಲು, ಹೇಗೋ ಖರ್ಚು ಮಾಡಲು ಅವಕಾಶ ಸಿಗುತ್ತದೆ. ಎಂದೇ ಈ ಕಾರ್ಯಕ್ರಮಗಳ ಏರ್ಪಾಡು. ಇಂಥಾ ಊಹಾಪೋಹದ ಮಾತುಗಳನ್ನು ಜನರು ವಿಫುಲವಾಗಿ ಅಲ್ಲಲ್ಲೇ ಆಡುತ್ತಿದ್ದಾರೆ. ನಿಜ ಸತ್ಯವನ್ನು ಮಾತ್ರ ಸರ್ವದ್ರಷ್ಟಾರನಾದ ದೇವನು ಮಾತ್ರ ಬಲ್ಲನು !

ಈ ಲೇಖನವನ್ನು ಬರೆಯುವಾಗಲೇ ಬೆಳಗಾವಿಯಿದ ನಮ್ಮ ಶರಣರ ಒಂದು ದೂರವಾಣಿ ಕರೆ ಬಂದಿತು. ಆಗ ನಾನು ಅವರನ್ನು "ಇಷ್ಟೆಲ್ಲಾ ತಿಳಿಸಿ ಹೇಳಿದರೂ ಏಕೆ ವೀರಶೈವ ಮಹಾಸಭೆಯವರು ಹೀಗೆ ಮಾಡುತ್ತಾರೊ ?" ಎಂದು ಕೇಳಿದೆ. ಆಗ ಅವರು ಹೇಳಿದ ಮಾತು ತುಂಬಾ ಆಶ್ಚರ್ಯ ಉಂಟು ಮಾಡಿತು. "ನಿಮ್ಮ ಮಾತಾಜಿಯವರು ಲಿಂಗಾಯತ ಎಂದು ಪ್ರತಿಪಾದಿಸುತ್ತಿರುವುದರಿಂದ ನಾವು ಹಠದಿಂದ ವೀರಶೈವ ಬಳಸುತ್ತೇವೆ" ಎಂದರಂತೆ ! ಸರಿ ಈ ಹಠದಿಂದ ಹಾನಿಯಾಗುವುದು ಲಿಂಗಾಯತ ಧರ್ಮ, ಸಮಾಜಗಳಿಗೆ ತಾನೆ ? ಹಾಗಿದ್ದರೆ ಇನ್ನೊಂದು ಮಾತು ; ಇದೇ ಹಠದಿಂದ ಅವರು ಲಿಂಗಾಯತ ಪದವನ್ನು ಬಳಸುವುದು ಕೈಬಿಟ್ಟು ಕೇವಲ ವೀರಶೈವ ಬಳಸಿಕೊಳ್ಳಲಿ. ಎರಡೂ ಪದಗಳನ್ನು ಸಮಾನಾರ್ಥದಲ್ಲಿ ಬಳಸುವುದು ಬೇಡವೇ ಬೇಡ.

ವೀರಶೈವ ಮಹಾಸಭೆಯವರಿಗೆ ಮತ್ತು ಲಿಂಗಾಯತರು ಉಭಯತರಿಗೂ ನಮ್ಮ ಕಳಕಳಿಯ ಮನವಿ ಇದು. ಕಾವಿ ತೊಟ್ಟವರೇ ಪಂಚ ತಾರಾ ಹೋಟೆಲ್ ನಡೆಸಿ, ಕಳ್ಳ ಸಾಗಾಣಿಕೆ ಮಾಡಿ ಏನೇನೋ

ವ್ಯವಹಾರದಿಂದ ಹಣ ಗಳಿಸುತ್ತಾರಂತೆ. ನೀವು ಅಂದರೆ ವೀರಶೈವ ಮಹಾಸಭೆಯ ಪದಾಧಿಕಾರಿಗಳು ಗೃಹಸ್ಥರು, ಮಕ್ಕಳು ಮೊಮ್ಮಕ್ಕಳಿಗಾಗಿ ಹಣ ಸಂಗ್ರಹಿಸುವ ಆಸೆ ಹೊಂದಿದ್ದರೆ ದೊಡ್ಡ ಅಪಾರಾಧವೇನಲ್ಲ ; ಆದರೆ ನೀವು ಕಟ್ಟುವ ಲಿಂಗಕ್ಕೆ, ಈಗ ನೀವು ಕಟ್ಟಿರದಿದ್ದರೆ ನೀವು ಹುಟ್ಟಿದಾಗ ನಿಮ್ಮಪ್ಪ-ಅಮ್ಮ ಲಿಂಗಧಾರಣೆಯ ಕಾಲಕ್ಕೆ ಕಟ್ಟಿಸಿರುವ ಲಿಂಗಕ್ಕೆ ದ್ರೋಹ ಮಾಡದೆ "ಲಿಂಗಾಯತ" ಎಂದೇ ಬರೆಸಲು ದಯವಿಟ್ಟು ಪ್ರಚಾರ ಮಾಡಿರಿ.

ಲಿಂಗಾಯತ ಜನರೇ, ಯಾತ್ಯಾತಕ್ಕೋ ಸಾಕಷ್ಟು ಹಣ ಕಳೆಯುತ್ತಿರುತ್ತೀರಿ. ವೀರಶೈವ ಮಹಾಸಭೆಯಿಂದ ದುಡಿಯುವ ಕೆಲವು ಜನರಿಗೆ ನಿಮ್ಮ ಗಳಿಕೆಯ ಒಂದು ಸಣ್ಣ ಪಾಲು ಸಂದರೆ ಅನಾಹುತವೇನಾಗದು. ಅವರಿಗೆ ಕೊಡುವ ಹಣ ಕೊಟ್ಟರೂ ಜನಗಣತಿಯ 8ನೆಯ ಕಾಲಮ್‌ನಲ್ಲಿ 7ನೆಯ ಪ್ರಶ್ನೆ ಮತಕ್ಕೆ ಉತ್ತರವಾಗಿ ಕೇವಲ ಲಿಂಗಾಯತ ಮಾತ್ರ ಬರೆಸಿರಿ. ನೀವು ಧರಿಸಿರುವ ಲಿಂಗಕ್ಕೆ, ಈಗ ಧರಿಸದೆ ಇರುವವರಾಗಿದ್ದರೂ ಹುಟ್ಟಿದಾಗ ನಿಮ್ಮ ಅಪ್ಪ-ಅಮ್ಮ ಲಿಂಗಧಾರಣೆ ಮಾಡಿಸಿರುವುದರಿಂದ ಅಂಥ ಇಷ್ಟಲಿಂಗಕ್ಕೆ ಕೃತಜ್ಞತೆ ಸಲ್ಲಿಸಲು ಜನಗಣತಿಯಲ್ಲಿ ಲಿಂಗಾಯತ ಮಾತ್ರ ಬರೆಸಿರಿ.

-ಜಗದ್ಗುರು ಮಾತೆ ಮಹಾದೇವಿ

ಶರಣ ಬಂಧುಗಳಲ್ಲಿ ಸೇವಾ ಕಾರ್ಯಕ್ಕೆ ವಿನಂತಿ

ಶರಣ ಮೇಳ ಲಿಂಗಾಯತ ಧರ್ಮೀಯರ ದೊಡ್ಡ ಹಬ್ಬ. ದಿನದಿನಕ್ಕೂ ಭಕ್ತಿ ಭಾವನೆಯನ್ನು ಉದ್ದೀಪನೆ ಮಾಡುತ್ತ ಬಸವ ಭಕ್ತರ ಸಂಘಟನೆ ಮಾಡುತ್ತ ವಿಸ್ತರಿಸುತ್ತಲಿದೆ. ವರ್ಷದಿಂದ ವರ್ಷಕ್ಕೆ ಹೆಚ್ಚು ಪ್ರಚಾರವಾಗುತ್ತ ಹೆಚ್ಚಿನ ಜನರನ್ನು ಆಕರ್ಷಿಸುತ್ತಲಿದೆ. ಅದ್ದರಿಂದ ಪೂರ್ವಭಾವಿ ಸಿದ್ದತೆಗಾಗಿ, ಶರಣ ಮೇಳದಲ್ಲಿ ಪ್ರಸಾದ ಎಡೆ ಮಾಡಲು, ಉಸ್ತುವಾರಿ ಮಾಡಲು, ಇನ್ನಿತರ ಸೇವಾಕಾರ್ಯಕ್ಕೆ ಅಸಂಖ್ಯಾತ ಸ್ವಯಂ ಸೇವಕರ ಅಗತ್ಯವಿದೆ. ಆದ್ದರಿಂದ ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಯಕರ್ತರು ಒಂದು ತಿಂಗಳು, 15ದಿವಸ ಮುಂಚೆ ಬಂದು ಸೇವೆ ಮಾಡಲು ಅವಕಾಶವಿದೆ. ಜನವರಿ 1ನೆಯ ತಾರೀಖಿನ ನಂತರ ಬರುವವರೂ ಬರಬಹುದು. ಒಟ್ಟಾರೆ ಎಷ್ಟು ದಿವಸಗಳ ಸಮಯಾವಕಾಶವಿದೆಯೋ ಅಷ್ಟು ದಿವಸ ಬರಬಹುದು.

ಸೇವೆ ಮಾಡುವ ಅಪೇಕ್ಷೆ ಇದ್ದು ಬರಲು ಬಸ್ ಛಾರ್ಜು ಅನುಕೂಲವಿಲ್ಲದಿದ್ದರೆ ಮೊದಲೇ ಪತ್ರ ಬರೆದು ಅನುಮತಿ ಪಡೆದುಕೊಂಡರೆ, ಅಂಥವರು ಬಂದು, ಸೇವೆ ಮಾಡಿ ಹೋಗುವಾಗ ಬರುವ, ಹೋಗುವ ಬಸ್ ಛಾರ್ಜು ಸಹ ಕೊಡಲಾಗುವುದು. ಶರಣ ಮೇಳದಲ್ಲಿ ಮಾಡುವ ಈ ಸೇವೆ ಪರಮ ಪವಿತ್ರವಾದುದೆಂಬ ಪ್ರಜ್ಞೆ ಮೂಡಲೆಂದು ಹಾರೈಸುವೆ.

-ಪೂಜ್ಯ ಶ್ರೀ ಚನ್ನಬಸವರಾಜ ಸ್ವಾಮೀಜಿ

ವಚನ ಸಂಸ್ಕಾರ

-ಮಾತೆ ಕಸ್ತೂರಿ ದೇವಿ

ಇತ್ತೀಚೆಗೆ ಅಗೋಚರವಾಗಿ ಸತ್ಪರಿಣಾಮ ಬೀರುವ ಮಹಾನ್‌ಕಾರ್ಯವೊಂದಕ್ಕೆ ಪೂಜ್ಯ ಮಾತಾಜಿಯವರು ಬಸವ ಮತ್ತು ಲಿಂಗಭಕ್ತರಿಗೆ ಪ್ರೇರಣೆ ನೀಡುತ್ತಿದ್ದಾರೆ. ಅದೇ ವಚನ ಲೇಖನ ವ್ರತ - ಅಂದರೆ ವಚನ ಸಂಸ್ಕಾರ ನೀಡುವ ಮೂಲಕ ಭಾವ, ಮನಸ್ಸು, ಬುದ್ಧಿ, ಇಂದ್ರಿಯಗಳ ಪಕ್ವತೆಗೆ ನೆರವಾಗುವುದು. ಬಲ್ಲವರು ಹೇಳುತ್ತಾರೆ. ''ಹತ್ತು ಸಾರಿ ಓದುವುದಕ್ಕಿಂತ ಒಂದು ಸಾರಿ ಬರೆಯುವುದು ಲೇಸು''

ನಮ್ಮ ಶಾಲಾದಿನಗಳಲ್ಲಿ ಅಪ್ಪ ಬಸವಣ್ಣನವರ 2 ವಚನಗಳು ಪಠ್ಯಪುಸ್ತಕಗಳಲ್ಲಿ ಮುದ್ರಣವಾಗುತ್ತಿತ್ತು. ಅವೇ ''ತಂದೆ ನೀನು, ತಾಯಿ ನೀನು.. ಮತ್ತು ಕಳಬೇಡ, ಕೊಲಬೇಡ....'' ಬೇರೆ ಪದ್ಯಗಳೊಂದಿಗೆ ಇವನ್ನು ಬಾಯಿಪಾಠ ಮಾಡಿ ಒಪ್ಪಿಸಬೇಕಾಗಿತ್ತು. ಅವುಗಳಲ್ಲಿ ಚಿಕ್ಕದಾದ, ಚೊಕ್ಕದಾದ, ಸುಲಭವಾಗಿ ಪ್ರಿಯವಾಗಿ ಕಂಡ ವಚನಗಳಿಗೆ ಮೊದಲ ಆದ್ಯತೆ ಕೊಟ್ಟು ಬೇಗ ಬಾಯಿಪಾಠ ಮಾಡಿ ಒಪ್ಪಿಸುತ್ತಿದ್ದೆವು.

ನಂತರ ಕಾಲೇಜುದಿನಗಳಲ್ಲಿ ಕನ್ನಡದ ಪಠ್ಯಪುಸ್ತಕಗಳಲ್ಲಿದ್ದ ಜಗನ್ಮಾತಾ ಅಕ್ಕಮಹಾದೇವಿಯವರ ವಚನಗಳಿಗೆ ವ್ಯಾಖ್ಯಾನ ಬರೆಯಲು ಕೇಳುತ್ತಿದ್ದರು. ಆ ಹೊತ್ತಿಗಾಗಲೇ ನಾನು ತರಂಗಿಣಿಯನ್ನು ಓದಿದ್ದೆ. ಪಠ್ಯದಲ್ಲಿದ್ದ ವಚನಗಳಿಗೆಲ್ಲ ಅದರಲ್ಲಿ ಸಿದ್ಧ ತಾತ್ಪರ್ಯವಿರುತ್ತಿತ್ತು. ಸರಿ, ಅದನ್ನೇ ಓದಿ ಬರೆದು ತೋರಿಸಿದೆ. ಅನುಕರಣೆ ಮಾಡಿದರು ಸರಿಯಾದುದನ್ನೇ ಮಾಡಬೇಕು. ಅಂಧಾನುಕರಣೆ ಸಲ್ಲದು. ನಮ್ಮ ಉಪನ್ಯಾಸಕರು ಒಂದೊಂದು ವಚನಕ್ಕೆ ಇಟ್ಟಿದ್ದ 3/3 ಅಂಕ ಕೊಟ್ಟರು. ಒಳ್ಳೆಯದು. ''ವಚನಗಳಿಗೆ ವ್ಯಾಖ್ಯಾನ ಬರೆದಿದ್ದಕ್ಕೆ 3/3 ಅಂಕ ಸಿಕ್ಕಿದೆ. ಬಹುಶಃ ಅಕ್ಕನ ಆದರ್ಶವನ್ನೇ ಹಿಡಿದರೆ ದೇವರು 100/100 ಅಂಕ ಕೊಡಬಹುದೆಂಬ'' ಪ್ರೇರಣೆ ಆಗಿ ಇತ್ತ ಬಂದೆ. ಅಯ್ಯೊ ! ನಾನು ಹೀಗೆ ಬರೆದಾಕ್ಷಣ ತರಂಗಿಣಿಯನ್ನು ಓದಲು ಈ ಜನ ಎಲ್ಲಾದರು ಹೆದರಿಕೊಂಡಾರು ! ಓದಿದವರೆಲ್ಲ ಸನ್ಯಾಸಗಳಾಗಬೇಕೆ? ಎಂದು. ಅಂಥವರಿಗೆ ನಾನು ಹೇಳುತ್ತೇನೆ.

ಸುಯಿಧಾನ ಸುಗ್ರಂಥ ಮಾಲೆಯ ಅನೇಕ ಅಪರೂಪದ ಪುಷ್ಪಗಳಲ್ಲಿ ತರಂಗಿಣಿಯು ಒಂದು. ಇದುವರೆಗೂ ಸುಮಾರು 70,000 ಪ್ರತಿಗಳು ಖರ್ಚಾಗಿವೆ. ಆದರೆ ವಿಶ್ವಕಲ್ಯಾಣ ಮಿಶನ್ ಧರ್ಮಪ್ರಚಾರಕ ಸಂಸ್ಥೆಯಲ್ಲಿ ಎಪ್ಪತ್ತುಸಾವಿರ ಸನ್ಯಾಸಿಗಳು ಇಲ್ಲ !! ಕೇವಲ ಬೆರಳೆಣಿಕೆಯಷ್ಟು ಮಂದಿ ಮಾತ್ರ ಇದ್ದಾರೆ ಎಂದು ನಾನು ಅವರಿಗೆ ಧೈರ್ಯ ಹೇಳುತ್ತೇನೆ. ಹಾಗಾದರೆ ಉಳಿದವರು ಏನಾದರು ಎಂದು ಸಂದೇಹವೆ ? ಅವರೆಲ್ಲ ಹೇಳುತ್ತಿದ್ದಾರೆ. ''ಮಾತಾಜಿ, ತಾವು ತರಂಗಿಣಿ ಬರೆಯದೆ ಇದ್ದಿದ್ದರೆ ಪರಮ ಅನ್ಯಾಯವಾಗುತ್ತಿತ್ತು. ಅದರಿಂದ ಬಂಜರಾಗಿದ್ದ ನಮ್ಮ ಬಾಳು ಹಸನಾಗಿದೆ, ಬದುಕು ಬಂಗಾರವಾಗಿದೆ, ನೆಮ್ಮದಿ ಸಿಕ್ಕಿದೆ.'' ಇಂಥ ಪರುಷ ಸಾಹಿತ್ಯ ಯಾರಿಗೆ ಬೇಡ ?

ಆದರೆ ಇಂಥ ಪರುಷಮಣಿಯನ್ನು ನೋಡಲು-ಮುಟ್ಟಲು ಹೆದರುವ ಜನ ನಮ್ಮ ನಡುವೆ ಇದ್ದಾರೆ ಎಂಬುದನ್ನು ನಿಮಗೆ ತೋರಿಸುತ್ತೇನೆ. ಮನಶ್ಶಾಂತಿಗೆಂದು ಕೆಲವು ದಿನ ಇದ್ದು ಹೋಗಲು ನಮ್ಮಲ್ಲಿಗೆ ಲಿಂಗಾಯತ ಧರ್ಮದಲ್ಲಿಯೆ ಹುಟ್ಟಿ ಬೆಳೆದ ಸಂಸ್ಕೃತ ಭಾಷೆಯ ಶಿಕ್ಷಕಿ ಒಬ್ಬರು ಬಂದಿದ್ದರು. ಅವರು ಓದುತ್ತಿದ್ದುದು-ಪಠಿಸುತ್ತಿದ್ದುದು ಅನ್ಯ ದೇವತೆಗಳ ಸ್ತುತಿಗಳನ್ನು. ಅವರಿಗೆ ನಾನು ''ನೀವು ಇಲ್ಲಿರುವವರೆಗೂ ನಮ್ಮ ಸಂಸ್ಥೆಯ ಪುಸ್ತಕಗಳನ್ನು ಓದಿರಿ'' ಎಂದೆ. ಅವರು ಮಾಡಿದ್ದು ಏನು ಗೊತ್ತೆ ?! ನಮಗೆ ಕಾಣುವಂತೆ ಬಸವ ಸಾಹಿತ್ಯವನ್ನು ಕೈಯಲ್ಲಿ ಇರಿಸಿಕೊಂಡು ಆ ಪುಸ್ತಕದೊಳಗೆ ಅನ್ಯ ಸಾಹಿತ್ಯವನ್ನು

ಹುದುಗಿಸಿ ಕದ್ದು ಕದ್ದು ಓದುತ್ತಿದ್ದರು. ಇದನ್ನು ಕಂಡ ನಮಗೆ ಬಲು ತಮಾಷೆ ಎನಿಸುತ್ತಿತ್ತು. ಈಗಿನ ನಮ್ಮ ವಿಶ್ವವಿದ್ಯಾಲಯಗಳು-ಮಠಮಾನ್ಯಗಳು ಮಾಡುತ್ತಿರುವುದು ಏನನ್ನು ? ''ನಹೀ ಜ್ಞಾನೇನ ಸದೃಶಂ'' ಎನ್ನುವ ಬ್ಯಾನರ್ ಕೆಳಗೆ ಜ್ಞಾನಕ್ಕೆ ಹೆದರುವ, ಅಜ್ಞಾನವನ್ನು ಪ್ರೀತಿಸುವ ಯಾಂತ್ರಿಕ ಹೃದಯ, ಚಿಂತನಶೀಲತೆಯಿಲ್ಲದ ಕಂಪ್ಯೂಟರ್ ಮಿದುಳುಗಳನ್ನು ತಯಾರಿಸುತ್ತಿರುವುದು. ಇಂಥವರೇ ಹೀಗಾದಾಗ ಇನ್ನು ಸಂಸ್ಕೃತ ಪಾಠಶಾಲೆಗಳ ಬೆನ್ನು ಹತ್ತಿ ಓಡುವ ದೊಡ್ಡ ದೊಡ್ಡ ಮಠಾಧೀಶರ ಪಾಡು ಇನ್ನೇನು ಇದ್ದೀತು ?

ಯಾವುದೇ ಆಧುನಿಕ ಸೌಲಭ್ಯಗಳು ಇಲ್ಲದ 12ನೇ ಶತಮಾನದಲ್ಲಿ ಬಸವಣ್ಣನವರು, ಅನುಭವ ಮಂಟಪದ ಮೂಲಕ ವಚನಗಳ ಸಹಾಯದಿಂದ ಇಡೀ ಜನಸ್ತೋಮವನ್ನೇ ಮೇಲೆತ್ತಿದ್ದು ಪವಾಡ ಸದೃಶವಾಗಿದೆ. ಇದನ್ನು ಜನಪದರು ಹಿಗ್ಗಿನಿಂದ ಹೇಳುತ್ತಾರೆ.

ಮಿದ್ದಿದನು ಶಿವಗೋಷ್ಠಿ ಬಿದ್ದು ವೇದಗಳಂದು
ಹುದ್ದೆ ಹೊಂದಿದವು ಜಗದೊಳಗೆ । ವಚನಗಳ
ಸುದ್ದಿ ನಾಡ್ತುಂಬಿ ಜನಹಿಗ್ಗಿ ॥ -ನೇ. ಅ. 73

ಬಸವ ಯೋಗಿ ಸಿದ್ಧರಾಮೇಶ್ವರರು ವಚನಗಳ ಮಹತ್ವವನ್ನು ಹೀಗೆ ಸಾರುತ್ತಾರೆ.

ಎಮ್ಮ ವಚನದೊಂದು ಪಾರಾಯಣಕ್ಕೆ
ವ್ಯಾಸನ ಪುರಾಣ ಸಮಬಾರದಯ್ಯ
ಎಮ್ಮ ವಚನದ ನೂರೆಂಟರಧ್ಯಯನಕ್ಕೆ
ಶತರುದ್ರೀಯ ಸಮಬಾರದಯ್ಯ
ಎಮ್ಮ ವಚನದ ಸಾಸಿರ ಪಾರಾಯಣಕ್ಕೆ
ಗಾಯತ್ರಿ ಲಕ್ಷ ಜಪ ಸಮಬಾರದಯ್ಯ
ಕಪಿಲ ಸಿದ್ಧ ಮಲ್ಲಿಕಾರ್ಜುನಾ ।

- ಸಿ.ವ. 856

ಇದನ್ನರಿತು ಮುಂದೆ ವಚನಗಳನ್ನು ಓದಲು ಕುಳಿತಾಗ, ವಚನ ಸಾಹಿತ್ಯದ ತತ್ತ್ವ, ಆಧ್ಯಾತ್ಮದ ಪ್ರಾಥಮಿಕ ಜ್ಞಾನವೂ ಇಲ್ಲದ ನಮ್ಮ ಮನಸ್ಸು, ಬುದ್ಧಿಗಳು ವಚನಾರ್ಥಗಳನ್ನು ಗ್ರಹಿಸಲು ಸೋತು ನಿಂತಾಗ ಪೂಜ್ಯ ಅಪ್ಪಾಜಿಯವರು ಹುರಿದುಂಬಿಸುತ್ತಿದ್ದರು. ''ಹಾಗೇನು ದಿಕ್ಕೆಟ್ಟು ನಿಲ್ಲಬೇಕಾಗಿಲ್ಲ, ಓದುವುದನ್ನು ಬಿಡಬೇಕಾಗಿಲ್ಲ. ಅರ್ಥವಾಗಲಿ ಬಿಡಲಿ ಓದುತ್ತಾ ಹೋಗಿರಿ. ವಚನಗಳು ನಮ್ಮ ಭಾವ ಮನ, ಬುದ್ಧಿಗಳನ್ನು ಸಂಘರ್ಷಕ್ಕೆ ಹಚ್ಚಿ ಹೊಳಪು ಮಾಡುತ್ತವೆ. ಒಂದೊಂದು ವಚನವೂ ಸುಸಂಸ್ಕಾರವನ್ನು ಬಿತ್ತುವ ಶಿಕ್ಷಣದ ಬೀಜಗಳು. ಅಂದರೆ ಕ್ಷಣಕ್ಷಣಕ್ಕೂ ಹೆಜ್ಜೆ ಹೆಜ್ಜೆಗೂ ನಮ್ಮನ್ನು ಬೆಳಕಿನೆಡೆಗೆ, ಬದುಕಿನೆಡೆಗೆ ನೇರವಾಗಿ ಒಯ್ಯುತ್ತವೆ. ಚಿಂತನಶಕ್ತಿಯನ್ನು ಬೆಳೆಸುತ್ತವೆ. ಒಳ್ಳೆಯದು-ಕೆಟ್ಟದು, ಸರಿ-ತಪ್ಪುಗಳನ್ನು ನಿರ್ಧರಿಸುವ ಕಲೆಯನ್ನು ಕಲಿಸುತ್ತದೆ.''

ಇಂಥ ಅಮೂಲ್ಯ ರತ್ನಗಳನ್ನು ಇದುವರೆಗೂ ಸಿಗದಂತೆ ಅದ್ಯಾರು ಬಚ್ಚಿಟ್ಟಿದ್ದು ? ಕಲುಷಿತ-ಗೊಳಿಸಿದ್ದು ? ಕೆಲವರಿಗೆ ಸಿಕ್ಕಿದ್ದರೂ ಪ್ರಾಮಾಣಿಕವಾಗಿ ಏಕೆ ಪ್ರಚಾರ ಮಾಡಿಲ್ಲ ? ಇನ್ನು ಕೆಲವು ವೀರ-ಸಾಹಿತಿಗಳು, ಶೂರ ಸಂಶೋಧಕರು, ಪ್ರಶಸ್ತಿವಾನರೆಲ್ಲ ವಚನ ಶಸ್ತ್ರವನ್ನು ಹಿಡಿಯಲರಿಯದೆ, ತಮ್ಮನ್ನು ತಾವು ರಕ್ಷಿಸಿಕೊಳ್ಳಲಾರದೆ ನೆಲಕಚ್ಚಿರುವುದು ಏಕೆ ? ಎಂಬ ಪ್ರಶ್ನೆಗಳು ನಮ್ಮ ಮುಂದೆ ಭೂತಾಕಾರ ತಳೆದು ನಿಲ್ಲುತ್ತವೆ. ಕಾರಣವನ್ನು ಹುಡುಕೋಣ.

ತಜ್ಞನಾದ ಅನುಭವಿ ರೈತನೊಬ್ಬ ಹಸನಾದ ಭೂಮಿಯಲ್ಲಿ ಅತ್ಯುತ್ತಮವಾದ ಬಿತ್ತನೆ ಬೀಜಗಳನ್ನು ಬಿತ್ತುವಾಗ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳುತ್ತಾನೆ. ಅದರಲ್ಲಿ ಬೀಜೋಪಚಾರವೂ ಒಂದು. ಇಲ್ಲದಿದ್ದರೆ ಆ ಬೀಜಗಳನ್ನು ಭೂಮಿಯಲ್ಲಿರುವ ಕೆಲವು ಕ್ರಿಮಿ ಕೀಟಗಳು ಮೊಳೆತು ಫಲ ಕೊಡುವ ಮೊದಲೆ ತಿಂದು ಹೊಟ್ಟೆತುಂಬಿಸಿಕೊಳ್ಳುತ್ತವೆ. ಅದೇ ರೀತಿ ಬಸವ ತತ್ತ್ವದ ಬೀಜಗಳು ಹಾಳಾಗದಂತೆ ಮಾಡಲು ಜನಪದ ಕವಿಗಳು ನಮಗೊಂದು ಗುಟ್ಟು ಹೇಳಿಕೊಡುತ್ತಿದ್ದಾರೆ ! ಕೇಳೋಣ.

ಬಸವ ಭಕ್ತಿಯ ಬೀಜ । ಬಸವ ಮುಕ್ತಿಯ ತೇಜ
ಬಸವ ಕಾಯಕದ ಗುರುಬೀಜ ಶಿವಮತಕೆ
ಬಸವ ಓಂಕಾರ ಶಿವನಾಮ ॥ (ಕ.ಬ.50)

ಗುರುಬಸವ ಭಕ್ತಿ ಎಂಬ ಹಸನಾದ ಮನೋಭೂಮಿಕೆಯಲ್ಲಿ ವಚನಗಳೆಂಬ ಬಿತ್ತನೆ ಬೀಜಗಳನ್ನು ಬಸವ ಗುರುವಿನಲ್ಲಿ ಸಂಪೂರ್ಣ ಶರಣಾಗತಿಯೆಂಬ ಪ್ರಬಲವಾದ, ಶಕ್ತಿಶಾಲಿಯಾದ ಕ್ರಿಮಿನಾಶಕವನ್ನು ಬೆರೆಸಿ ಬಿತ್ತಿರಿ. ಆಹಾ ! ಎಂಥಾ ಹುಲುಸಾದ ಬೆಳೆ ಬರುತ್ತದೆ. ಬದಲಿಗೆ ಬಸವ ಭಕ್ತಿಯಿಲ್ಲದ ಬಂಜರು ಭೂಮಿಯಲ್ಲಿ, ಬಸವ ಶರಣಾಗತಿಯಿಲ್ಲದೆ ವಚನಗಳನ್ನು ಬಿತ್ತಿರಿ. ಈ ಬೀಜಗಳನ್ನು ನಮ್ಮೊಳಗಿರುವ ಅಹಂ, ಸ್ವಾರ್ಥ ಮತ್ತು ಅಜ್ಞಾನಗಳೆಂಬ ದೈತ್ಯ ವಿಷಕ್ರಿಮಿಗಳು ತಿಂದು ಕೊಬ್ಬಿ ಮೇಲೇಳದಂತೆ ನಮ್ಮನ್ನು ಬೀಳಿಸುತ್ತವೆ. ಆದ್ದರಿಂದಲೇ ಕೇವಲ ಸಾಹಿತ್ಯ ಮತ್ತು ಯಾಂತ್ರಿಕದೃಷ್ಟಿಯಿಂದ ವಚನಗಳನ್ನು ಅಭ್ಯಾಸಿಸುವವರಿಗೆ ಶರಣ ಬಾಹೂರ ಬೊಮ್ಮಯ್ಯನವರು ಕೇಳುತ್ತಾರೆ.

ಬೀಜ ಹುಟ್ಟುವ ತತ್ಕಾಲವೆಂದಡೆ
ಹೊಯ್ದಿದ್ದ ಹೊಯಿಗಿಲದಲ್ಲಿಯೆ ಬೇರು ಬಿಟ್ಟು ಸಸಿ ಬೆಳೆದು
ಎಲೆ ನೀಡಿ ಫಲ ಬೆಳೆದುದುಂಟೆ ?
ಸಕಲ ಸ್ಥಲ ಕುಳವನರಿತ ಬ್ರಹ್ಮಿ ತಾನೆಂದಡೆ
ಅರ್ಚನೆ ಅರತು, ಪೂಜೆ ನಿಂದು, ಸತ್ಯ ಕೆಟ್ಟು
ಭಕ್ತಿ ಹಾರಿದಲ್ಲಿ, ಆತ ನಿಜತತ್ತ್ವಜ್ಞನಪ್ಪನೆ ?
ಇದು ವಿಶ್ವಾಸದ ಭಿತ್ತಿ, ವಿರಕ್ತಿಯ ನಿಳಯ
ಸಂಗನ ಬಸವಣ್ಣನ ಭಕ್ತಿ ವಿರಕ್ತಿಗಿಕ್ಕಿದ ಕಟ್ಟು
ಬ್ರಹ್ಮೇಶ್ವರ ಲಿಂಗವ ಮುಟ್ಟುವ ಮುಟ್ಟು (ಸಂ.ವ.ಸಂ-2)

ನಿಜಸ್ಥಿತಿ ಹೀಗಿರುವಾಗ ಅದನ್ನು ಮರೆಮಾಡಿದ ವೀರಶೈವ ಸಾಹಿತಿಗಳು/ಮಠಾಧೀಶರು, ತುಡುಗುಣಿ ನಾಯಿ ತನ್ನ ಒಡೆಯನಿಗೆ ಬೊಗಳುವಂತೆ ಗುರುದ್ರೋಹ, ಧರ್ಮದ್ರೋಹ ಎಸಗಿದ್ದಾರೆ, ಎಸಗುತ್ತಿದ್ದಾರೆ. ತನ್ಮೂಲಕ ಸಮಾಜವನ್ನು ದಿಕ್ಕು ತಪ್ಪಿಸುತ್ತಿದ್ದಾರೆ ಎಂಬುದು ಅಂಗೈನೆಲ್ಲಿಯಷ್ಟು ಸ್ಪಷ್ಟವಾಗಿದೆ.

ಇಂಥ ಸಂದರ್ಭದಲ್ಲಿ ಕನ್ನಡದ ಕಟ್ಟಾಳು ದಿವಂಗತ ಅ.ನ.ಕೃ ಅವರ ಮಾತುಗಳನ್ನು ನೆನೆಯೋಣ, ಮೆಲುಕು ಹಾಕೋಣ.

''ಇತರ ಮತಾಚಾರ್ಯರಂತೆ ಬಸವಣ್ಣನವರು ದೊಡ್ಡ ಆಧ್ಯಾತ್ಮ ಗ್ರಂಥಗಳನ್ನಾಗಲಿ, ಸೂತ್ರಭಾಷ್ಯಗಳನ್ನಾಗಲೀ ರಾಮಾಯಣ, ಭಾರತ ತಾತ್ಪರ್ಯ ನಿರ್ಣಯಗಳನ್ನಾಗಲಿ ಬರೆಯಲಿಲ್ಲ. ಬರೆಯಬೇಕಾದ ಅಗತ್ಯವೂ ಇರಲಿಲ್ಲ. ಆ ಕೆಲಸವನ್ನು ಮಾಡುವ ಪಂಡಿತರಿಗೆ, ವೇದವಿದರಿಗೆ, ಬುದ್ಧಿಜೀವಿಗಳಿಗೆ ಭರತಖಂಡದಲ್ಲಿ ಕೊರತೆಯಿರಲಿಲ್ಲ. ಜನಸಾಮಾನ್ಯರ ಕೈಗೆ ನಿಲುಕದ ಸಂಸ್ಕೃತದಲ್ಲಿ ಸೂತ್ರಾಗಮ ಭಾಷ್ಯಗಳನ್ನು ಅವರು ಬರೆದಿದ್ದರೆ ಜನಪದಕ್ಕೆ ಏನು ಪ್ರಯೋಜನವಾಗುತ್ತಿತ್ತು ? ಇಂದು ಆಚಾರ್ಯರ ಭಾವ ವಿಚಾರಗಳನ್ನು ನಾವು ಅರಿಯಬೇಕಾದರೆ ಅವುಗಳನ್ನು ವ್ಯಾಖ್ಯಾನ ಮಾಡುವ ಪಂಡಿತರ,

ಅರ್ಚಕರ, ಮಠಾಧೀಶರ ಮೊರೆಹೋಗಬೇಕಾಗಿದೆ. ಪ್ರತಿಯೊಬ್ಬನೂ ಸಂಸ್ಕೃತವನ್ನು ಕಲಿತು ಅವುಗಳನ್ನು ನೇರವಾಗಿ ಅಧ್ಯಾವಸಾಯ ಮಾಡಿ ತನ್ನ ಜೀವನಕ್ಕೆ ತಂದುಕೊಳ್ಳಲಾರ. ಮಧ್ಯಸ್ಥಗಾರರಾದ ಈ ವ್ಯಾಖ್ಯಾನಕಾರರ ಕೈವಾಡದಿಂದ ಆಚಾರ್ಯರು ಹೇಳಿದ್ದೊಂದು, ನಾವು ತಿಳಿಯುವುದೊಂದಾಗಿ ಗುರುಶಿಷ್ಯರಿಗೆ ತಾಳಮೇಳವಿಲ್ಲದೆ ಹೋಗುತ್ತದೆ. ಬಸವಣ್ಣನವರು ಬುದ್ಧದೇವನಂತೆ ಜನಪದದ ಭಾಷೆಯನ್ನೇ ಅವಲಂಬಿಸಿದರು.

ಕನ್ನಡ ಭಾಷೆ, ಸಾಹಿತ್ಯ, ಆಧ್ಯಾತ್ಮಿಕ ಜೀವನಗಳಿಗೆ ಬಸವಣ್ಣನವರಿಂದ ಆಗಿರುವ ಮಹೋಪಕಾರ ಅಷ್ಟಿಷ್ಟಲ್ಲ. ಕನ್ನಡ ನುಡಿಯೊಡತಿಯನ್ನು ಪರಂಪರೆಯ ಸುವರ್ಣ ಶೃಂಖಲೆಯಿಂದ ಬಿಡಿಸಿದ ಕೀರ್ತಿ ಬಸವಣ್ಣನವರದು. 'ಕನ್ನಡವನ್ನು ಆಧ್ಯಾತ್ಮದ ಮಟ್ಟಕ್ಕೇರಿಸಿದ ತಮ್ಮ ಅನುಭಾವ ಸಾಹಿತ್ಯವನ್ನು ಜಗತ್ತಿಗೆ ಕೊಟ್ಟರು.''

ನಮಗೆ ಇನ್ನೇನು ಬೇಕು ? ಶರಣರೇ, ಬಂಧುಗಳೇ ಬನ್ನಿ. ನಾವು-ನೀವೆಲ್ಲ ಧರ್ಮಪಿತರ ವಾಣಿಯಲ್ಲಿ ನಂಬಿಕೆಯಿರಿಸಿ ವಚನಗಳ ಲೇಖನ-ಮನನ-ಧಾರಣಗಳ ಮೂಲಕ ಸೋಲನ್ನೇ ಅರಿಯದ ಬದುಕನ್ನು ರೂಪಿಸಿಕೊಳ್ಳೋಣ, ಜಾಣರಾಗೋಣ, ಬಲಿಷ್ಠರಾಗೋಣ.

ಆದ್ಯರ ವಚನ ಪರುಷ ಕಂಡಯ್ಯ
ಸದಾಶಿವನೆಂಬ ಲಿಂಗವ ನೆರೆ ನಂಬುವುದು
ನಂಬಲೊಡನೆ ನೀ ವಿಜಯಿ ಕಂಡಣ್ಣಾ
ಅಧರಕ್ಕೆ ಕಹಿ, ಉದರಕ್ಕೆ ಸಿಹಿ
ಲಿಂಗದೇವನ ಶರಣರ ವಚನ ಬೇವ ಸವಿದಂತೆ.

ಅಂತೂ ವಚನ ಸಾಹಿತ್ಯ ಭಂಡಾರದ ಕೀಲಿಕೈ ಪಡೆದವರು ಧನ್ಯಾತ್ಮರು-ಪುಣ್ಯವಂತರು-ಭಾಗ್ಯವಂತರು. ವಿದ್ಯೆ ಮತ್ತು ಸಂಪತ್ತಿಗಿಂತಲೂ ಹೆಚ್ಚಿನದಾದ ವಚನ ಸಂಸ್ಕಾರವನ್ನು ನಮ್ಮಲ್ಲಿ ತುಂಬಿದ-ತುಂಬುತ್ತಲಿರುವ ಪೂಜ್ಯ ಗುರುದ್ವಯರ ಶ್ರೀ ಪಾದಾರವಿಂದಗಳಿಗೆ ನಮೋ ನಮಃ.□

ಜಂಗಮವಾಗಿ ಬೇಹು ನೋಡ ಬಂದ ಲಿಂಗದೇವ

-ಮಾತೆ ಕಸ್ತೂರಿದೇವಿ

ಮೂವತ್ತೈದು-ನಲವತ್ತು ವರ್ಷಗಳು, ತನ್ನ ಆಯುಷ್ಯದ ಮುಕ್ಕಾಲು ಪಾಲನ್ನು ಜನಜಾಗೃತಿಗಾಗಿ, ಧಾರ್ಮಿಕ, ನೈತಿಕ, ಸಾಮಾಜಿಕ, ಆಧ್ಯಾತ್ಮಿಕ ಸುಧಾರಣೆಗಾಗಿ ಹಗಲಿರುಳು ದುಡಿದ ಜಂಗಮನೋರ್ವ ಕರ್ನಾಟಕದಲ್ಲಿ ಅತ್ಯಂತ ದೊಡ್ಡ ಸಮೂಹವಾದ ಲಿಂಗಾಯತ ಸಮಾಜವನೊಮ್ಮೆ ಚಿಕಿತ್ಸಕ ದೃಷ್ಟಿಯಿಂದ ಒಂದು ಸುತ್ತು ಸುತ್ತಿ ಬಂದ...?

ಇಂದಿನ ಸಿನಿಮಾ, ಟ.ವಿ., ಕೇಬಲ್ಲುಗಳ ಯುಗದಲ್ಲಿ ಜನರನ್ನು ಒಂಡೆಡೆ ಸೇರಿಸಿ ಧರ್ಮಬೋಧೆ ಮಾಡುವುದು ಅತ್ಯಂತ ಸಾಹಸದ ಕಾರ್ಯಗಳಲ್ಲಿ ಒಂದು. ಕಾರಣ ಜನ ಆಲಸ್ಯ-ಆಧುನಿಕತೆ-ಒಣಾಡಂಬರದ ಹೆಸರಿನಲ್ಲಿ ಕೀಳು ಅಭಿರುಚಿಗಳಿಗೆ ದಾಸರಾಗುತ್ತಿದ್ದಾರೆ. ಅದರಲ್ಲೂ ಈಗ ಮನುಷ್ಯರಿಗೆ ಕೆಡಲು ಇರುವಷ್ಟು ಸುಲಭದಾರಿಗಳು, ಅವನನ್ನು ಸನ್ಮಾರ್ಗಕ್ಕೆ ಎಳೆಯುವಷ್ಟು ಇಲ್ಲ. ದಿಢೀರ್ ಮುಕ್ತಿ, ಮನಶ್ಯಾಂತಿಯನ್ನು ಕೊಡಿಸುವ ಕೇಂದ್ರಗಳು ಅಲ್ಲಲ್ಲಿ ಹುಟ್ಟಿಕೊಂಡರೂ ಅವೆಲ್ಲ ಶಾಶ್ವತ ಸತ್ಪರಿಣಾಮ ಬೀರದೆ ತಾತ್ಕಾಲಿಕ ಪರಿಹಾರಗಳಾಗಿ ಕಂಡು ಬರುತ್ತವೆ. ಈ ಮಧ್ಯೆ ಶಾಸ್ತ್ರ ಪುರಾಣಗಳ ಆಧಾರದ ಹೆಣ್ಣು-ಮಣ್ಣು-ಹೊನ್ನು-ಅಧಿಕಾರ-ಅಂತಸ್ತು-ಕೀರ್ತಿಗಳಿಗಾಗಿ ಸತ್ತವರ ಪುಣ್ಯ ಕಥೆಗಳು ಅಲ್ಲಲ್ಲಿ ನಡೆದರೂ ಅವೆಲ್ಲ ತಲೆ ಬೆಳ್ಳಗಾದವರ, ನಿವೃತ್ತ ಜೀವನ ನಡೆಸುವವರ, ಕಾರ್ಯಕ್ರಮಗಳಾಗಿ ಭಜನೆ, ಹರಟೆ, ಕಾಲಹರಣ, ಊಟಗಳಲ್ಲಿ ಮುಕ್ತಾಯ ಕಾಣುತ್ತವೆ.

ಸದ್ಗುಣ-ಸುಜ್ಞಾನ -ಸಂಸ್ಕಾರಗಳನ್ನು ಜನಮನದಲ್ಲಿ ಬಿತ್ತಿ ಬೆಳೆಯುವ, ಎಲ್ಲಾ ವಯಸ್ಸಿನ, ಅಕ್ಷರಸ್ಥ, ಅನಕ್ಷರಸ್ಥ ಅಭಿರುಚಿಯ, ಚಿಂತಕರನ್ನು ಆಕರ್ಷಿಸುವ ಚಿದ್ಗೋಷ್ಠಿಗಳು ಹಿಂದು ಸಮಾಜದಲ್ಲಿ ಇಲ್ಲವೆಂದರೂ, ಬೆರಳೆಣಿಕೆಯಷ್ಟಾದರೂ ಕಂಡು ಬರುತ್ತವೆ. ಇದರಿಂದ ನೈತಿಕ ಜವಾಬ್ದಾರಿಯುತ ಪ್ರಾಮಾಣಿಕ ಕಳಕಳಿಯುಳ್ಳ. ಪ್ರಜ್ಞಾವಂತರು ನಮ್ಮ ನಡುವೆ ಇನ್ನೂ ಇದ್ದಾರೆ ಎಂದು ಸಮಾಧಾನವಾಗುತ್ತದೆ.

ಈ ಮಧ್ಯೆ ತಮಾಷೆ ಎಂದರೆ ಹಲವು ಮಠಾಧೀಶರು (ಸಂಘ-ಸಂಸ್ಥೆಗಳು) ಸಾಮಾನ್ಯ ಗೃಹಸ್ಥರಂತೆ ವೈಯಕ್ತಿಕ ಕಾರಣಗಳಿಗಾಗಿ ಅದ್ದೂರಿಯಿಂದ ಸಮಾರಂಭಗಳನ್ನು ನಡೆಸಿದರೂ ಅಂಥಲ್ಲಿ ರಾಜಕಾರಣಿಗಳ ನಡುವೆ ಹರಕೆಯ ಕುರಿಗಳಾಗಿ ಶೋಭಿಸುತ್ತಿದ್ದಾರೆ. ಇಂಥ ಸಮಾರಂಭಗಳಿಗೆ ಅಂಧಾಭಿಮಾನದಿಂದ ಜನ ಸೇರಿದರೂ ಅಲ್ಲಿ ಮನಸ್ಸು, ಬುದ್ಧಿ ಮತ್ತು ಇಂದ್ರಿಯಗಳ ಪಕ್ವತೆಗೆ ಯಾವುದೇ ಸಂಸ್ಕಾರ ಸಿಗದಿರುವುದು ಕಂಡು ಬರುತ್ತದೆ. ಅಲ್ಲಿ ನೆರೆದ ಜನಸಾಗರವನ್ನು ನೋಡಿ ನಾವು ಉಬ್ಬುವಂತೆಯೂ ಇಲ್ಲ. ಏಕೆಂದರೆ ಇಂಥ ಜನ ಆಗಲೇ ಸರ್ವಜ್ಞನ ಅವಹೇಳನಕ್ಕೆ, ಲೇವಡಿಗೆ ಪಾತ್ರರಾಗಿದ್ದಾರೆ.

ಗಂಧವ ತೇದಲ್ಲಿ ಒಂದು ನೊಣವನು ನಾ ಕಾಣೆ.
ಸಂಧಿಸಿ ಮಲವ ಬಿಡುವಲ್ಲಿ । ನೊಣ
ಬಂದು ಮುತ್ತುವುದು ನೋಡು ಸರ್ವಜ್ಞ ॥

ಗಂಧವನ್ನು ತೇದಲ್ಲಿ ನೊಣಗಳಿಗೇನು ಕೆಲಸ ? ಅದೇ ಮಲವಿಸರ್ಜನೆ ಇದ್ದಲ್ಲಿ ನೋಡಿರಿ ನಾ ಮುಂದೆ-ತಾ ಮುಂದೆ ಎಂದು ಸ್ಪರ್ಧೆಗಿಳಿಯುತ್ತವೆ. ಹೋಗಲಿ, ತಮ್ಮ ಅಭಿರುಚಿಯ ಆಹಾರವನ್ನು ಪಡೆದಾದರೂ ಸುಮ್ಮನಿರುತ್ತವೆಯೆ? ಇಲ್ಲ. ಅಜ್ಞಾನ, ಮೂಢನಂಬಿಕೆಯಂಥ ಸಾಂಕ್ರಾಮಿಕ

ರೋಗಗಳನ್ನು ಹರಡುತ್ತ ಅಂತ್ಯ ಕಾಣುತ್ತವೆ. ತಮ್ಮ ಧರ್ಮದ ಸತ್ವಯುತ ಮೂಲ ಸಾರವನ್ನು ಅರಿಯುವ ಪ್ರಯತ್ನ ಮಾಡದೆ ಇತರ ಮತ-ಪಂಥಗಳಿಗೆ ಹೋಗುವ ಮೂಢ ಲಿಂಗಾಯತರದು ಇದೇ ಪರಿಸ್ಥಿತಿ ಎನ್ನದೆ ವಿಧಿಯಿಲ್ಲ.

ಎಂದೆಂದಿಗೂ ಧರ್ಮ, ಸಮಾಜ, ರಾಷ್ಟ್ರಪ್ರಜ್ಞೆಯನ್ನು ಬಿತ್ತಿ ಬೆಳೆಯದ, ಚಿಂತಿಸದ ವ್ಯಕ್ತಿ ಕೇಂದ್ರಿತ, ಸ್ವಾರ್ಥ ಪ್ರೇರಿತ ಕಾರ್ಯಕ್ರಮಗಳು ಲಿಂಗಾಯತ ಮತ್ತು ವೀರಶೈವರಲ್ಲಿ ಹೇರಳವಾಗಿ ಜರುಗುತ್ತಿರುತ್ತವೆ. ಇದಕ್ಕೆ ಕಾರಣ ಈ ಸಮಾಜದಲ್ಲಿ ನೆಲೆಯೂರಿರುವ ಬಹುಸಂಖ್ಯಾತ ಪುರೋಹಿತಶಾಹಿ ಮಠಾಧೀಶರು, ಇವರಿಗೆ ಬೆನ್ನೆಲುಬಾಗಿ ನಿಂತಿರುವ ವ್ಯಾಪಾರಿ ಮನೋಭಾವದ ಕೆಲವು ಸಿರಿವಂತರು, ಗಣ್ಯರು ; ಇವರೊಂದಿಗೆ ಕೈಜೋಡಿಸಿರುವ ಜಾತಿವಾದಿ ಸಾಹಿತಿಗಳು, ಪತ್ರಕರ್ತರು. ಲಿಂಗಾಯತರು ಸುಮಾರು ಮೂರುಸಾವಿರ ಕಾವಿಧಾರಿಗಳನ್ನು ಸಾಕುತ್ತಿದ್ದಾರೆ ಎಂದು ಒಂದು ಅಂಕಿಅಂಶದ ಅಂದಾಜು. ಇವರು ಇಷ್ಟು ಜನ ಸೇರಿ ಇದುವರೆಗೂ ಈ ಸಮಾಜಕ್ಕೆ ಕೊಟ್ಟಿರುವ ಕೊಡುಗೆ ಏನು ? ಇವರ ಜೀವನ, ಸಾಧನೆ, ಸಿದ್ಧಿ ಸಂದೇಶಗಳೇನು ? ಈ ಸಮಾಜಕ್ಕೆ ಇಷ್ಟೊಂದು ಕಾವಿಧಾರಿಗಳ ಅಗತ್ಯವಿದೆಯೆ ? ತಮ್ಮ ಆಳವಾದ ದುರುದ್ದೇಶ ಸಾಧನೆಗಳಿಗಾಗಿ ಇವರಿಗೆಲ್ಲ ಈ ಸಮಾಜವೇ ಬೇಕಾಗಿತ್ತೇ ? ಬೇರೆ ಧರ್ಮ, ಮತ, ಪಂಥ ಜಾತಿಗಳು ಇವರನ್ನು ಸೇರಿಸಲಿಲ್ಲವೆ ? ಎಂಬುದು ಗಮನಾರ್ಹ ಪ್ರಶ್ನೆಗಳು. ಇವುಗಳಿಗೆ ಲಿಂಗಾಯತ ಸಮಾಜದ ಪ್ರಾಜ್ಞರೇ ಉತ್ತರಿಸಬೇಕು !!

ಇನ್ನು ಇವರ ಜೀವನ ಸಾಧನೆ, ಸಿದ್ಧಿ, ಸಂದೇಶಗಳ ಬಗ್ಗೆ ಸ್ವಲ್ಪಮಟ್ಟಿಗೆ ಗಮನ ಹರಿಸೋಣ.

1. ನಶ್ವರವಾದ ಮಠ-ಪೀಠಗಳ ಆಸ್ತಿಗಾಗಿ, ತ್ಯಾಗ ವಿರಕ್ತಿಗಳ ಮರೆಯಲ್ಲಿ ಹೋರಾಡುತ್ತಾ-ಕಚ್ಚಾಡುತ್ತಾ ಇಡೀ ಸಮಾಜವೇ ತಲೆ ತಗ್ಗಿಸುವಂತೆ ಮಾಡುವುದು.
2. ಶಾಲಾ ಕಾಲೇಜುಗಳಂಥ ನಿರ್ಜೀವ ಕಟ್ಟಡಗಳ ನಿರ್ಮಾಣದಲ್ಲಿ ತೊಡಗುವುದು. ತನ್ಮೂಲಕ ಸ್ವತಂತ್ರ ಧೀರತ್ವವಿಲ್ಲದ, ದುರ್ಬಲ, ನಿರ್ವೀರ್ಯ ಜನಾಂಗವೊಂದನ್ನು ಸೃಷ್ಟಿಸುವುದು.
3. ಸಮರ್ಪಣಾ ಮನೋಭಾವದ ಒಬ್ಬ ತ್ಯಾಗಿಯನ್ನು ನಿರ್ಮಿಸುವ ಯೋಗ್ಯತೆ-ಶಕ್ತಿ ಇಲ್ಲದಿದ್ದರೂ, ವಿಧ್ವಂಸಕ ಕೃತ್ಯಗಳಲ್ಲಿ ತಮ್ಮ ದುರ್ಬಲ ಶೌರ್ಯವನ್ನು ಮೆರೆಯುವುದು.
4. ಬಸವ ವಿರೋಧಿ ಚಟುವಟಿಕೆಗಳಲ್ಲಿ ಮಾತ್ರ ಗುರು-ವಿರಕ್ತರು ಸಮಾನತೆ ಸಾಧಿಸುವುದು.
5. ಎದೆ ಸೀಳಿದರೂ ಮೂರಕ್ಷರ (ಬಸವ) ಇರದ ಕಾವಿಧಾರಿಗಳೆಲ್ಲ ಕರ್ತವ್ಯಹೀನರಾಗಿ ಹಾದಿಗೊಂದು ಬೀದಿಗೊಂದು ಚಿಕ್ಕ ಚಿಕ್ಕ ಮಠ ಕಟ್ಟಿಕೊಂಡು "ನಾನೊಬ್ಬ ಸ್ವತಂತ್ರ ಸ್ವಾಮಿ" ಎಂದುಕೊಳ್ಳುತ್ತಾ ಅಲ್ಪತೃಪ್ತನಾಗುವುದು, ಹೊಟ್ಟೆ ಹೊರೆದುಕೊಳ್ಳುವುದು.
6. ತನು-ಮನ-ಧನವನ್ನು ಗುರು-ಲಿಂಗ-ಜಂಗಮಕ್ಕೆ ಸವೆಸದೆ, ಹೆಣ್ಣು-ಹೊನ್ನು-ಮಣ್ಣಿಗಾಗಿ ಸವೆಸುತ್ತಾ ಗೃಹಸ್ಥರಿಂದಲೂ ಕೀಳಾಗಿ ಬದುಕುವುದು.
7. ಕಾವಿಹಾಕಿಕೊಂಡಿದ್ದರೂ, ಗುರುಚರಕ್ಕೆ ವಂಚಿಸಿ (ಗುಟ್ಟಾಗಿ) ಹೆಂಡತಿ ಮಕ್ಕಳು, ಬಂಧು ಬಾಂಧವರನ್ನು ಪೋಷಿಸುವುದು.
8. ಭಕ್ತರ ಭವನಂಗಳಂ ಹೊಕ್ಕು ಬಿನ್ನಹ ತೀರಿಸುವುದು, ತತ್ತ್ವವಿರೋಧಿ ಚಟುವಟಿಕೆಗಳಲ್ಲಿ ತೊಡಗಿ, ಕನಿಷ್ಟ ಆದರ್ಶಗಳು ಇಲ್ಲದೆ ಬದುಕುವುದು. ಜನರನ್ನು ತಪ್ಪುದಾರಿಗೆ ಎಳೆಯುವುದು.
9. ಮೇಲ್ನೋಟಕ್ಕೆ ಬಸವ ನಿಷ್ಠರಂತೆ ತೋರಿದರು, ಅಂತರಂಗದಲ್ಲಿ ಬಸವ ವಿರೋಧಿಗಳಾಗಿ ಲಿಂಗಾಯತ ಧರ್ಮ ಮಹಾಮನೆಯ ಮನೆಯ ಮಕ್ಕಳಾಗದೆ ಮನೆಕಳ್ಳರಂತೆ ವರ್ತಿಸುವುದು. ಕೆಲವರು ಬಹಿರಂಗ ಬಸವ ಶತ್ರುಗಳಾಗಿರುವುದು.

10. ಕೃತ್ರಿಮ ಸಾಹಿತ್ಯ ರಚನೆ, ಪುಂಡಾಟಿಕೆ, ಗುಂಪುಗಾರಿಕೆ, ಸಾತ್ವಿಕರ ಮೇಲೆ ಹಲ್ಲೆ, ದೌರ್ಜನ್ಯ, ಆಕ್ರಮಣ ಮಾಡುವುದು/ಮಾಡಿಸುವುದು.
11. ಅನ್ಯಚಿಂತೆಗ್ರೆಯದ ತತ್ತ್ವನಿಷ್ಠ ಧರ್ಮಪ್ರಚಾರಕರಿಗೆ ಅಡ್ಡಗಾಲು ಹಾಕುವುದು, ತಮ್ಮಲ್ಲಿರುವ ದಾನವ-ಮಾನವ ಶಕ್ತಿಯನ್ನು ಎಲ್ಲಾ ರೀತಿಯ ಕಿರುಕುಳ ಕೊಡಲು ಬಳಸುವುದು. ತನ್ಮೂಲಕ ರಾಕ್ಷಸಿ ಆನಂದವನ್ನು ಅನುಭವಿಸುವುದು.
12. ಈ ಸಮಾಜದ ಅನೇಕ ಉತ್ಸಾಹಶೀಲ ತರುಣ/ತರುಣಿಯರು, ಸೇವೆ-ತ್ಯಾಗಕ್ಕೆ ವಿಪುಲವಾದ ಅವಕಾಶವಿದ್ದಾಗ್ಯೂ ವ್ಯವಸ್ಥಿತವಾದ ಶೋಷಣೆಯನ್ನು ಎದುರಿಸಲಾರದೆ ಮತ್ತು ಅತ್ಯಂತ ಪ್ರಖರವಾದ ಬಸವ ಬೆಳಕನ್ನು ನೋಡುವ ಶಕ್ತಿ ಗಳಿಸದೆ ಅನ್ಯ ಧರ್ಮ, ಮತ, ಪಂಥಗಳಲ್ಲಿ ಸೇರಿ ದುಡಿಯುವುದು.
13. ಇವರು ಒಂದು ಬೃಹತ್ ಜನಾಂಗದ ಪ್ರತಿನಿಧಿಗಳಂತೆ ತೋರಿದರೂ ಸಮಾಜ-ಧರ್ಮ-ರಾಷ್ಟ್ರಗಳ ಅಸ್ತಿತ್ವಕ್ಕೆ ಧಕ್ಕೆ ಬಂದಾಗಲೆಲ್ಲ ಇವರಲ್ಲಿ ಯಾರೊಬ್ಬರು ಸೌಜನ್ಯಕ್ಕಾದರೂ ಖಂಡಿಸುವ ಕನಿಷ್ಠ ಎದೆಗಾರಿಕೆಯನ್ನು ತೋರದಿರುವುದು.
14. ಧರ್ಮ ಸಮ್ಮತವಲ್ಲದ ಗುಡಿ-ಗುಂಡಾರಗಳಿಗೆ ಹೋಗುವುದು/ಕಾರ್ಯಕ್ರಮಗಳಲ್ಲಿ ಭಾಗಿಗಳಾಗಿ ತಾವು ಮತ್ತು ತಮ್ಮ ಹಿಂಬಾಲಕ ಜನರನ್ನು ತ್ರಿಶಂಕು ಸ್ಥಿತಿಯಲ್ಲಿರಿಸುವುದು. ಇತ್ಯಾದಿಗಳು.

ಇವರನ್ನು ವರ್ಣಿಸುತ್ತಾ ಹೋದರೆ ನನ್ನ ಲೇಖನಿ ಎಲ್ಲಿ ದುರ್ಬಲವಾಗುತ್ತದೋ ಎಂಬ ಭಯ ನನಗೆ. ಆದ್ದರಿಂದ ಇವರ ಸಾಧನೆ-ಸಿದ್ಧಿ ಸಂದೇಶಗಳನ್ನು ಇಲ್ಲಿಗೆ ಮೊಟಕುಗೊಳಿಸುತ್ತೇನೆ.

ಇಂಥವರನ್ನೇ ನಂಬಿಕೊಂಡು ಬದುಕುತ್ತಿರುವ ಲಿಂಗಾಯತ ಸಮಾಜದ ಒಂದು ಪಕ್ಷಿ ನೋಟ.

ಸಾಮಾನ್ಯವಾಗಿ ಪ್ರಾಣಿಗಳಲ್ಲಿಯೂ ತಮ್ಮ ಸ್ವಂತ ಅಸ್ತಿತ್ವದ ಬಗ್ಗೆ ಅರಿವು ಇದ್ದು ಒಂದು ವ್ಯವಸ್ಥಿತವಾದ-ಸುಭದ್ರವಾದ ಜೀವನ ಶೈಲಿಯನ್ನು ಅನುಸರಿಸಿ ಒಟ್ಟಾಗಿ ಬದುಕುತ್ತವೆ. ಇಂದಿನ ಲಿಂಗಾಯತನ ಸ್ಥಿತಿ ಇದಕ್ಕೂ ಕೀಳಾಗಿದೆ. ಏಕೆಂದರೆ ಗುರು ಬಸವಣ್ಣನವರಂಥ ಮಹಾಭಾಗ್ಯವನ್ನು-ವಚನ ಸಾಹಿತ್ಯದಂಥ ಅಮೂಲ್ಯವಾದ ಸತ್‌ಸಂಪತ್ತು, ಚಿದೈಶ್ವರ್ಯವನ್ನು ಹೊಂದಿರುವ ಈ ಸಮಾಜ ಮಹಾತ್ಮ ಗಾಂಧೀಜಿಯವರ ಮಾತಿನಂತೆ "ಬಸವಣ್ಣನವರ ಅನುಯಾಯಿಗಳು ಅವರ ತತ್ತ್ವಗಳನ್ನು ಸರಿಯಾಗಿ ಪಾಲಿಸಿದರೆ ಭಾರತವನ್ನೇ ಏಕೆ ಜಗತ್ತನ್ನೇ ಉದ್ಧರಿಸಬಲ್ಲರು" ಈ ಹೊತ್ತಿಗಾಗಲೇ ಜಗತ್ತಿನಲ್ಲಿಯೇ ಅತ್ಯಂತ ಕೀರ್ತಿಶಾಲಿಯಾಗಿ ಬೆಳಗಬೇಕಾಗಿತ್ತು. ಆದರೆ ಹಾಗಾಗದೆ " ನೀನು ಮತಾಂಧ ವೀರಶೈವನಲ್ಲ ; ಮೂಢ ಹಿಂದುವಲ್ಲ ; ದೇವರನ್ನು ಮರೆತ ಮಾನವನೂ ಅಲ್ಲ ; ಮನುಷ್ಯತ್ವವನ್ನು ಮರೆತ ದಾನವನೂ ಅಲ್ಲ ; ನೀನೊಬ್ಬ ಅರಿವುಳ್ಳ ಶ್ರೇಷ್ಠ ಲಿಂಗಾಯತ, ಸತ್ಪರಂಪರೆಯಿಂದ ಬಂದ ಶರಣ" ಎಂದು ಪ್ರತಿಯೊಬ್ಬರನ್ನು ತಿವಿದು, ತಿವಿದು ಎಚ್ಚರಿಸಬೇಕಾದ ದುಃಸ್ಥಿತಿ ನಿರ್ಮಾಣವಾಗಿರುವುದು ಉದಾಸೀನ ಮಾಡುವ ಸಾಮಾನ್ಯ ಸಂಗತಿಯಲ್ಲ ; ನಾಚಿ ತಲೆತಗ್ಗಿಸಬೇಕಾದ ವಿಚಾರ.

12ನೇ ಶತಮಾನದಲ್ಲಿ ಅತ್ಯಂತ ಉಚ್ಛ್ರಾಯ ಸ್ಥಿತಿಯಲ್ಲಿದ್ದು ಸತ್ಯಪ್ರಿಯತೆ, ತತ್ವ ಧೀಮಂತಿಕೆ, ನಿಷ್ಠೆ ಶೌರ್ಯ, ತ್ಯಾಗ, ಬಲಿದಾನಗಳಿಗೆ ಹೆಸರಾಗಿದ್ದ ಈ ಜನ ಇಂದು ಅಂದರೆ 21ನೇ ಶತಮಾನದಲ್ಲಿ ಎಲ್ಲವನ್ನೂ ಕಳೆದುಕೊಂಡು, ಪುರೋಹಿತಶಾಹಿಯಿಂದ ಜಾತೀಯತೆ, ಬಹುದೇವತೋಪಾಸನೆ ಎಂಬ ಅರಿವಳಿಕೆ ಪಡೆದು, ಜಡತ್ವ ತುಂಬಿಕೊಂಡು ನಮ್ಮ ಮುಂದೆ ಮಲಗಿದೆ.

" ಓ ! ಬಸವ ತಂದೆ ನೀನು ಅಂದು, ಕ್ರೂರ ಸಂಪ್ರದಾಯದ ವಿರುದ್ಧ ಸಾಧಿಸಿ, ತೋರಿಸಿ, ಬೋಧಿಸಿದ ಮಾನವೀಯ ಸತ್ಯವನ್ನು ಇಂದಿನ ಈ ಜನ ಎಲ್ಲಾ ಆಧುನಿಕ ಸೌಲಭ್ಯಗಳಿದ್ದು ಏಕೆ ಅರ್ಥಮಾಡಿಕೊಳ್ಳುತ್ತಿಲ್ಲ ?

ಒಂದು ಕಡೆ ಮೇಲ್ವರ್ಗದವರು; ಚಿಂತನಶೀಲರು ಎನ್ನಿಸಿಕೊಂಡವರಿಂದ "ಡೈನೋಸರಸ್ (ನಿಧಾನಗತಿಯ ದೈತ್ಯ ಪ್ರಾಣಿ) ಉಳ್ಳಾಗಡ್ಡೆ ತಲೆಯವರು (ಪೆದ್ದರು-ದಡ್ಡರು) ಎದೆ ಮೇಲೆ ಕಲ್ಲು ಕಟ್ಟಿಕೊಂಡವರು" ಎಂಬ ಅಪಹಾಸ್ಯಕ್ಕೆ ಲೇವಡಿಗೆ ಒಳಗಾಗಿದ್ದಾರೆ.

ಇನ್ನೊಂದು ಕಡೆ ತಾವು ಕಟ್ಟಿಕೊಂಡಿರುವ ದೇವರ ಮೇಲೆ ದೃಢನಂಬಿಕೆಯಿಲ್ಲದೆ ನೈತಿಕವಾಗಿ ಪತನ ಹೊಂದಿ ಮಾಜಿ ಲಿಂಗಾಯತರಾಗಿರುವ ಇವರನ್ನು ಕೆಳವರ್ಗದವರು "ಎದೆ ಮೇಲೆ ಕಲ್ಲು ಇರುವವರನ್ನು ನಂಬಬಾರದು" ಎಂದು ಬಲವಾಗಿಯೇ ದೂಷಿಸುತ್ತಾರೆ.

ಈ ಜನ ಹೀಗೆ ಅನ್ಯರಿಂದ ಅನ್ನಿಸಿಕೊಂಡು ಇನ್ನು ಎಷ್ಟು ದಿನ ಬದುಕಬೇಕೆನ್ನುತ್ತಾರೆ. ಜಡತ್ವ ತುಂಬಿಕೊಂಡು ಉಸಿರಾಡುತ್ತಿರುವ ಇವರನ್ನು ಪುನಃ ಚೇತನ ತುಂಬಿ, ಮೇಲೆತ್ತಿ ಮೊದಲಿನ ಸ್ಥಿತಿಗೆ ತರುವ ಸಾಧನ ಯಾವುದು ? ಮೇಲಿನ ಸಮಸ್ಯೆಗೆ ಪರಿಹಾರವೇನು ?

ಇದು ನಿರಂತರವಾದ ಧರ್ಮಪ್ರಚಾರದಿಂದ ಮಾತ್ರ ಸಾಧ್ಯ. ಇಂಥ ಕೆಲಸ ಮಾಡುವವರು ಈ ಸಮಾಜದಲ್ಲಿ ಎಷ್ಟು ಜನ ಇದ್ದಾರೆ ? ಇರುವ ಬೆರಳೆಣಿಕೆಯಷ್ಟು ಮಂದಿಯ ಅನುಭವವನ್ನು ನೋಡೋಣ.

ಒಬ್ಬ ತ್ಯಾಗಿ ತನು-ಮನ-ಪ್ರಾಣ-ಅಭಿಮಾನ-ಸಮಯ-ಅರ್ಥ-ಕೀರ್ತಿಗಳ ಹಂಗನ್ನು ತೊರೆದು ಸಮಾಜದ ಉದ್ಧಾರಕ್ಕೆಂದು ಟೊಂಕಕಟ್ಟಿ ನಿಲ್ಲುತ್ತಾನೆ. ಸಮಾಜ ಸುಧಾರಕನ ಅತಿ ದೊಡ್ಡ ದೌರ್ಬಲ್ಯ ಎಂದರೆ ಅವನ ಪ್ರಾಮಾಣಿಕ ಕಳಕಳಿಯನ್ನು ದಾಸ್ಯತ್ವ-ಶೋಷಣೆ-ಅಜ್ಞಾನಕ್ಕೆ ಒಳಗಾದ ಸಮಾಜ ಅರ್ಥಮಾಡಿಕೊಳ್ಳದಿರುವುದು. ಏಕೆಂದರೆ ತನ್ನ ತ್ಯಾಗ-ಸೇವೆಯನ್ನು ಸಮಾಜ ಗುರುತಿಸದಿದ್ದರೂ ಚಿಂತಿಸದೆ ಮನುಕುಲದ ಮೇಲಿನ ಅಪಾರವಾದ ಅನುಕಂಪದಿಂದ ಕಾರ್ಯಗೈಯುತ್ತಾನೆ. ಎದೆಗೆಡದೆ ನಿಂತ ಅವನಿಗೆ ನುಂಗಲು ನಿಂದೆಗಳೆಂಬ ಕೆಂಡದ ಉಂಡೆಗಳನ್ನು ಕೊಡುತ್ತದೆ. ಕಿರುಕುಳವೆಂಬ ಬಟ್ಟೆಗಳನ್ನು ನೀಡುತ್ತದೆ. ಕ್ರಾಂತಿಕಾರಕ ಧರ್ಮ ಪ್ರಸಾರಕರೂ, ಪ್ರವಚನ ಪಿತಾಮಹರೆಂದೇ ಖ್ಯಾತನಾಮರಾಗಿದ್ದ ಪೂಜ್ಯ ಶ್ರೀ ಲಿಂಗಾನಂದ ಅಪ್ಪಾಜಿಯವರು ತಮ್ಮ ಶಿಷ್ಯವೃಂದಕ್ಕೆ ಬೋಧಿಸುತ್ತಿದ್ದರು. "ಧರ್ಮಪ್ರಚಾರ ಅಥವ ಪ್ರವಚನ ಎನ್ನುವುದು ಅನುಕರಣೀಯ ಕಲೆಯಲ್ಲ ; ಅದಕ್ಕೆ ಬೇಕಾಗಿರುವುದು Master power ; that is genius. ಜನಜಾಗೃತಿ ಮಾಡಬೇಕು ಎನ್ನುವ ಸಾಧಕನಿಗೆ ಸಮಚಿತ್ತತೆಯಿಂದ ಕೂಡಿದ ಅಸಾಮಾನ್ಯವಾದ ಆತ್ಮಬಲ ಬೇಕು. ಅದನ್ನು ಗಳಿಸಿಕೊಳ್ಳಿರಿ."

ಇದೇ ಸಮಾಜದ ಮತ್ತೊಬ್ಬ ಮಠಾಧೀಶರ ಉಪದೇಶವನ್ನು ಇಲ್ಲಿ ಬರೆಯುತ್ತೇನೆ. "ಎಷ್ಟೇ ಉನ್ನತಮಟ್ಟದ ಪ್ರಗತಿಪರ ಆಚಾರ-ವಿಚಾರಗಳನ್ನು ಪ್ರತಿಪಾದಿಸಿದರೂ ಮೊದಲಿಂದ ಬಂದ ಸಂಪ್ರದಾಯಗಳ ವಿರುದ್ಧ ಹೊರಬರುವುದು ಕಷ್ಟಸಾಧ್ಯ. ಅಲ್ಲದೆ ಜನ್ಮಮಾತ್ರದಿಂದಲೇ ಸಿಕ್ಕಿರುವ ಶ್ರೇಷ್ಠತೆಯ ಸೌಲಭ್ಯಗಳಿಂದ ವಂಚಿತರಾಗುವುದು ಜಾಣರ ಲಕ್ಷಣವಲ್ಲ."

ಮೇಲಿನ ಮಾತುಗಳಲ್ಲಿ ಸಂಬಂಧಿಸಿದ ಗುರು-ಶಿಷ್ಯ-ಭಕ್ತ ವರ್ಗದವರು ತಮ್ಮ ತಮ್ಮ ಪ್ರತಿಬಿಂಬಗಳನ್ನು ನೋಡಿಕೊಳ್ಳಬಹುದು.

ಆದರೆ ಬಸವ ಪ್ರಜ್ಞೆ, ಬಸವ ನಿಷ್ಠೆ, ಬಸವ ಧೈರ್ಯಗಳನ್ನು ತುಂಬಿಕೊಂಡು ಧರ್ಮ ಪ್ರಚಾರಕ್ಕೆ ಹೊರಟ ಸಾಧಕನ/ಸಾಧಕಿಯ ಪರಿ ಹೀಗಲ್ಲ. ಅವರ ನಿಲುವೇ ಬೇರೆ. ಯಾವುದೇ ಮೇಲು ಕೀಳು ಎನ್ನದೆ

ಆಸಕ್ತಿ ಇರುವ ಎಲ್ಲಾ ಜಾತಿ, ವರ್ಗ, ವರ್ಣದವರನ್ನು ತನ್ನ ಬಳಿಗೆ ಆಕರ್ಷಿಸುತ್ತಾನೆ. ಇವನ ಹತ್ತಿರ ಸುಳಿಯುವ ಜನರಾದರೂ ಅಷ್ಟೆ ಸುವಾಸಿತ ಹೂವಿಗೆ ಆಕರ್ಷಿತರಾಗಿ ಬರುವ ಜೇನ್ನೊಣಗಳಂತೆ. ಪ್ರವಚನಾಮೃತವನ್ನು ತಾವು ಸವಿದು ಬದುಕುತ್ತವೆ ; ಲೋಕವನ್ನು ಬದುಕಿಸುತ್ತವೆ. ಇದಕ್ಕೆ ಜನಪದ ಕವಿಯೊಬ್ಬ ಸಾಕ್ಷಿ ನುಡಿಯುತ್ತಾನೆ.

ಸೋಸಿ ವಚನದ ತಿರುಳ ಬೀಸಿದವು ಶಿವಗಾಳಿ
ಮೂಸಿ ಬಂದಂತೆ ಗುಂಗಿಗಳು । ಹೂಗಳಿಗೆ
ರಾಸಿ ಜನ ಬಂತು ಮಂಟಪಕೆ ॥ (ಸೇ.ಅ.74)

ಉಗ್ಘಡಿಸುವ ಕಾಯಕದ ಶರಣ ಬಿಬ್ಬಿದೇವಯ್ಯನವರು ಇವನ ಕಾರ್ಯಕ್ಕೆ ಸಹಮತ ಸೂಚಿಸುತ್ತಾರೆ. ಕೈ ಬೀಸಿ ಕರೆಯುತ್ತಾರೆ.

ಭಾವ ಭ್ರಮೆವಂತರು ಬಾರದಿರಿ, ಜ್ಞಾನಹೀನರು ಬೇಗ ಓನ್ನಿ
ತ್ರಿವಿಧ ಮಲಕ್ಕೆ ಕಚ್ಚಿ-ಮುಚ್ಚಿ ಹೊಡುದಾಡುವರತ್ತಲಿರಿ
ನಿರುತ ಸ್ವಯಾನುಭಾವರು ಬನ್ನಿ, ಪರಬ್ರಹ್ಮ ಸ್ವರೂಪರು ಬನ್ನಿ
ಏಕಲಿಂಗನಿಷ್ಠಾಪರ ದೃಢವಂತರು ಬನ್ನಿ
ಸನ್ಮಾರ್ಗ ಸತ್ಕ್ರಿಯಾವಂತರು ಬನ್ನಿ ಎಂದು ಎನಗೆ
ಕೊಟ್ಟ ಕಾಯಕ ಲಿಂಗದೇವರಲ್ಲಿ ಬಸವಣ್ಣ.

ಸಂಖ್ಯಾದೃಷ್ಟಿಯಿಂದ ಪಾಂಡವರಾದರೂ ಬರಲಿ, ಗುಣೈಕ್ಯ ದೃಷ್ಟಿಯಿಂದ ಕೌರವರಾದರು ಬರಲಿ ವಿಚಲಿತನಾಗದೆ ತನ್ನ ಶರೀರದಲ್ಲಿ ಉಸಿರು ಇರುವವರೆಗೂ ಜ್ಞಾನ ದೀವಿಗೆ ಹಚ್ಚುತ್ತಾ ಸಾಗುತ್ತಾನೆ.

ಜನಮನದಲ್ಲಿ ತತ್ತ್ವದ ಬೀಜಗಳನ್ನು ಬಿತ್ತುತ್ತ ಹೋಗುತ್ತಾನೆ. ಇಂದಲ್ಲ. ನಾಳೆಯಲ್ಲ ಮುಂದೊಂದು ದಿನ ಅವು ಫಲ ಕೊಡುತ್ತವೆ. ಎಂಬ ಅಚಲವಾದ ಸತ್ಯವಿಶ್ವಾಸ ಅವನದು. ತನ್ನ ಕಠಿಣ ಪರಿಶ್ರಮದಿಂದ ಒಬ್ಬಿಬ್ಬ ಆದರ್ಶ ತ್ಯಾಗಿಗಳು ತಯಾರಾದರೂ ಸಾಕು, ಅವರಿಂದ ಬೇಕಾದಷ್ಟು ಕೆಲಸಗಳು ಆಗುತ್ತವೆ ಎಂಬ ನಂಬಿಕೆ ಅವನಿಗೆ. ಅವನ ಈ ನಂಬಿಕೆಗೆ ಚಿನ್ಮಯಜ್ಞಾನಿ ಚನ್ನಬಸವಣ್ಣನವರು "ಲಕ್ಷಕ್ಕೊಬ್ಬ ಭಕ್ತ ; ಕೋಟಿಗೊಬ್ಬ ಶರಣ" ಎಂದು ಹೇಳುತ್ತಾ ಧೈರ್ಯ ತುಂಬುತ್ತಾರೆ. ಅದೇ ದಾರಿಯಲ್ಲಿ ಮುಂಸಾಗಲು ಊರುಗೋಲಾಗುತ್ತಾರೆ.

ಆದರೆ ಇಂದಿನ ಲಿಂಗಾಯತರ ಆಚಾರ-ವಿಚಾರಗಳನ್ನು ನೋಡಿದಾಗ ಈ ಧೈರ್ಯವು ಒಮ್ಮೊಮ್ಮೆ ಕೈ ಕೊಡುವಂತೆ ಕಾಣುತ್ತದೆ. ಏಕೆಂದರೆ ಇಲ್ಲಿ ಸಮರ್ಥ ಅನುಭವಿ ರೈತ (ಸಂದೇಶವಾಹಕ)ನೊಬ್ಬ ಎಲ್ಲಾ ಕಡೆಯು ಬಿತ್ತಿದಂತೆ ಬೀಜೋಪಚಾರ ಮಾಡಿದ ಅತ್ಯುತ್ತಮ ಗುಣಮಟ್ಟದ ಬೀಜಗಳನ್ನೇ (ಬಸವತತ್ತ್ವ) ಬಿತ್ತಿದ್ದರೂ ನಿರೀಕ್ಷಿತ ಫಲ ಕೊಡುತ್ತಿಲ್ಲ ಕಾರಣ ಇವರ ಮನೋಭೂಮಿ ಶತಶತಮಾನಗಳಿಂದ ದಾಸ್ಯತ್ವ-ಶೋಷಣೆಗೆ ಒಳಗಾಗಿ ಫಲವತ್ತತೆಯನ್ನು ಕಳೆದುಕೊಂಡಿದೆ, ಬರಡಾಗಿದೆ. ಇದೇ ಸ್ಥಿತಿಯಲ್ಲಿ ಈ ಸಮಾಜ ಇನ್ನು ಎಷ್ಟು ದಿನ ಮುಂದುವರಿಯುತ್ತದೆ ಎಂಬುದು ನಿಗೂಢ ಪ್ರಶ್ನೆ. ಇದಕ್ಕೆ ಮುಂದಿನ ಜನಗಣತಿಗಳ ಫಲಿತಾಂಶಗಳು ಉತ್ತರ ಹೇಳಬೇಕು.

ಬಹುಪಾಲು ಲಿಂಗಾಯತರಲ್ಲಿ ಆಳವಾಗಿ ಬೇರುಬಿಟ್ಟಿರುವ ಅಜ್ಞಾನ, ಜಾತೀಯತೆ-ಮೂಢನಂಬಿಕೆ- ಗಳಿಂದ ಪ್ರೇರಿತನಾಗಿ, ಅವರನ್ನು ಉದ್ದೇಶಿಸಿ ಅಂತಿಮವಾಗಿ ಬೇಹುಗಾರ ಜಂಗಮ ಹೀಗೆ ನುಡಿಯುತ್ತಿದ್ದಾನೆ.

"ಆತ್ಮೀಯ ಧರ್ಮಬಂಧುಗಳೇ, ತಮಗೆಲ್ಲ ಬಸವ ಸ್ಮರಣ ಪೂರ್ವಕ ಶರಣು ಶರಣಾರ್ಥಿಗಳು. ಈಗ ತಿಳಿಸುವುದೇನೆಂದರೆ ತಾವುಗಳೆಲ್ಲ ಅನೇಕ ವರ್ಷಗಳಿಂದ ನನ್ನ ಪ್ರವಚನವೆಂಬ ಸತ್ಕಾಯಕದ ಪರಿಶ್ರಮ-ಪರಿಣಾಮಗಳನ್ನು ನೋಡುತಲೇ ಬಂದಿದ್ದೀರಿ. ಶರಣರ ಸಂಗ-ವಚನಸಾಹಿತ್ಯದ ಅಧ್ಯಯನದಿಂದ ಅಲ್ಲಲ್ಲಿ ಜಾಗೃತಿಯಾದಂತೆ ಕಂಡುಬಂದರೂ, ಗಣನೀಯ

ಪ್ರಮಾಣದಲ್ಲಿ, ಆಗಬೇಕಾದಷ್ಟು ಆಗಿಲ್ಲ. ಇದಕ್ಕೆ ಕಾರಣ ನೀವಲ್ಲ. ನಿಮ್ಮೊಳಗಿನ ಅಜ್ಞಾನವನ್ನು ಸ್ವಾರ್ಥಲಾಲಸೆಯಿಂದ ಬೆಳೆಸಿ, ಉಳಿಸಿ, ಪೋಷಿಸಿ ಬದುಕುತ್ತಿರುವ ಪುರೋಹಿತಶಾಹಿ ವರ್ಗ. ಇವರಿಂದ ಸುತ್ತುವರಿಯಲ್ಪಟ್ಟ ನೀವು ಕ್ರೂರ ಸತ್ಯದಿಂದ ಬಿಡಿಸಿಕೊಂಡು ಹೊರಬರಲಾರದೆ ಯುದ್ಧರಂಗದ ಚಕ್ರವ್ಯೂಹದಲ್ಲಿ ಅಸುನೀಗಿದ ವೀರ ಅಭಿಮನ್ಯುವಿನಂತೆ ಆಗುತ್ತಿದ್ದೀರಿ.

ಅಂದು ಧರ್ಮಪಿತ ಬಸವಣ್ಣನವರು ನಿಮ್ಮಂತಹವರಿಗಾಗಿಯೇ ಸಾಧಿಸಿ-ತೋರಿಸಿ-ಬೋಧಿಸಿದ ಮಾನವೀಯ ಸತ್ಯವನ್ನು ಸಮಾನತೆಯ ತತ್ತ್ವವನ್ನು, ಇಂದಿನ ನೀವು ಅರಿತು ಆಚರಿಸಲಾರದೆ ಸೋಲುತ್ತಿದ್ದೀರಿ. ಯಾವುದರ ಬಲದಿಂದ ನೀವು ಲಿಂಗಾಯತ ಎಂದು ಹೇಳಿಕೊಳ್ಳುವಿರೋ ಆ ಲಾಂಛನಕ್ಕೆ ನೀವು ಶರಣಾಗದೆ ಅಗೌರವ ತೋರಿಸುತ್ತಿರುವಿರಿ. ಅಂದರೆ ನಿಮ್ಮ ಎದೆಯ ಮೇಲೆ, ಗೋಡೆಗಳ ಮೇಲೆ ನೇತುಹಾಕಿಕೊಂಡ ಇಷ್ಟಲಿಂಗವನ್ನು ನೂರರಲ್ಲಿ ಒಂದನ್ನಾಗಿ ಮಾಡಿಕೊಂಡು, ಅದರ ಅಗ್ರಸ್ಥಾನವನ್ನು ಕೆಳಗಿಳಿಸಿ ಧರ್ಮದ್ರೋಹ ಮಾಡುತ್ತಿರುವಿರಿ. ಆದ್ದರಿಂದ ಅದು ನಿಮ್ಮ ಕೈಯಲ್ಲಿರುವುದು ಹೇಡಿಯ ಕೈಯಲ್ಲಿರುವ ಚಂದ್ರಾಯುಧವಿದ್ದಂತೆ ಆಗಿದೆ. ನಿಮ್ಮಂಥವರಿಗೆ ಬೋಧಿಸುವ ಲಿಂಗತತ್ತ್ವ ಕೋಣನ ಮುಂದೆ ಕಿನ್ನರಿ ಬಾರಿಸಿದಂತೆ ನನ್ನ ಪರಿಶ್ರಮವೆಲ್ಲ ವ್ಯರ್ಥವಾಗುತ್ತಿದೆ. ಜಾಗೃತರಾಗುವ ಯಾವುದೇ ಲಕ್ಷಣಗಳು ಕಂಡು ಬರುತ್ತಿಲ್ಲ. ಇದರಿಂದ ಎಚ್ಚೆತ್ತುಕೊಂಡ ನಾನು ಒಂದು ನಿರ್ಧಾರಕ್ಕೆ ಬಂದಿದ್ದೇನೆ ಮತ್ತು ಅಂತಿಮವಾಗಿ ನಿಮ್ಮಲ್ಲಿ ಒಂದನ್ನು ಮಾತ್ರ ಬೇಡುತ್ತೇನೆ. ನಿಮ್ಮ ಮಠಪೀಠಗಳು ನನಗೆ ಬೇಡ, ನೀವು ಮಾಡುವ ಅಡ್ಡಪಲ್ಲಕ್ಕಿ ಉತ್ಸವಗಳನ್ನು ನಾ ಒಲ್ಲೆ, ನೀವು ಕೊಡುವ ಬಿರುದು ಬಾವಲಿಗಳು ಬೇಡ. ನಿಮ್ಮ ಮನೆಗಳ ಬಿನ್ನಹವೂ ಬೇಡ. ಇನ್ನು ಮುಂದೆ ಲಿಂಗದೇವನು ಅವಮಾನವನ್ನು ಸಹಿಸಿಕೊಂಡು ನಿಮ್ಮ ಬಳಿ ಇರುವುದು ಬೇಡ. ನೀವು ಅವನನ್ನು ಮಾತ್ರ ನನಗೆ ಕೊಟ್ಟು ಬಿಡಿರಿ ಎಂದು ಸೆರಗೊಡ್ಡಿ ಬೇಡುವೆನು. ಏಕೆಂದರೆ ಷಣ್ಮುಖಸ್ವಾಮಿಗಳು ಏನು ಹೇಳುತ್ತಾರೆ ಇತ್ತ ಲಕ್ಷ್ಯಕೊಟ್ಟು ಕೇಳಿರಿ.

ನೀನೊಲಿದಡೆ ಕಲ್ಲೆಲ್ಲ ಕನಕವಯ್ಯ
ನೀನೊಲಿದಡೆ ಹುಲ್ಲೆಲ್ಲ ರಾಜಾನ್ನವಯ್ಯ
ನೀನೊಲಿದಡೆ ಕೊರಡೆಲ್ಲ ಕಲ್ಪವೃಕ್ಷವಯ್ಯ
ನೀನೊಲಿದಡೆ ಬರಡೆಲ್ಲ ಕಾಮಧೇನುವಯ್ಯ
ನೀನೊಲಿದಡೆ ಏನುಂಟು ಏನಿಲ್ಲವಯ್ಯ ಅಖಂಡೇಶ್ವರಾ !

ಕೇಳಿದಿರಾ ! ಎಂಥಹ ಘನವಾದ ವಸ್ತುವನ್ನು ತಾವು ಹುಟ್ಟಿನಿಂದಲೇ ಪಡೆದಿರುವಿರಿ. ಆದರೆ ಅದರ ಮಹತ್ವವನ್ನು ಅರಿಯದ ತಮಗೆ ಅದು ಹಿತ್ತಲಗಿಡ ಮದ್ದಲ್ಲ ಎಂಬಂತಾಗಿದೆ. ಅದನ್ನು ನಾನು ತೆಗೆದುಕೊಂಡು ಏನು ಮಾಡುವೆ ? ಎಂದು ನಿಮಗೆ ಆಶ್ಚರ್ಯವೇ. ಇಷ್ಟೊಂದು ಮಠಾಧೀಶರ ಹಾವಳಿ ಇಲ್ಲದ ಬೇರೆ ಜಾತಿ, ಮತ ಪಂಥಗಳಲ್ಲಿ ಹೋಗಿ ಇಷ್ಟಲಿಂಗದ ಮಹತ್ವವನ್ನು ಸಾರಿ ಸಾರಿ ಹೇಳುತ್ತೇನೆ. ತನ್ಮೂಲಕ ಉಳಿದಿರುವ ಅಲ್ಪಾಯುಷ್ಯವನ್ನು ಸಾರ್ಥಕ ಪಡಿಸಿಕೊಳ್ಳುತ್ತೇನೆ. ಶರಣು ಶರಣಾರ್ಥಿಗಳು" ಎಂದು ಹೇಳಿ ಮತ್ತಷ್ಟು ಆತ್ಮಬಲವನ್ನು ಮೈಗೂಡಿಸಿಕೊಂಡು ಎದ್ದು ಹೋದ ಜಂಗಮಮೂರ್ತಿಯ ಹಿಂದೆ ಧ್ವನಿಸುರುಳಿಯೊಂದು ಧರ್ಮಪಿತರ ವಾಣಿಯಲ್ಲಿದ್ದ ಎಚ್ಚರಿಕೆಯ ಗಂಟೆಯನ್ನು ಮೊಳಗಿಸುತ್ತಿತ್ತು.

ತಿರುಕರೆನ್ನದಿರಿ ಭೋ ಎನ್ನ ತಂದೆಗಳನು
ತಿರುಕರೆನ್ನದಿರಿ ಭೋ ಎನ್ನ ಬಂಧುಗಳನು
ತಿರುಕರೆನ್ನದಿರಿ ಭೋ ಎನ್ನ ದೇವರನು
ತಿರುಕರೆನ್ನದಿರಿ ಭೋ ಎನ್ನ ಒಡೆಯರನು
ದೇಹಿ ಎಂದಡೆ ನಾಸ್ತಿ ಎಂಬವರ ಬೇಹು ನೋಡ ಬಂದ ಕಾಣಾ ಲಿಂಗದೇವ.

-ಬ.ವ.ದೀ. 1137. □

ಮ. ಜಯದೇವ ಅವರ ಪತ್ರ

ಪರಮಪೂಜ್ಯ ಮಹಾಜಗದ್ಗುರು ಮಾತಾಜಿಯವರ ದಿವ್ಯ ಶ್ರೀ ಚರಣಂಗಳಿಗೆ ಶರಣು ಶರಣಾರ್ಥಿಗಳು.

ಜನಗಣತಿ ಕುರಿತ ನನ್ನ ಲೇಖನ ರಾಜ್ಯಪ್ರಗತಿ ಪಾಕ್ಷಿಕ ಪತ್ರಿಕೆಯಲ್ಲಿ ಪ್ರಕಟವಾಗಿತ್ತು. ಆ ಲೇಖನವನ್ನು ನವೆಂಬರ್ ಸಂಚಿಕೆಯ ಕಲ್ಯಾಣ-ಕಿರಣ ಅಧ್ಯಾತ್ಮಿಕ ಮಾಸ ಪತ್ರಿಕೆಯಲ್ಲಿ ಪ್ರಕಟಿಸಿ ಸಹೃದಯ ಓದುಗರಿಗೆಲ್ಲ ಮುಟ್ಟುವಂತೆ ಮಾಡಿದ್ದಕ್ಕೆ ನಾನು ಅಭಾರಿಯಾಗಿರುತ್ತೇನೆ.

ಇದೇ ಪತ್ರಿಕೆಯಲ್ಲಿ ಪ್ರಕಟವಾಗಿರುವ ಶರಣರಾದ ಶ್ರೀ ವೀರಭದ್ರಪ್ಪ. ಎಮ್. ಪಾರಶೆಟ್ಟಿರವರ ಲೇಖನ "45ನೇ ಶರಣ ಮೇಳಕ್ಕೆ ಜಯವಾಗಲಿ" ಬಹಳ ಮಹತ್ವ ಪೂರ್ಣ ಲೇಖನ ಎನಿಸುತ್ತದೆ. ಏಕೆಂದರೆ, ಕಾಲಜ್ಞಾನ ವಚನಗಳಲ್ಲಿ ಈ ಸೂಚನೆ ಕಾಣಬರುತ್ತೆ.

1. ದಕ್ಷಿಣದ ಕೃಷ್ಣೆಗೆ ಕರೆವರಯ್ಯಾ, ಜನ ನೆರೆವರಯ್ಯಾ
2. ಉತ್ತರ ದಕ್ಷಿಣ ಪೂರ್ವ ಪಶ್ಚಿಮ ಹರನಾಜ್ಞೆಯಿಂದ ಬಂತು
   ಜರಿಯಲು ಬೇಡ, ಅರಿದು ನೋಡುವುದು
   ಅಮೃತ ರಸಾಯನವೆಂದು ಶರಣ ಸಂತತಿಗಳು ತಿಳಿವರು
3. ಪರಿಧಾವಿಯೆಂಬ ಕಟ್ಟಳೆಗೆ ಉಳಿದವರು ಬರುವರು
   ಒಬ್ಬರುಳಿಯದ ಹಾಗೆ ನೆರೆದು ಕೂಡುವರು ॥

ವೀರಶರಣ ಮಡಿವಾಳ ಮಾಚಿತಂದೆಗಳ ಮೇಲ್ಕಂಡ ಮಾತುಗಳು ಗಮನಾರ್ಹ. 2032ರಲ್ಲಿ ಬರುವ ಪರಿಧಾವಿ ಸಂವತ್ಸರಕ್ಕೆ ಸರಿಯಾಗಿ ಶರಣಮೇಳ 45ನೇಯದ್ದ ಆಗಿರುತ್ತದೆ. (ಪ್ರಾರಂಭ 1988ರಿಂದ 2032)

ಆ ಕಾಲಮಾನಕ್ಕೆ ಲಿಂಗಾಯತ ಧರ್ಮ ಅರ್ಥಾತ್ ಬಸವ ಧರ್ಮವು ಈಗಿನಂತೆ ಗೊಂದಲಗಳಿರದೆ (ಈ ಧರ್ಮದ ಸ್ಥಾಪಕರ ವಿಷಯದಲ್ಲಾಗಲೀ, ಈ ಧರ್ಮಕ್ಕೆ ಬಂದು ಸೇರಿರತಕ್ಕಂತಹ ಪಂಗಡ-ಉಪಪಂಗಡಗಳಲ್ಲಾಗಲೀ, ವೀರಶೈವ, ಶೈವ, ಹಿಂದೂ ಮುಂತಾದ ಪದಗಳಿಂದಾಗಲೀ) ಮುಕ್ತವಾಗಿ ಜಗತ್ತಿನಾದ್ಯಂತ ಪಸರಿಸಿರುತ್ತೆ. ಆಗ ನಮ್ಮ ಧರ್ಮದ ಪ್ರತಿಸ್ಪರ್ಧಿ ಏನಿದ್ದರೂ ಜಾಗತಿಕ ಧರ್ಮಗಳಾದ, ಕ್ರಿಶ್ಚಿಯನ್, ಇಸ್ಲಾಂ, ಬೌದ್ಧ ಮುಂತಾದ ಧರ್ಮಗಳೊಂದಿಗಿರುತ್ತೆ. ಸರ್ವಜ್ಞ ಮೂರ್ತಿಯ ಈ ಕಾಲಜ್ಞಾನ ವಚನದಂತೆ

ಬಸವ ಪೀಠವು ಎದ್ದು ಒಸೆದು ನಾಣ್ಯವು ಹುಟ್ಟಿ
ಬಸವನ ಮುದ್ರೆ ಮೆರೆದಾವು। ಧರೆಯವಗೆ
ವಶವಾಗದಿಹುದೆ ಸರ್ವಜ್ಞ ॥

ಇಡೀ ಜಗತ್ತಿನಾದ್ಯಂತ ಈ ಲಿಂಗವಂತ ಧರ್ಮ ವ್ಯಾಪಿಸಿರುತ್ತೆ. ಜಗತ್ತಿನ ಎಲ್ಲೆಡೆಗಳಿಂದಲೂ ಜಾತಿ-ಮತ, ದೇಶ-ಭಾಷೆ, ಕಾಲಗಳಿಗತೀತವಾಗಿ (ಜನರು) ಶರಣರು ಧರ್ಮಕ್ಷೇತ್ರವಾದ ಕೂಡಲ ಸಂಗಮಕ್ಕೆ ಬಂದೇ ತೀರುತ್ತಾರೆ. ಶರಣ. ವೀರಭದ್ರಪ್ಪನವರ ಕನಸು ಈ ಮುಖಾಂತರ ಸತ್ಯವೇ ಇರುತ್ತೆ.

ಈ ಧರ್ಮದ ಜಾಗತಿಕ ಮೌಲ್ಯದ ಎಲ್ಲಾ ಸೂತ್ರಗಳೂ ವಚನ ಸಾಹಿತ್ಯದಲ್ಲಿ ಅಡಕವಾಗಿದೆ. ಹಾಗೆಂದೆ ಲಿಂ॥ ಶರಣರಾದ ಫ.ಗು.ಹಳಕಟ್ಟಿಯವರು ತಮಗೆ ದೊರೆತ ವಚನ ಸಾಹಿತ್ಯವನ್ನು ಮುದ್ರಿಸಿ ಪ್ರಕಟಿಸಲು ಪ್ರಯತ್ನಿಸಿದಾಗ ಮುದ್ರಕರಾದ ಕ್ರಿಶ್ಚಿಯನ್ನರು ಈ ವಚನ ಸಾಹಿತ್ಯವನ್ನು ಆಮೂಲಾಗ್ರ, ಓದಿ ತಿಳಿದುಕೊಂಡು ಈ ಸಾಹಿತ್ಯವು ಜಗತ್ತಿನ ಯಾವುದೇ ಧಾರ್ಮಿಕ

ಸಾಹಿತ್ಯಕ್ಕಿಂತಲೂ ಶ್ರೇಷ್ಠ ಸಾಹಿತ್ಯವೆಂಬುದನ್ನು ಮನವರಿಕೆ ಮಾಡಿಕೊಂಡು, ಈ ಸಾಹಿತ್ಯ ಮುದ್ರಿಸಿದರೆ ತಮ್ಮ ಕ್ರಿಶ್ಚಿಯನ್ ಧರ್ಮದ ಪ್ರಸಾರಕ್ಕೆ ಈ ಸಾಹಿತ್ಯವೇ ಪ್ರತಿಸ್ಪರ್ಧಿಯಾಗುತ್ತೆ ಎಂದು ತಿಳಿದು ಈ ಸಾಹಿತ್ಯದ ಮುದ್ರಣಕ್ಕೆ ಒಪ್ಪದೆ ಇದ್ದುದು. ಆದರೆ ಛಲವಂತ ಫ.ಗು.ಹಳಕಟ್ಟಿ ಶರಣರು ತಮ್ಮ ಆಸ್ತಿಯನ್ನು ಮಾರಿ ತಾವೇ ಸ್ವತಃ ಒಂದು ಮುದ್ರಣಾಲಯವನ್ನು ಪ್ರಾರಂಭಿಸಿ ವಚನ ಸಾಹಿತ್ಯವನ್ನು ಮುದ್ರಿಸಿ ಜಗತ್ತಿಗೆ ಪರಿಚಯಿಸಿದ್ದಾರೆ.

ಆದರೆ ಇಷ್ಟೇ ಈ ಧರ್ಮ ಪ್ರಸಾರಕ್ಕೆ ಸಾಲದು, ಪರಮಪೂಜ್ಯ ಲಿಂಗಾನಂದ ಮಹಾಸ್ವಾಮಿಗಳು ಈ ವಚನ ಸಾಹಿತ್ಯದ ಹಿರಿಮೆ-ಗರಿಮೆಗಳನ್ನು ತಮ್ಮ ಕಂಚಿನ ಕಂಠದಿಂದ ನಾಡಿನೆಲ್ಲೆಡೆಯೂ ಪ್ರವಚನದ ಮೂಲಕ ಅಹರ್ನಿಶಿ ಪ್ರಸಾರ ಮಾಡಿ ಶ್ರೀ ಸಾಮಾನ್ಯರಿಗೆಲ್ಲರಿಗೆ ಬಸವ ಧರ್ಮದ ಹಿರಿಮೆಯನ್ನು ಮನದಟ್ಟು ಮಾಡಿಕೊಡುವಲ್ಲಿ ಯಶಸ್ವಿಯಾಗಿರುತ್ತಾರೆ.

ಈಗ ಪರಮಪೂಜ್ಯ ಮಾತಾಜಿಯವರು ಅಪ್ಪಾಜಿಯವರ ಧರ್ಮಪ್ರಸಾರದ ಕಾರ್ಯವನ್ನು ಜಗತ್ತಿನಾದ್ಯಂತ ಪಸರಿಸುವಲ್ಲಿ ತಮ್ಮನ್ನೇ ಅರ್ಪಿಸಿಕೊಂಡು ಕಾರ್ಯಗೈಯುತ್ತಿದ್ದಾರೆ.

ಶರಣ ಮೇಳದ ಸ್ಥಾಪಕರಾದ ಪೂಜ್ಯದ್ವಯರನ್ನು ನಾಡಿನ ಹಾಗೂ ಜಗತ್ತಿನ ಎಲ್ಲೆಡೆಯಿಂದ ಬರುವ ಶರಣರು ಜಯಘೋಷ ಮಾಡಿ ಹಾಡಿ ಹೊಗಳುವುದು ಸಹಜವೇ ಇದೆ.

ಇಸ್ಲಾಂ ಧರ್ಮೀಯರ ಮೆಕ್ಕಾದ ಹಜ್ ಅನ್ನು ಹೋಲುವಂತೆ ಈ ಶರಣಮೇಳ ಗೋಚರಿಸುವುದೆಂಬುದು ಮೇಲ್ಕಂಡ ಶರಣರ ಕನಸು ನನಸಾಗುವುದರೊಡನೆ ನಿಜವಾಗುತ್ತದೆ. 45ನೇ ಶರಣ ಮೇಳವು ಜಗತ್ತಿನ ಎಲ್ಲೆಡೆಯಿಂದ ಬರುವ ಶರಣ. ಗಣ ತಿಂಥಿಣಿಯಿಂದ ಕೈಲಾಸ-ಸ್ವರ್ಗ ಮುಂತಾದವುಗಳನ್ನು ನಾಚಿಸುವುದರಲ್ಲಿ ಸಂದೇಹವೇ ಇಲ್ಲ.

45ನೇ ಶರಣ ಮೇಳಕ್ಕೆ ಜಯವಾಗಲಿ
ವಿಶ್ವಗುರು ಬಸವಣ್ಣನವರಿಗೆ ಜಯವಾಗಲಿ
ಪೂಜ್ಯ ಲಿಂಗಾನಂದ ಸ್ವಾಮಿಗಳಿಗೆ ಜಯವಾಗಲಿ
ಪೂಜ್ಯ ಮಾತಾಜಿಯವರಿಗೆ ಜಯವಾಗಲಿ
ಪೂಜ್ಯ ಗಂಗಾ ಮಾತಾಜಿಯವರಿಗೆ ಜಯವಾಗಲಿ

ಸಕಲ ಶರಣರಿಗೆ ಜಯವಾಗಲಿ.

ಇಂತಿ ಬಸವ ಸ್ಮರಣಪೂರ್ವಕ ಶರಣಾರ್ಥಿಗಳು

ಮ. ಜಯದೇವ. ವಿಜಯಪುರ

ಧಾರವಾಡ ನಗರದಲ್ಲಿ ಲಿಂಗಾಯತ ಧರ್ಮೀಯರ ಸಮಾವೇಶ

ಧಾರವಾಡ ನಗರದ ಕಡಪಾ ಮೈದಾನದಲ್ಲಿರುವ
ಶ್ರೀ ಮಲ್ಲಿಕಾರ್ಜುನ ಮನ್ಸೂರ್ ಕಲಾಭವನದ ಮುಂದೆ
ಶನಿವಾರ ದಿ. 9-12-2000ರಂದು ಸಂಜೆ 5-30ಕ್ಕೆ

ಲಿಂಗಾಯತ ಧರ್ಮೀಯರ ಸಮಾವೇಶ

ಸನ್ನಿಧಿ : ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಮಾತೆ ಮಹಾದೇವಿ

ಅನೇಕ ವಿಚಾರಶೀಲ ಉಪನ್ಯಾಸಕರು, ಗಣ್ಯರು ಭಾಗವಹಿಸಲಿದ್ದು ಲಿಂಗಾಯತ ಸ್ವತಂತ್ರ ಧರ್ಮ, ಹಿಂದು ಧರ್ಮದೊಳಗಣ ಒಂದು ಜಾತಿಯಲ್ಲ. ಲಿಂಗಾಯತ-ವೀರಶೈವ ಬೇರೆ ಬೇರೆ. ಈ ವಿಷಯ ಕುರಿತು ಚರ್ಚಿಸಲು ಮುಕ್ತ ಅವಕಾಶವಿದೆ. ಸರ್ವರಿಗೂ ಸುಸ್ವಾಗತ.

ಶರಣ ಮೇಳಕ್ಕೆ ವಿಶೇಷ ಬಸ್ ವ್ಯವಸ್ಥೆ

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಪ್ರತಿ ವರ್ಷದಂತೆ ಈ ವರ್ಷವೂ ಸಹ ಕರ್ನಾಟಕದಲ್ಲಿ ಎಲ್ಲೆಡೆಯಿಂದ ಕೂಡಲ ಸಂಗಮಕ್ಕೆ ಜನವರಿ 10ರಿಂದ 16ರವರೆಗೆ ನೇರ ಬಸ್ ವ್ಯವಸ್ಥೆ ಮಾಡಲಿದ್ದು ಈ ಬಗ್ಗೆ ಅಧಿಕೃತ ಆದೇಶಗಳನ್ನು ಎಲ್ಲ ವಿಭಾಗೀಯ ರಸ್ತೆ ಸಾರಿಗೆ ಸಂಸ್ಥೆಗಳಿಗೆ ಕೇಂದ್ರ ಕಛೇರಿಯ ವ್ಯವಸ್ಥಾಪಕರು ನೀಡಲಿದ್ದಾರೆ.

ಮುಖ್ಯ ಸಂಚಾಲಕ ವ್ಯವಸ್ಥಾಪಕರು, ಕೇಂದ್ರ ಕಛೇರಿ, ಇವರು ಆದೇಶ ಹೊರಡಿಸಿ, ಪ್ರವಾಸಿಗರಿಗೆ ಅನುಕೂಲವಾಗುವಂತೆ ಎಲ್ಲ ವಿಭಾಗೀಯ ನಿಗಮದ ವ್ಯಾಪ್ತಿಯಲ್ಲಿರುವ ಮುಖ್ಯ ಸ್ಥಳಗಳಿಂದ ಶರಣ ಮೇಳ ಉತ್ಸವಕ್ಕೆ ಒತ್ತಡಕ್ಕನುಗುಣವಾಗಿ ಹೆಚ್ಚುವರಿ ಬಸ್ಸುಗಳ ಸೌಕರ್ಯ ಒದಗಿಸಿ, ದೂರುಗಳಿಗೆ ಅವಕಾಶವಾಗದಂತೆ ನೋಡಿಕೊಳ್ಳಲು ಸೂಚಿಸಿದ್ದಾರೆ.

ಕೂಡಲ ಸಂಗಮ ಅಡ್ಡರಸ್ತೆಯಿಂದ ಕೂಡಲ ಸಂಗಮಕ್ಕೆ ಹೆಚ್ಚು ಬಸ್ ಸೌಕರ್ಯವನ್ನು ಸಹ ಪೂರೈಸಲು ಆದೇಶ ನೀಡಿದ್ದು ಮತ್ತು ಈ ಅವಧಿಯಲ್ಲಿ ರಾಷ್ಟ್ರೀಯ ಹೆದ್ದಾರಿ 13ರಲ್ಲಿ ಸಂಚರಿಸುವ ಎಲ್ಲ ವಿಭಾಗಗಳ ಬಸ್‌ಗಳಿಗೂ, ಶರಣಮೇಳ ಉತ್ಸವ ಮುಗಿಯುವರೆಗೆ ಕೂಡಲ ಸಂಗಮ ಅಡ್ಡರಸ್ತೆಯಲ್ಲಿ ಕೋರಿಕೆ ನಿಲುಗಡೆಗೆ (Request stop) ಅವಕಾಶ ಒದಗಿಸಲು ಆದೇಶಿಸಿದ್ದಾರೆ.

ಆದ್ದರಿಂದ ಕರ್ನಾಟಕ ಬೇರೆ ಬೇರೆ ಊರುಗಳಿಂದ ಶರಣಮೇಳಕ್ಕೆ ಆಗಮಿಸುವ ಬಸವ ಭಕ್ತರು ಮೊದಲೇ ನಿಮ್ಮ ಸಮೀಪದ ಕೆ.ಎಸ್.ಆರ್.ಟಿ.ಸಿ.ಯ ವ್ಯವಸ್ಥಾಪಕರನ್ನು ಭೇಟಿಯಾಗಿ ಬಸ್ ವ್ಯವಸ್ಥೆ ಬಗ್ಗೆ ಸೂಕ್ತ ಮಾಹಿತಿ ಪಡೆದು ಅನುಕೂಲ ಪಡೆಯಬೇಕು.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಹೊರಡಿಸಿರುವ ಆದೇಶ ಪತ್ರದ ನಕಲು ಪ್ರತಿಯನ್ನು ಪಡೆಯಲಿಚ್ಚಿಸುವವರು ಬೆಂಗಳೂರಿನ ನಮ್ಮ ಕಾರ್ಯಾಲಯಕ್ಕೆ ಸಂಪರ್ಕಿಸಿ ಪಡೆಯಬಹುದು.

ವಿಳಾಸ :
ಕಾರ್ಯದರ್ಶಿ, ಬಸವ ಮಂಟಪ
ಕಾರ್ಡ್ ರಸ್ತೆ, ರಾಜಾಜಿನಗರ 2ನೇ ಬ್ಲಾಕು, ಬೆಂಗಳೂರು- 10
ಫೋನ್ : 3325335/3322790
E-mail : viswakalyana@yahoo.com

ಸಮಸ್ಯೆ ? - ಸಮಾಧಾನ !

-ಬಿ. ಚಂದ್ರಯ್ಯ. ದಾವಣಗೆರೆ.

ದಾವಣಗೆರೆ ಶಿವಯೋಗಾಶ್ರಮದಲ್ಲಿ 3-11-2000- ರಂದು ಶರಣ ಸಂಗಮ ಕಾರ್ಯಕ್ರಮ ನಡೆದಾಗ ಪ್ರಶ್ನೋತ್ತರ ಕಾರ್ಯಕ್ರಮದಲ್ಲಿ ನನ್ನ ಪತ್ನಿಯು ಶ್ರೀ ಶಿವಮೂರ್ತಿ ಮುರುಘರಾಜೇಂದ್ರ, ಶರಣರನ್ನು ಕೇಳಿದರು. ''ಶ್ರೀ ಗುರು ಬಸವಣ್ಣನವರ ಹಾಗೂ ''ಅವರ ಸಮಕಾಲೀನ ಶರಣರ ಕುರಿತಂತೆ ತಮ್ಮ ಹಾಗೂ ಮಾತಾಜಿಯವರ ವಿಚಾರಗಳಲ್ಲಿ ಸಾಮ್ಯತೆ ಇರುವುದರಿಂದ ಬಸವ ಧರ್ಮದ ಬಗ್ಗೆ ತಾವು ಮಾತಾಜಿಯವರೊಡನೆ ಚರ್ಚಿಸಬಾರದೇಕೆ ?'' ಆಗ ಶ್ರೀ ಶಿವಮೂರ್ತಿ ಶರಣರು ಉತ್ತರಿಸಿದರು. ''ತಮ್ಮ ವಚನ ಸಂಗ್ರಹದಲ್ಲಿ ಲಿಂಗದೇವ ಎಂಬುದನ್ನು ವಾಪಸ್ಸು ಪಡೆದ ನಂತರ ತಾವು ಅವರೊಡನೆ ಚರ್ಚಿಸಲು ಸಿದ್ಧವಿರುತ್ತೇವೆ'' ಈ ಬಗ್ಗೆ ತಮ್ಮ ಅಭಿಪ್ರಾಯವೇನು ?

★ ವಚನಾಂಕಿತ ''ಲಿಂಗದೇವ'' ವಾಪಸ್ಸು ಪಡೆದರೆ ಅವರು ಚರ್ಚಿಸಲು ಸಿದ್ಧವಿರುವುದಾದರೆ ಗುರುಬಸವಣ್ಣ-ಲಿಂಗದೇವನ ಆಣೆಯಾಗಿ ಎಂದೆಂದೂ ನಾನು ವಾಪಸ್ಸು ಪಡೆಯುವುದಿಲ್ಲ. ಏಕೆಂದರೆ ಧರ್ಮಪಿತರು ಹೇಳಿದ್ದಾರೆ :

ಅರೆ ಭಕ್ತರಾದವರ ನೆರೆ ಬೇಡ, ಹೊರೆ ಬೇಡ
ದಾರಿ ಸಂಗಡ ಬೇಡ, ದೂರ ! ನುಡಿಸಲು ಬೇಡ

ವಿಶ್ವಾಸವಿಟ್ಟು ಅವರ ಸ್ನೇಹ ಮಾಡಿದ ಭಾಲ್ಕಿಯ ಹಿರೇಮಠದ ಪೂಜ್ಯ ಬಸವಲಿಂಗ ಪಟ್ಟದ್ದೇವರ ಪರಿಸ್ಥಿತಿ ನೋಡಿರಿ. ವಿಶ್ವಾಸ ದ್ರೋಹ, ಮಿತ್ರ ದ್ರೋಹ ಮಹಾಪಾಪ ಎಂದರಿಯದವರ ಒಡನಾಟವೇ ಬೇಡ.

– ನೀವು ಪತ್ರಿಕೆಗಳಲ್ಲಿ ನೋಡಿರಬಹುದು. ಜನತಾವಾಣಿ ಪತ್ರಿಕೆಯ ತುಣುಕು ಕಳಿಸಿದ್ದೇವೆ. ನೋಡಿ. ಇನ್ನು ಮೇಲೆ ಪೂಜ್ಯ ಶ್ರೀ ಶಿವಮೂರ್ತಿ ಮುರುಘರಾಜೇಂದ್ರ, ಮಹಾಸ್ವಾಮಿಗಳನ್ನು ಮಹಾಸ್ವಾಮಿಗಳು ಎನ್ನದೆ ಶರಣರು ಎನ್ನಬೇಕಂತೆ. ಶರಣ ಪದ ಬಹಳ ಶ್ರೇಷ್ಠವಂತೆ. ಮೊದಲು ಜಗದ್ಗುರು ಪದ ಕೈಬಿಟ್ಟರು; ನಂತರ ಮಹಾಸ್ವಾಮಿ ಕೈ ಬಿಟ್ಟರು. ಎಂಥಾ ಆದರ್ಶ ! ನೀವೂ ಏಕೆ ಕೈ ಬಿಡಬಾರದು ?

★ ಅವರು ಸಾಂಪ್ರದಾಯಿಕವಾಗಿ ಅವರ ಮಠ ಬಸವ ಪರಂಪರೆ ಎಂದು ಹೇಳುತ್ತಿದ್ದರು. ನಾವು ಸೇವಾ ಅರ್ಹತೆ, ಸಮರ್ಪಣೆಯಿಂದ ಬಸವ ಪರಂಪರೆಯವರಾದೆವು. ಧರ್ಮಪಿತ ಬಸವಣ್ಣನವರು ಮತ್ತು ಆದಿ ಶರಣರ ಸಂಕಲ್ಪ ಬಸವ ಪರಂಪರೆಯ ಜಗದ್ಗುರು ಪೀಠ ಒಂದೇ ಇರಬೇಕು ಎಂದಿರಬಹುದು. ಅದಕ್ಕಾಗಿಯೇ ಶ್ರೀ ಶಿವಮೂರ್ತಿ ಮಹಾಸ್ವಾಮಿಗಳಿಗೆ ಸ್ವಯಂ ಇಚ್ಛೆಯಿಂದ ಜಗದ್ಗುರು ಪದವಿ ತ್ಯಾಗ ಮಾಡಲು ಧರ್ಮಪಿತರು ಪ್ರೇರಣೆ ನೀಡಿದ್ದಾರೆ. ಆದ್ದರಿಂದ ಧರ್ಮಕರ್ತರ ಇಚ್ಛೆಯಂತೆ ಅವರು ಬಿಟ್ಟಿದ್ದಾರೆ, ನಾವು ಬರೆದುಕೊಳ್ಳಲು ಆರಂಭಿಸಿದ್ದೇವೆ. ಇನ್ನು ಮಹಾಸ್ವಾಮಿ ಪದ ತ್ಯಾಗ. ಶ್ರೀಗಳು ಮತ್ತು ಅವರ ಮಠದ ಕೆಲವರು ಮಾಡುತ್ತಿರುವ ಹಲವು ಕೆಲಸಗಳು ಅವರ ಅಂತರಾತ್ಮವನ್ನು ಚುಚ್ಚಿ ನಿದ್ದೆಗೆಡಿಸುತ್ತಿವೆ. ಹೊರಜಗತ್ತಿಗೆ ಏನೇ ಹೇಳಿದರೂ ಅಂತರಂಗವು ಅನುಮೋದಿಸುತ್ತಿಲ್ಲ. ಹೀಗಾಗಿಯೇ ಅವರ ಅಂತರ್ವಾಣಿಗೆ ಅನುಸಾರವಾಗಿ ಮಹಾಸ್ವಾಮಿ ಪದ ಬಿಟ್ಟಿರುವಂತೆ ತೋರುತ್ತದೆ. ಆ ಪ್ರಾಮಾಣಿಕತೆಯನ್ನು ಅಭಿನಂದಿಸೋಣ. ಅದೇ ರೀತಿ ಮುರುಘರಾಜೇಂದ್ರ, ಪದವನ್ನೂ ಅವರು ಮುಂದೆ ಕೈಬಿಡಬಹುದು. ಏಕೆಂದರೆ ಅವರ ಅತಿಕ್ರಮಣಕಾರಿ

ಸ್ವಭಾವ ನೋಡಿದರೆ ಮುರುಘರಾಜೇಂದ್ರಕ್ಕಿಂತಲೂ ಮೃಗರಾಜೇಂದ್ರ (ಸಿಂಹರಾಜ) ಹೆಚ್ಚು ಸೂಕ್ತವೆನಿಸುತ್ತಿದೆ.

ಮಹಾಸ್ವಾಮಿ ಬಿಟ್ಟು 'ಶರಣ' ಪದ ಸೇರಿಸಿ ಕೊಂಡಿದ್ದು ಮಾತ್ರ ಸೂಕ್ತವಲ್ಲ. ಏಕೆಂದರೆ ಶರಣ ಬಲು ಶ್ರೇಷ್ಠ ಪದ. ಪರಿಪೂರ್ಣ ಮಾನವನೇ ಶರಣ. ಅವರು ಮಾಡುತ್ತಿರುವ ಕೆಲಸಗಳನ್ನು ನೋಡಿದಾಗ ಶರಣ ಪದವೂ ಅವರಿಗೆ ಕೆಲವೇ ದಿವಸಗಳಲ್ಲಿ ಚುಚ್ಚತೊಡಗುವುದು ಎನಿಸುತ್ತಿದೆ.

-ಒಂದೂರು, ಹೆಸರು ಬೇಡ.

ಈವರೆಗೆ ಉತ್ತಮರು ಎಂದು ನಾವು ಭಾವಿಸಿದ್ದ ಮೂವರು ಬೀದಿಗಿಳಿದು ನಿಮ್ಮ ಪ್ರತಿಕೃತಿ ದಹನ ಮಾಡಲು ಯತ್ನಿಸಿದರು. ಪೋಲೀಸರು 'ಗುರುದ್ರೋಹ' ಮಾಡಬೇಡಿ ಎಂದು ಬುದ್ಧಿ ಹೇಳಿ ಪ್ರತಿಕೃತಿ ದಹನಕ್ಕೆ ಅವಕಾಶ ಕೊಡಲಿಲ್ಲ. ಈ ಬಗ್ಗೆ ನಿಮ್ಮ ಪ್ರತಿಕ್ರಿಯೆ ಏನು ?

★ " ಸಹವಾಸದಿಂದ ಸನ್ಯಾಸಿ ಕೆಟ್ಟ " ಎಂಬ ಗಾದೆ ಇರುವಾಗ. ಆಸೆಬುರುಕ ಓರ್ವ ಸಂಸಾರಿ ಕೆಡುವುದೇನು ಮಹಾ ? ತರಲೇ ಕೇಂದ್ರದವರ ಸಾಂಗತ್ಯ ಮಾಡಿದ ಮೇಲೆ ಸುಡುವ, ಕೆಡಿಸುವ, ಒಡೆಯುವ ಕೆಲಸ ಬಿಟ್ಟು ವಿಧಾಯಕ ಕೆಲಸ ಮಾಡಲು ಸಾಧ್ಯವೆ ? ಸಂಗ ದೋಷ ಅಂತಹುದು

-ಪೂಜಾ ಹಲಿ, ಚಿಂಚೋಳಿ.

-'ಲಿಂಗದೇವ' ಎಂದು ವಚನಾಂಕಿತ ಬಳಸುವಲ್ಲಿ ಲಿಂಗೈಕ್ಯ ಗುರು ಲಿಂಗಾನಂದ ಸ್ವಾಮಿಗಳವರ ಹೆಸರನ್ನು ಅಮರ ಮಾಡುವ ಹುನ್ನಾರ ಇದೆ ಎಂದೇ ಕೆಲವರ ಗುಮಾನಿ. ಇದಕ್ಕೆ ನಿಮ್ಮ ಸಮಜಾಯಿಷಿ ಏನು ?

★ ಇದಕ್ಕೆ ಅತಾರ್ಕಿಕ ತರ್ಕ (Illogical Logic) ಎನ್ನಬಹುದು. ಯಾವುದೇ ವ್ಯಕ್ತಿಗೆ ಸಂಬಂಧಿಸದೆ ಈ ಪದಗಳನ್ನು ತೆಗೆದುಕೊಂಡು ಅರ್ಥ ಮಾಡಿದರೆ 'ಲಿಂಗದೇವ' ಇದು ಸೃಷ್ಟಿಕರ್ತ ಸೂಚಕ. ಯಾವ ಚೈತನ್ಯ ಸರ್ವ ಜಗತ್ತಿಗೆ ಕಾರಣವೋ ಅದು ಲಿಂಗದೇವ. ಲಿಂಗಾನಂದ ಎಂದರೆ ಆ ಪರಮಾತ್ಮ ಚೇತನದ ಸಾಮರಸ್ಯದೊಡನೆ ಪ್ರಾಪ್ತಿಯಾಗುವ ಆನಂದ. ವೇದಾಂತಿಗಳು ಬ್ರಹ್ಮಾನಂದ, ಶೈವರು ಶಿವಾನಂದ ಎಂದು ಕರೆದರೆ ಲಿಂಗ-ಅಂಗ ಸಾಮರಸ್ಯದಿಂದ ಸಿಗುವ ದಿವ್ಯ ಆನಂದಕ್ಕೆ ಲಿಂಗಾನಂದ ಎನ್ನಲಾಗುವುದು. ಈ ಎರಡೂ ಪದಗಳ ಅರ್ಥವು ಅತ್ಯಂತ ಸ್ಪಷ್ಟವಿದೆ. ಆದರೂ ಕುತರ್ಕ ಮಾಡುವವರನ್ನು ಏನು ಮಾಡಲಾದೀತು ? ನಮ್ಮ ಪೂರ್ವಾಶ್ರಮದ ತಂದೆ ಹೆಸರು ಬಸಪ್ಪ, ತಾಯಿಯ ಹೆಸರು ಗಂಗಮ್ಮ. ಮಾತಾಜಿ ಬಸವಣ್ಣನವರ ಬಗ್ಗೆ ಅಪಾರ ಗೌರವ ಹೊಂದಿ ಪ್ರಚಾರ ಮಾಡುವುದು ಧರ್ಮಪಿತ ಬಸವಣ್ಣನವರನ್ನಲ್ಲ. ಅವರ ಜನ್ಮದಾತರಾದ ಬಸಪ್ಪನವರನ್ನು ಕುರಿತು. ಶರಣೆ ನೀಲಗಂಗಮ್ಮನನ್ನು ಕುರಿತು ಅಲ್ಲ ತಾಯಿ ಗಂಗಮ್ಮನವರನ್ನೂ ಕುರಿತು ಎಂದರೆ ಯಾರು ಏನು ಉತ್ತರ ಕೊಡಬಹುದು ? ಅಂಥವರ ಬುದ್ಧಿಮತ್ತೆಗಾಗಿ ಮರುಕಪಡಬೇಕು ಅಷ್ಟೆ

-ಓರ್ವ ಸಮಾಜ ಚಿಂತಕ, ಬೆಂಗಳೂರು ನಗರ, 29-10-2000

ಕಲ್ಯಾಣ ಕಿರಣ ನವೆಂಬರ್ ಸಂಚಿಕೆಯಲ್ಲಿ ಪ್ರಕಟವಾಗಿರುವ ಅನುಭವ ಮಂಟಪ ಕುರಿತು ಪೂಜ್ಯ ಮಾತೆಯವರು ಬರೆದ ಲೇಖನ, ಕೆಲವು ವಿವಾದಾಸ್ಪದ ಅಂಶಗಳನ್ನು ಹೊರತು ಪಡಿಸಿ ತುಂಬಾ ಮೌಲಿಕವೂ, ಸಕಾಲಿಕವೂ, ವಿಷಯಭರಿತವೂ ಆಗಿದೆ. ಲೇಖಕರು ಅಭಿನಂದನಾರ್ಹರು! "ಪೀಠ", "ಧರ್ಮಸ್ಥಾಪಕ", "ವೀರಶೈವ", "ಲಿಂಗಾಯತ", "ಲಿಂಗದೇವ", "ಜಗದ್ಗುರು" ಮೊದಲಾದ ವಾದವಿವಾದಗಳಲ್ಲಿ ತಮ್ಮ ಸಮಯ ಶಕ್ತಿಗಳನ್ನು ಹಾಳು ಮಾಡಿಕೊಳ್ಳುವ ಬದಲು ಮಾತಾಜಿಯವರು ಇಂಥ ಶ್ರೇಷ್ಠ ಸಾಹಿತ್ಯ ರಚನೆ ಮತ್ತು ಧರ್ಮ

ಪ್ರಚಾರ ಕಾರ್ಯದಲ್ಲಿ ತಮ್ಮ ಅಮೂಲ್ಯ ಆಯುಷ್ಯವನ್ನು ಕಳೆದರೆ ಅವರಿಗೂ ಹಾಗೂ ಸಮಾಜಕ್ಕೂ ಮಹೋಪಕಾರವಾಗಬಹುದು! ಇಂಥ ಸನ್ಮತಿ ಹಾಗೂ ಸದಿಚ್ಛೆಗಳನ್ನು ಅವರಿಗೆ ಬಸವಾದಿ ಪ್ರಮಥರು ಬೇಗ ಕರುಣಿಸಲೆಂದು ಪ್ರಾರ್ಥಿಸುವೆ. ಅವರ ಭಕ್ತರೂ ಕೂಡ ಅವರಲ್ಲಿ ಈ ಬಗ್ಗೆ ಪ್ರಾರ್ಥಿಸುವುದು ಒಳ್ಳೆಯದು. ಅವರ ಮೇಲೆ ಒತ್ತಾಯ ತರಬಹುದು. ಈ ಚೈತನ್ಯೋತ್ಸಾಹಗಳ ಶರಾವತಿಯ ಜಲಪಾತವನ್ನು ಸಮಾಜದ ವಿದ್ಯುದಾಗರವನ್ನಾಗಿ ನಿಮಂತ್ರಿಸಿ ಲಕ್ಷಾವಧಿ ಬಸವ ಭಕ್ತರ ಮನೆ-ಮನಗಳನ್ನು ಬೆಳಗುವ ದೀಪಗಳನ್ನಾಗಿ ಪರಿವರ್ತಿಸಿದರೆ ವಿಶ್ವೋದ್ಧಾರವಾದೀತು. ಮಾನವ ಕುಲ ಬೆಳಗೀತು. ಆ ಸುದಿನ ಬೇಗ ಬರಲೆಂದು ಹೃದಯಪೂರ್ವಕ ಹಾರೈಸುವೆ.

★ ಈ ಪತ್ರದ ಅಭಿಪ್ರಾಯ ಗಮನಿಸಿದರೆ ಇವರುಗಳಿಗೆ ಜನರಲ್ ಆಗಿರುವ ಲೇಖನಗಳು, ಅಧ್ಯಾತ್ಮಿಕ ಪ್ರವೃತ್ತಿಯ ಲೇಖನಗಳು ಹಿಡಿಸುತ್ತವೆಯೇ ಹೊರತು ಸತ್ಯವನ್ನು ಪ್ರತಿಪಾದಿಸುವ ಬರಹಗಳು ಹಿಡಿಸುವುದಿಲ್ಲ ಎಂದು ಖಚಿತವಾಗುತ್ತದೆ. ಇಂಥವರು ಸತ್ಯವನ್ನು ನುಡಿದರೆ ಸಾಕು ಅದು 'ವಿವಾದ' ಎನ್ನುತ್ತಾರೆ. ಸತ್ಯವನ್ನು ದರ್ಶಿಸುವ, ಅರಗಿಸಿಕೊಳ್ಳುವ ಬೌದ್ಧಿಕ ಸಾಮರ್ಥ್ಯವೇ ಇಲ್ಲದಂತೆ ವರ್ತಿಸುತ್ತಾರೆ. ಬಸವ ಪ್ರಣೀತ ಲಿಂಗಾಯತ ಧರ್ಮ ಕಠೋರ ಸತ್ಯ ಪ್ರತಿಷ್ಠಾಪನೆಗಾಗಿಯೇ ಹುಟ್ಟಿದ ಧರ್ಮ. ಸತ್ಯಕ್ಕಾಗಿ ಹೋರಾಟ ಅದರ ಅಂತರ್ಗತ ಭಾಗವಾಗಿದೆ. ಹೆಣ್ಣು ಗೃಹಿಣಿಯಾಗಿ, ಮನೆಯ ಕೆಲಸಗಾರ್ತಿಯಾಗಿ, ಮಕ್ಕಳನ್ನು ಹೆರುವ ಯಂತ್ರವಾಗಿ ಸಾವಿರ ವರ್ಷ ಇರಲಿ, ಯಾರೂ ಬೇಡವೆನ್ನರು. ಯಾವಾಗ ಆಕೆ ಸಮಾನತೆ, ಅದೂ ಧಾರ್ಮಿಕ ಸಮಾನತೆ ಗುರುತ್ವದ ಹಕ್ಕು ಕೇಳುವಳೋ ಆಗ ಅದು ವಿವಾದವಾಗುತ್ತದೆ. ಧರ್ಮಪಿತ ಬಸವಣ್ಣನವರ ಇಷ್ಟಲಿಂಗ ಬೇಕು, ಧರ್ಮ ಬೇಕು, ವಚನ ಸಾಹಿತ್ಯ ಬೇಕು. ಆದರೆ ಧರ್ಮಪಿತ ಬಸವಣ್ಣನವರನ್ನು ಧರ್ಮಸ್ಥಾಪಕ ಎಂದು ಗೌರವಿಸುವುದು ಬೇಡ. ಬಹುಶಃ ಧರ್ಮಗುರು, ಧರ್ಮಪಿತ ಬಸವಣ್ಣನವರನ್ನು ಇಂಥ ಕೃತಘ್ನ ಮತ್ತು ವಂಚಕ ಸಮಾಜವು ಮತ್ತೊಂದು ಇರಲಿಕ್ಕಿಲ್ಲ. ಆದ್ದರಿಂದ ಗೊಂದಲಗಳನ್ನು ಪರಿಹರಿಸಿ ಸ್ಪಷ್ಟವಾದ ತತ್ತ್ವ-ಸಿದ್ಧಾಂತ ಹೊಂದಿ, ಏಕದೇವೋಪಾಸನೆ, ಏಕಗುರೂಪಾಸನೆ, ಸಮಾನತೆ ಮುಂತಾದ ತತ್ತ್ವಗಳನ್ನು ಬೋಧಿಸದೆ ಇರಲು ನಮಗೆ ಸಾಧ್ಯವೇ ಇಲ್ಲ ಎಂಬುದನ್ನು ಪ್ರಸ್ತುತ ಓದುಗರು ಮನವರಿಕೆ ಮಾಡಿಕೊಳ್ಳಬಹುದು. ಅನುಷ್ಠಾನಕ್ಕೆ ಬಾರದ ಬುಟ್ಟಿಗಟ್ಟಲೆ ಮಾತುಗಳಿಂದ ಏನೂ ಪ್ರಯೋಜನವಿರದು.

- ಶಂಕರಪ್ಪ, ಕೊಪ್ಪಳ

ಕೆಲವು ಮಠಾಧೀಶರು ನಿಮ್ಮಷ್ಟು ನೇರವಾಗಿ, ಧೈರ್ಯವಾಗಿ ಸತ್ಯ ಸಂಗತಿಗಳನ್ನು ಹೇಳಲಾರರು. ಈ ಬಗ್ಗೆ ತಮ್ಮ ಬಗ್ಗೆ ಅಭಿಮಾನವಿದೆ. ಆದರೆ ಅವರ ಪರಿಸ್ಥಿತಿಯನ್ನು ತಾವು ಅರ್ಥ ಮಾಡಿಕೊಳ್ಳಬೇಕು. ಮನುಷ್ಯನಿಗೆ ಅಗತ್ಯವಾದ ವಿದ್ಯೆಯನ್ನು ಕೊಡಲು ವಿದ್ಯಾಸಂಸ್ಥೆ ತೆರೆದಿರುತ್ತಾರೆ, ಸರ್ಕಾರಿ ಗ್ರ್ಯಾಂಟ್ ಪಡೆಯುತ್ತಾರೆ. ಆಗ ಅವರು ಸ್ಪಷ್ಟವಾಗಿ ಕೆಲವೊಂದು ಸತ್ಯಗಳನ್ನು ಪ್ರತಿಪಾದಿಸದ ನಿಸ್ಸಹಾಯಕರಾಗಿರುತ್ತಾರೆ. ಆದ್ದರಿಂದ ಅವರನ್ನು ಟೀಕಿಸುವುದು ತಪ್ಪು, ಎಂದು ನನ್ನ ಅಭಿಪ್ರಾಯ.

★ ಭಾರತ ದೇಶದ ಸಂವಿಧಾನ ಎಷ್ಟು ಸ್ವಾತಂತ್ರ್ಯ ನೀಡಿದೆ ಎಂದರೆ ಯಾರು ಬೇಕಾದರೂ ತನಗೆ ಸರಿ ಎನಿಸಿದ ಧಾರ್ಮಿಕ ಮಾರ್ಗವನ್ನು ಅನುಸರಿಸಬಹುದು. ಕ್ರೈಸ್ತರು, ಮುಸಲೀಮರು ಸಂಸ್ಥೆಗಳನ್ನು ನಡೆಸುತ್ತಿಲ್ಲವೆ? ಅವರ ಧರ್ಮಾಚರಣೆ ಮಾಡಲು ಅವರು ಹೆದರಿಕೊಳ್ಳುವರೆ ? ಇಂದು ಸರ್ಕಾರಗಳೇ ಹೆದರಿ ಅವರ ಬೇಡಿಕೆಗೆ ಮಣಿಯುವುದಿಲ್ಲವೆ ? ಕಾವಿ ತೊಟ್ಟ ಮಠಾಧೀಶರು ಪ್ರಥಮವಾಗಿ ಧರ್ಮದ ರಕ್ಷಕರು, ಎರಡನೆಯದಾಗಿ ಸಮಾಜದ ಹಿತಚಿಂತಕರು. ಧರ್ಮ ಪ್ರಚಾರ ಅವರ ವೃತ್ತಿ, ಶಿಕ್ಷಣ ಪ್ರಸಾರ

ಅವರ ಪ್ರವೃತ್ತಿ. ಈ ಜವಾಬ್ದಾರಿ ಅರಿಯದೆ ಹೋಗುವುದು ಕರ್ತವ್ಯ ಚ್ಯುತಿಯಲ್ಲವೆ ? ಇಂದು ವಚನ ಸಾಹಿತ್ಯ, ಬಸವಣ್ಣನವರನ್ನು ಕುರಿತು ಲಿಂಗಾಯತೇತರರದು ಎಳ್ಳಷ್ಟೂ ತಕರಾರು, ಟೀಕೆ ಇಲ್ಲ. ಅವರ ಟೀಕೆ ಇರುವುದೆಲ್ಲ ಜಾತಿವಾದಿ ಲಿಂಗಾಯತರ ವರ್ತನೆ ಬಗ್ಗೆ. ಬಸವಣ್ಣನವರ ಆದರ್ಶದಂತೆ ಈ ಸಮಾಜದ ಗುರುಗಳು, ಅನುಯಾಯಿಗಳು ನಡೆಯುತ್ತಿಲ್ಲ ಎಂದೇ ಇತರರು ಟೀಕಿಸುತ್ತಾರೆ. ಅಂದಾಗ ಬಸವ ಗುರುವಿನ ತತ್ತ್ವವನ್ನು ಪ್ರಾಮಾಣಿಕವಾಗಿ, ಧೈರ್ಯವಾಗಿ ಹೇಳಿದರೆ ಆಗ ಎಲ್ಲರಿಂದಲೂ ಪ್ರಶಂಸೆಗೆ ಪಾತ್ರರಾಗುತ್ತಾರೆ ಎಂಬುದನ್ನು ಮಠಾಧೀಶರು ಮನವರಿಕೆ ಮಾಡಿಕೊಳ್ಳಬೇಕು ಅಷ್ಟೆ.

- ಹೆಸರು ಬೇಡ, ಭದ್ರಾವತಿ

ನಾನೊಬ್ಬ ಲಿಂಗಾಯತೇತರ. ಎರಡು ಚುಟುಕಾ ಬರೆದು ಕಳಿಸಿದ್ದೆ. ಕಲ್ಯಾಣ ಕಿರಣದಲ್ಲಿ ಮುದ್ರಣಗೊಂಡವು, ನನ್ನ ಹೆಸರಿನೊಡನೆ ಶರಣ ಎಂದು ಸೇರಿಸಲಾಗಿತ್ತು. ನೋಡಿ ಸಂತೋಷವಾಗಿ ಬಸವಣ್ಣನವರಿಗೆ ಹತ್ತಿರದವನಾದೆ ಎನ್ನಿಸಿ ಇಂದಲ್ಲ ನಾಳೆ ಇಷ್ಟಲಿಂಗ ದೀಕ್ಷೆ ಪಡೆಯಬೇಕು ಎಂದುಕೊಂಡಿದ್ದೇನೆ. ನನ್ನ ಮಿತ್ರರಿಬ್ಬರು ಹುಟ್ಟು ಲಿಂಗಾಯತರು, ಅವರಿಗೆ ಲಿಂಗಪೂಜೆ, ವಚನ ಅಧ್ಯಯನದಲ್ಲಿ ಆಸಕ್ತಿಯೇ ಇಲ್ಲ, ಇದಕ್ಕಾಗಿ ದುಃಖವೆನಿಸುತ್ತಿದೆ.

★ ಹಸಿದವನಿಗೆ ಊಟದ ರುಚಿ ಮನವರಿಕೆಯಾದಂತೆ ಅಜೀರ್ಣವಾಗಿ ಹೊಟ್ಟೆ ಕೆಟ್ಟವರಿಗೆ ತಿಳಿಯುವುದಿಲ್ಲ. ಅಜ್ಞಾನಿಗಳಾಗಿರುವ ಲಿಂಗಾಯತರಿಂದಲೇ ಈ ಅನರ್ಘ್ಯ ರತ್ನ ಇಂದು ಮಸಿಬಟ್ಟೆಯಲ್ಲಿ ಕಟ್ಟಿಟ್ಟ ಮಾಣಿಕ್ಯದಂತಾಗಿರುವುದು. ನೀವು ಧನ್ಯಾತ್ಮರು, ಬಸವ ಪಥಕ್ಕೆ ಬನ್ನಿರಿ.

-ಎ.ಎನ್. ಗಂಗಾಧರ ಲಿಂಗಾಯತ್, ಆನೇಕಟ್ಟೆ

ನೀವು ಸ್ಥಾವರ ಬೇರೆ ಜಂಗಮ ಬೇರೆ ಎಂದು ಹೇಳುತ್ತೀರಿ. ಧರ್ಮಪಿತ ಬಸವಣ್ಣನವರ ವಚನವೊಂದರಲ್ಲಿ ಎರಡೂ ಒಂದೇ ಎಂದಿದೆಯಲ್ಲಾ !

ದ್ವೈತಾದ್ವೈತವನೋಡಿ ಏನು ಮಾಡುವಿರಯ್ಯಾ ?
ನಮ್ಮ ಶರಣರಿಗೆ ಉರಿಗೆ ಅರಗಾಗಿ ಕರಗದನ್ನಕ್ಕ ?
ಸ್ಥಾವರ-ಜಂಗಮ ಒಂದೇ ಎಂದು ನಂಬದನ್ನಕ್ಕ ?
ಲಿಂಗದೇವಾ, ಬರಿಯ ಮಾತಿನ ಮಾಲೆಯಲೇನಹುದು ?

★ ಇದು ತರ್ಕಶಾಸ್ತ್ರ, ತತ್ತ್ವಶಾಸ್ತ್ರ ಪಂಡಿತರಿಗೆ ಹೇಳಿದ ಬುದ್ಧಿ ಮಾತು. ಕೆಲವರು ಬರೀ ತತ್ತ್ವ-ಸಿದ್ಧಾಂತಗಳ ಶಾಬ್ದಿಕ ಚರ್ಚೆಯಲ್ಲೇ ಹೊತ್ತುಗಳೆಯುವುದುಂಟು. ದ್ವೈತವೇ ಸರಿ, ಅದ್ವೈತವೇ ಸರಿ ಎಂದು. ಧರ್ಮಪಿತರು ಹೇಳುತ್ತಾರೆ ಬರೀ ಇಂಥ ತರ್ಕ-ವಿತರ್ಕಗಳಲ್ಲಿ ಕಾಲ ಕಳೆಯದೆ ಸಾಮಾಜಿಕ-ಧಾರ್ಮಿಕ ಸಹೋದರತ್ವಕ್ಕೆ ಯತ್ನಿಸಿರಿ. ಶರಣರ ಸುಖ-ದುಃಖ, ನೋವು-ನಲಿವುಗಳಲ್ಲಿ ಸಹಭಾಗಿಗಳಾಗಿರಿ. ಸ್ಥಾವರ ಎಂದರೆ ಇಲ್ಲಿ ಲಿಂಗಪೂಜೆ ಎಂದು. ಬರೀ ಲಿಂಗಪೂಜಾ ನಿರತರಾಗಿ ಏಕಾಂತ ಜೀವಿಯಾಗಿ ಬಾಳಿದರೆ ಸಾಲದು, ಜಂಗಮ ಜೀವಿ-ಸಮಾಜ ಮುಖಿಯಾಗಿ ಬಾಳಬೇಕು. ಬರೀ ಮಾತಿನ ಮಾಲೆಯಲ್ಲೇ ಕಾಯಕ-ದಾಸೋಹ-ಸಮಾಜ ಎಂದು ಹಾರಾಡಿದರೆ ಸಾಲದು. ಮಾತು ಸ್ಥಾವರ ; ಕೃತಿ-ಜಂಗಮ. ಕೃತಿಯಲ್ಲಿ ಧಾರ್ಮಿಕ ಸಹೋದರತ್ವ, ಸ್ನೇಹ ಶೀಲತೆ, ಪರೋಪಕಾರ ಇತ್ಯಾದಿ ಅಳವಡಬೇಕು. ಹೀಗೆ ಸ್ಥಾವರ-ಜಂಗಮ ಪದಗಳು ಧರ್ಮಪಿತರ ದೃಷ್ಟಿಯಲ್ಲಿ ಬಹೂರೂಪಿಗಳು.

-ರತ್ನಮಾಲಾ, ಹುಬ್ಬಳ್ಳಿ

ನಾನು ಶರಣ ಮನೆತನದಲ್ಲಿ ಹುಟ್ಟಿ ಬೆಳೆದವಳು. ವಿದ್ಯಾಭ್ಯಾಸ ಮುಗಿಸಿ ಸರ್ಕಾರಿ ನೌಕರಿಯನ್ನು ಪಡೆದಿದ್ದೇನೆ. ಇನ್ನೊಬ್ಬರು ಹುಟ್ಟು ಲಿಂಗಾಯತರಿದ್ದರೂ ಒಂದು ಪಂಥದ ಅನುಯಾಯಿಗಳಾಗಿದ್ದರು. ಅವರು ಹೋಗುವ ಆ ಸಂಘಟನೆಯ ಮತ್ತೋರ್ವ ಮಹಿಳೆಯ

ಜೊತೆ ಅವರಿಗೆ ಬಹಳ ಸಲುಗೆ ಇತ್ತು. ಆದರೆ ಪರಸ್ಪರ ಭಾಯಿ, ಬೆಹನ್ ಎಂದು ಹೇಳುತ್ತಿದ್ದುದರಿಂದ ಅವರಲ್ಲಿ ಸಂಶಯ ಪಡದೆ ನಮ್ಮ ತಾಯಿ ತಂದೆ ಮದುವೆ ಮಾಡಿದರು. ಆದರೆ ನಂತರ ತಿಳಿಯಿತು. ಅವರ ಮಧ್ಯೆ ನಿಕಟ ಸಂಬಂಧವಿದ್ದು ಜಗತ್ತನ್ನು ವಂಚಿಸಲಿಕ್ಕೆ ನನ್ನನ್ನು ಮದುವೆ ಮಾಡಿಕೊಂಡಿದ್ದಾರೆಂದು. ಇದನ್ನು ನನ್ನ ತಾಯಿ ತಂದೆಯರಿಗೆ ಹೇಳಿದರೆ ಅವರು ತುಂಬಾ ನೊಂದುಕೊಳ್ಳುವರೆಂದು ನಾನು ಒಳಗೇ ದುಃಖಿಸುತ್ತಿದ್ದೇನೆ. ಮಗುವೂ ಆಗಿದೆ. ತೌರು ಮನೆ ಸೇರಿದ ನನಗೆ ಗಂಡನ ಬಳಿಗೆ ಹೋಗಲು ಮನಸ್ಸಿಲ್ಲ. ಇಂಥ ಸಂದಿಗ್ಧತೆಯ ಮಧ್ಯೆ ಸಾಯಬೇಕೆನಿಸಿದೆ. ನನಗೆ ತಮ್ಮ ಸಲಹೆ ಏನು ?

★ ಕೆಲವರು ಧಾರ್ಮಿಕ ಸೋಗಿನಲ್ಲಿ ಎಂಥಾ ವಂಚನೆ ಮಾಡುತ್ತಾರೆ ಎಂದು ಆಶ್ಚರ್ಯವಾಗುತ್ತದೆ. ತಾವು ಪರಿಶುದ್ಧರು ಎಂದು, ಸೋಗು ಹಾಕಲು ನಿನ್ನ ಜೀವನವನ್ನು ದುಃಖಕ್ಕೆ ಈಡು ಮಾಡಿ ಇಂಥ ನಾಟಕ ಆಡುವ ಬದಲು ಧೈರ್ಯವಾಗಿ ಆಕೆಯನ್ನೇ ಮದುವೆಯಾಗಿದ್ದರೆ ಜನರು ಸ್ವಲ್ಪ ದಿನ ಆಡಿಕೊಂಡರೂ ಈಗಿನ ಸಂಬಂಧದಂತೆ ಅಪರಾಧಕರವಾಗುತ್ತಿರಲಿಲ್ಲ, ಪಾಪಾತ್ಮಕವಾಗುತ್ತಿರಲಿಲ್ಲ. ಇರಲಿ ನೀನು ಎದೆಗೆಡಬೇಡ. ದುಡಿದು, ಅನ್ನಗಳಿಸುವ ಶಕ್ತಿ ನಿನಗಿದೆ. ಸತ್ತು ಏನೂ ಸಾಧಿಸಲು ಸಾಧ್ಯವಿಲ್ಲ. ನಿನ್ನ ಮಗುವಿಗಾಗಿ ನೀನು ಕರ್ತವ್ಯ ಮುಖಿಯಾಗು. ಮನಸ್ಸನ್ನು ಆಧ್ಯಾತ್ಮದ ಕಡೆಗೆ ತಿರುಗಿಸಿ ವಚನ ಸಾಹಿತ್ಯ ಅಧ್ಯಯನದಲ್ಲಿ ಮನಃಶಾಂತಿ ಕಂಡುಕೊ.

- ಬಸವರಾಜ ಸಂಗಮದ, ಬೀದರ

850 ವರ್ಷಗಳ ಬಳಿಕ ಈಗೀಗ ಲಿಂಗಾಯತ ಸಮಾಜದಲ್ಲಿ ಜಾಗೃತಿ ಆಗುತ್ತಿದೆ ಎನ್ನಿಸುತ್ತಿದೆ. ಈ ಸಮಾಜಕ್ಕೆ ಒಂದು ಸ್ಪಷ್ಟರೂಪ ಬರುತ್ತಿದೆ. ಈಗಾಗಲೇ 12ನೆಯ ಶತಮಾನದಿಂದ ಈಚೆಗೆ 3-4 ಸಲ ಏಳುಬೀಳುಗಳನ್ನು ಕಂಡಿದೆ. ಇನ್ನು ಮುಂದೆ ಅದೇ ಶಿಥಿಲತೆ ಪುನರಾವರ್ತನೆಯಾಗ-ಬಾರದೆಂದರೆ ಏನು ಮಾಡಬೇಕು ?

★ ಈ ಏಳುಬೀಳಿನ ರೋಗಕ್ಕೆ ಪ್ರಮುಖ ಕಾರಣಗಳೆಂದರೆ

1. ಧರ್ಮಗುರು ಬಸವಣ್ಣನವರ ಸ್ಥಾನವನ್ನು ಕೆಳಗೆ ಇಳಿಸಿದುದು.
2. ಏಕಗುರೂಪಾಸನೆ ಬಿಟ್ಟು ಬಹುಗುರೂಪಾಸನೆಗೆ ಈಡಾದುದು.
3. ಏಕದೇವ ನಿಷ್ಠೆ ಬಿಟ್ಟು ಬಹುದೇವತಾರಾಧನೆ ರೂಢಿಸಿದ್ದು.
4. ವಚನ ಸಾಹಿತ್ಯದ ಸಂಪರ್ಕವನ್ನು ಸಮಾಜ ಕಡಿದುಕೊಂಡುದು.
5. ಒಂದು ಧರ್ಮಕ್ಷೇತ್ರವನ್ನು ಗುರುತಿಸಿಕೊಳ್ಳದುದು.
6. ಧರ್ಮಬಂಧುಗಳು ಒಂದು ಕಡೆ ಸೇರದುದು, ಇತ್ಯಾದಿ.,

ಈಗ ರೋಗದ ಕಾರಣ ಗುರುತಿಸಿ, ಚಿಕಿತ್ಸೆ ಆರಂಭಿಸಲಾಗಿದೆ. ಆದ್ದರಿಂದ ಶಿಥಿಲತೆಗೆ ಅಷ್ಟೊಂದು ಅವಕಾಶವಿಲ್ಲ. ಆದರೂ ಮುನ್ನೆಚ್ಚರಿಕೆಯನ್ನು ವಹಿಸಲೇಬೇಕು.

ಬಹುಪಾಲು ಮಠಾಧೀಶರು ಕ್ರೈಸ್ತ, ಇಸ್ಲಾಂ, ಸಿಖ್ ಧರ್ಮಗಳ ಶಕ್ತಿ ಹುದುಗಿರುವ ಏಕದೇವೋಪಾಸನೆ, ಏಕಗುರೂಪಾಸನೆಗೆ ಅವಕಾಶ ಕೊಡದೆ ತಮ್ಮತ್ತ, ತಮ್ಮ ಮಠಗಳತ್ತ ಜನರು ಆಕರ್ಷಿಸಲ್ಪಡುವಂತೆ ಹೊಸ ಹೊಸ ತಂತ್ರಗಳನ್ನು ಹೂಡುವರು. ಶರಣ ಮೇಳಕ್ಕೆ ಬಂದು ವಿಚಾರಶೀಲರಾಗಿ, ಜಾಗೃತ ಚೇತನಗಳಾಗಿ ಜನರು ಹೋಗಿಯಾರೆಂದು ಅದಕ್ಕೆ ಬರದಂತೆ ತಡೆಯಲು ಅದೇ ದಿನಾಂಕಗಳಲ್ಲಿ ಕಾರ್ಯಕ್ರಮ ಹಾಕುವರು.

ಸ್ಥಳೀಯರು ನಾವೇ ನಿಮಗೆ ಹುಟ್ಟಿನಲ್ಲಿ ಸಾವಿನಲ್ಲಿ ಆಗುವವರು, ಅವರು (ಬಸವ ಧರ್ಮ ಪೀಠದವರು) ಬರುವರೇ ? ಆದ್ದರಿಂದ ಸ್ಥಳೀಯರನ್ನು ಬಿಟ್ಟು ದೂರದವರನ್ನು ಆಶ್ರಯಿಸುವಿರಾ ?

ಎಂದು ಘೋಷಿಸಿ ಮಾಡುವರು. ಮಹಾತ್ಮಾ ಗಾಂಧಿ ವಿದ್ಯುದಾಗಾರದಲ್ಲಿ ವಿದ್ಯುತ್ ಉತ್ಪತ್ತಿಯಾಗಿ, ಮುಖ್ಯ ಕೇಂದ್ರದಲ್ಲಿ ಸಂಗ್ರಹಿತವಾಗಿ, ನಾಡಿನಾದ್ಯಂತ ಪ್ರಸರಣಗೊಳ್ಳುವುದು. ಹಾಗೆ ಅನುಭವ ಮಂಟಪದಲ್ಲಿ ಅಂದು ತಯಾರಾದ ಜ್ಞಾನ ವಿದ್ಯುತ್ ಇಂದು ಬಸವ ಧರ್ಮ ಪೀಠದಿಂದ ಶರಣ ಮೇಳದ ಮೂಲಕ ಎಲ್ಲೆಡೆ ಹಬ್ಬಿ ಹಸರಿಸುತ್ತಿದೆ. ನೀವು ಶರಣ ಮೇಳದ ಸಂಪರ್ಕ ಕಡಿದುಕೊಂಡರೆ ಹಿಂದಿನ ತಪ್ಪು ಪುನರಾವರ್ತನೆಯಾಗುತ್ತದೆ. ಹೇಗೆ ಇಸ್ಲಾಮಿನ ಜಾಗತಿಕ ಶಕ್ತಿ ಮೆಕ್ಕಾದ ಹಜ್‌ದಲ್ಲಿ, ಸಿಖ್ಖರ ಶಕ್ತಿ ಅಮೃತಸರದ ಖಾಲ್ಸಾದಲ್ಲಿದೆಯೋ ಹಾಗೆ ಲಿಂಗಾಯತ ಧರ್ಮದ ಏಳ್ಗೆ ಇರುವುದು ಶರಣ ಮೇಳದ ಮೂಲಕ. ಅದನ್ನು ವಿಸ್ತಾರಗೊಳಿಸಿದಷ್ಟೂ ಈ ಧರ್ಮಕ್ಕೆ ಉಜ್ವಲ ಶಕ್ತಿ ಒದಗುವುದು.

- ಬಸವರಾಜ ಪಾಟೀಲ್, ಬೀದರ

ಕ್ರೈಸ್ತರಲ್ಲಿ ಮುಸಲೀಮರಲ್ಲಿ ಪಾದ್ರಿ, ಮೌಲ್ವಿ, ಇಮಾಮ್ ಹುದ್ದೆ ಜಾತಿಯಿಂದ ಬರದೆ ಅರ್ಹತೆಯಿಂದ ಬರುತ್ತದೆ. ಸಧ್ಯದಲ್ಲಿ ನಮ್ಮಲ್ಲಿ ಜಂಗಮತ್ವ ಜಾತಿಯಿಂದ ಬರುತ್ತಿದೆ. ಅವರು ಉಳಿದ ಲಿಂಗಾಯತರಿಗಿಂತ ಶ್ರೇಷ್ಠರೆಂದು ಭಾವಿಸಿ, ಲಿಂಗಾಯತರು ಭಕ್ತರು ಎಂದು ಅವರ ಮನೆಗೆ ಹೆಣ್ಣು-ಗಂಡು ಕೊಟ್ಟು ಕೊಳ್ಳುವ ವ್ಯವಹಾರ ಸಹ ಮಾಡುವುದಿಲ್ಲ. ಜಂಗಮ ಎಂಬ ಜಾತಿ ಹೇಗೆ ಬಂದಿತು ?

★ ಆಂಧ್ರದಲ್ಲಿ ಬಸವ ಪೂರ್ವದಲ್ಲಿದ್ದ ವೀರಶೈವರಲ್ಲಿ (ಚರ) ಲಿಂಗಧಾರಿ ಬ್ರಾಹ್ಮಣ ಗೃಹಸ್ಥನನ್ನು ಮಾಹೇಶ್ವರ ಎಂದು, ಸನ್ಯಾಸಿಯನ್ನು ಜಂಗಮ ಎಂದು ಕರೆಯಲಾಗುತ್ತಿತ್ತು. ಜಂಗಮ ಎಂದರೆ ಸಂಚರಿಸುವ ಜ್ಞಾನಿ ಎಂಬರ್ಥದಲ್ಲಿ ಧರ್ಮಗುರು ಬಸವಣ್ಣನವರು ಪದವನ್ನು ಬಳಸಿ, ಜಂಗಮನ ಪರಿಕಲ್ಪನೆ ನೀಡಿದರು. ದೀಕ್ಷೆ ತೆಗೆದುಕೊಂಡು ಬಂದ ಬಳಿಕವೂ ಲಿಂಗಧಾರಿ ಬ್ರಾಹ್ಮಣರು ತಾವು ಶ್ರೇಷ್ಠರೆಂದು ಬೀಗುತ್ತ ಉಳಿದ ಲಿಂಗಾಯತರನ್ನು ಕೀಳಾಗಿ ಕಾಣತೊಡಗಿದರು. ಪ್ರಭುದೇವರ ಪೀಠಾರೋಹಣದ ಬಳಿಕ ಅಂಥವರು ವಿರೋಧಿಸಿದ್ದನ್ನು ಕಾಣುತ್ತೇವೆ. ಇದು ಆರಾಧ್ಯರಲ್ಲಿ ಮಾತ್ರ ಕಾಣಬರುವ ಸಂಗತಿ. ಉತ್ತರ ಕರ್ನಾಟಕದ ಜಂಗಮರನ್ನು ಗಮನಿಸಿದಾಗ ಅವರು ಮತಾಂತರಗೊಂಡ ಬ್ರಾಹ್ಮಣರು ಎನ್ನಿಸದು. ವಿರಕ್ತ ಮಠಗಳ ಸಂಪರ್ಕದಲ್ಲಿರುವ ಜಂಗಮ ಗೃಹಸ್ಥರು ಬಸವ ಮಾರ್ಗಿಗಳಾಗಿರುವುದನ್ನು ನೋಡುತ್ತೇವೆ.

ಹಾಗಾದರೆ ಈ ವರ್ಗ ಹೇಗೆ ಬಂದಿರಬಹುದು ? ಎಂಬುದಕ್ಕೆ ನನ್ನ ಊಹೆ ಹೀಗಿದೆ. ಧರ್ಮಗುರು ಬಸವಣ್ಣನವರು ಹೊಸ ಧರ್ಮಕೊಟ್ಟರು. ಅದು ಹಬ್ಬುತ್ತ ಬಂದಾಗ ದೀಕ್ಷೆ ಪಡೆದ ಜನರಿಗೆ ಆಚಾರ-ವಿಚಾರ-ಅನುಭಾವ ಬೋಧಿಸಲು ಕ್ರಿಯಾ ಮೂರ್ತಿಗಳನ್ನು ಮಾಡಿದರು. ಆ ಜನರು ಕಾಲನಂತರದಲ್ಲಿ ಸ್ವಲ್ಪ ದೊಡ್ಡಸ್ತಿಕೆ ಬೆಳೆಸಿಕೊಂಡು ಒಂದು ಊರಿನ ಕ್ರಿಯಾಮೂರ್ತಿಯ ಮನೆತನ ಇನ್ನೊಂದು ಊರಿನ ಕ್ರಿಯಾಮೂರ್ತಿಯ ಮನೆತನದೊಡನೆ ವೈವಾಹಿಕ ಸಂಬಂಧ ಬೆಳೆಸುತ್ತ ಹೋದಾಗ ಜಂಗಮವು ಒಂದು ಜಾತಿಯಾಗಿ ಸೃಷ್ಟಿಯಾಗಿರುವ ಸಾಧ್ಯತೆ ಇದೆ. ಜಂಗಮವನ್ನು ಒಂದು ಜಾತಿ ಎಂದು ಭಾವಿಸುವುದು ಲಿಂಗಾಯತ ಧರ್ಮದ ಪ್ರಗತಿಪರ ಮೂಲಭೂತ ಸಿದ್ಧಾಂತಕ್ಕೆ ಅವಮಾನಕರ. ಜಂಗಮನ ಮೂಲಲಕ್ಷಣ ವೈರಾಗ್ಯ, ತ್ಯಾಗ. ಅಂದಾಗ ಜಂಗಮನಿಗೆ ಪತ್ನಿ, ಪುತ್ರರು ಇರುವುದಿಲ್ಲ ; ಅವನು ಪೂರ್ವಾಶ್ರಮವನ್ನು ತೊರೆದು ದೀಕ್ಷಾಬದ್ಧನಾಗಿರುವುದರಿಂದ ಮಾತಾಪಿತೃಗಳು, ಅಣ್ಣ ತಮ್ಮಂದಿರೂ ಇರುವುದಿಲ್ಲ. ಇಂದಿನ ಜಂಗಮ ವಂಶಸ್ಥರೆಲ್ಲ ತ್ಯಾಗಿಗಳಲ್ಲ, ವೈರಾಗ್ಯಮೂರ್ತಿಗಳಲ್ಲ; ಗಾಣಿಗರೆಲ್ಲ ಎಣ್ಣೆ ತೆಗೆಯುವುದಿಲ್ಲ. ಬಣಜಿಗರೆಲ್ಲ ವ್ಯಾಪಾರಿಗಳಲ್ಲ. ಆದ್ದರಿಂದ ಜಾತಿ, ವೃತ್ತಿ ವಾಚಕ ಈ ಹೆಸರುಗಳನ್ನು ಬಿಟ್ಟು ಲಿಂಗಾಯತ ಎಂಬ ಒಂದೇ ಒಂದು ಧರ್ಮವಾಚಕ ತತ್ತ್ವವಾಚಕ ಪದವನ್ನು ಬಳಸುವುದು ಒಳ್ಳೆಯದು.

-ಬಸಯ್ಯ ಚೆನ್ನಯ್ಯ ಮಠಪತಿ, ಬಸವ ಕಲ್ಯಾಣ.

ಬಸವ ಕಲ್ಯಾಣದಲ್ಲಿ ನಡೆದ ಶರಣ ಕಮ್ಮಟದಲ್ಲಿ ಚಿತ್ರದುರ್ಗ ಶ್ರೀಗಳ ಸನ್ನಿಧಾನದಲ್ಲಿ ಭೀಮಣ್ಣ ಖಂಡ್ರೆಯವರು ಒಂದು ಮಾತನ್ನು ಹೇಳಿದರು. ಅದೆಂದರೆ "ಬಸವಣ್ಣವರಿಗೆ ಅಪ್ಪ ಎಂದು ತಿಳಿಯಿರಿ. ರೇಣುಕಾಚಾರ್ಯರಿಗೆ ಮುತ್ಯಾ ಎಂದು ಭಾವಿಸಿರಿ. ಆಗ ಸಮಾಜದಲ್ಲಿ ಒಗ್ಗಟ್ಟು ಬರುವುದು ಎಂದು. ಇದು ಒಳ್ಳೆಯ ಸಲಹೆಯಲ್ಲವೆ.

★ ಇದು ಮೂರ್ಖ ಸಲಹೆ. ಯಾವ ರೇಣುಕಾಚಾರ್ಯರು ಎಂದೆಂದೂ ಇರಲಿಲ್ಲವೋ ಯಾವುದೂ ಸಾಹಿತ್ಯ ನೀಡಿಲ್ಲವೋ. ಅಂಥವರನ್ನು ಐತಿಹಾಸಿಕ ವ್ಯಕ್ತಿ ಎಂದು ನಂಬಲಾದೀತೆ ? ಹುಸಿ ಬೆದರಿಕೆ ಹಾಕಿ ಸುಳ್ಳನ್ನು ಸತ್ಯವೆಂದು ನಂಬಿಸಲು ಹುನ್ನಾರ ಮಾಡುವವರಿಗೆ ಮಣಿದರೆ ಇನ್ನೂ ಅಂಥ ಹತ್ತಾರು ಕೃತ್ರಿಮ ವ್ಯಕ್ತಿಗಳನ್ನು ಹುಟ್ಟಿಸಿಯಾರು ? ಅಂಥವರ ಒಡನಾಟವೇ ಸಲ್ಲ.

ಬಸವ ಧರ್ಮ ಪೀಠಕ್ಕೆ ಕೃತಜ್ಞತೆ

ಪೂಜ್ಯರೇ,

ತಮ್ಮ ವೈಚಾರಿಕ ವಿಚಾರಧಾರೆಗಳಿಂದ ಪ್ರಭಾವಿತರಾದ ಅಸಂಖ್ಯಾತ ಶರಣರಲ್ಲಿ ನಾನೂ ಒಬ್ಬ. "ಮನಪರುಷ, ದೃಷ್ಟಿಪರುಷ, ಭಾವಪರುಷ ಲಿಂಗ ಗಣಂಗಳು ; ಲಿಂಗದೇವಾ ನಿಮ್ಮ ಶರಣರ ಅನುಭಾವದಿಂದ ನಾನು ಸುಖಿಯಾದೆನು" ಎನ್ನುವ ಅಪ್ಪ ಬಸವಣ್ಣನವರ ವಚನ ವಾಣಿಯಂತೆ ಪರುಷಮಯ ವ್ಯಕ್ತಿತ್ವವನ್ನು ಹೊಂದಿ ನಡೆ, ನುಡಿ, ತನು, ಮನ ಹಾಗೂ ಭಾವ ಪರಿಶುದ್ಧತೆಯಿಂದ ಅಧ್ಯಯನಶೀಲರಾಗಿ ಆತ್ಮ ಸಾಧನೆಯ ಜೊತೆಜೊತೆಯಲ್ಲೇ ಸುಂದರ-ಬಂಧುರ ಸಮಾಜ ನಿರ್ಮಾಣ ಮಾಡುವಲ್ಲಿ ತಾವು ಕ್ರಿಯಾಶೀಲರಾಗಿರುವುದು ಅತ್ಯಂತ ಸಂತೋಷ ಹಾಗೂ ಹೆಮ್ಮೆಯ ವಿಷಯವಾಗಿದೆ. ಬಸವಣ್ಣನವರ ಸಾಕ್ಷಾತ್ಕಾರಪೂರ್ವದ ವಚನ ರಚನೆಗೂ ಹಾಗೂ ನಂತರ ವಚನ ರಚನೆಗೂ ವ್ಯತ್ಯಾಸವನ್ನು ಕಂಡು ಹಿಡಿದು ಲಿಂಗದೇವಾ ವಚನಾಂಕಿತವನ್ನು ತಾತ್ತ್ವಿಕವಾಗಿ ನಿರೂಪಿಸಿರುವುದು ತಮ್ಮ ಅಧ್ಯಯನದ ಆಳ-ಹರಹುಗಳನ್ನು ಪರಿಚಯಿಸುತ್ತದೆ. ಹಾಗೆಯೇ "ವೀರಶೈವ" ಮತ್ತು "ಲಿಂಗಾಯತ" ಇವುಗಳ ಬಗ್ಗೆ ಇದ್ದ ತಪ್ಪು ಕಲ್ಪನೆಯನ್ನು ತಮ್ಮ ಅದ್ಭುತ ವಿಚಾರಧಾರೆಯಿಂದ ಸಮರ್ಪಕವಾಗಿ ಹಾಗೂ ಸ್ಪಷ್ಟವಾಗಿ ತಿದ್ದಿ, ತಿಳಿಹೇಳಿ ಬಸವಣ್ಣನವರಿಂದ ಸ್ಥಾಪಿಸಲ್ಪಟ್ಟ "ಲಿಂಗಾಯತ ಧರ್ಮ" ಒಂದು ವಿಶ್ವಧರ್ಮ ಎಂದು ಸಾಬೀತು ಪಡಿಸುವಲ್ಲಿ ತಾವು ಯಶಸ್ವಿಯಾಗಿರುವುದು ಐತಿಹಾಸಿಕ ದಾಖಲೆ ಎಂಬುದು ಜನತೆಗೆ ಮನವರಿಕೆಯಾಗಿದೆ.

ಅದಕ್ಕೂ ಮಿಗಿಲಾಗಿ ಖ್ಯಾತ ಸಂಶೋಧಕರಾದ ಡಾ॥ ಚಿದಾನಂದ ಮೂರ್ತಿಯವರಾದಿಯಾಗಿ ಅನೇಕ ಸಾಹಿತಿಗಳು ವಚನಸಾಹಿತ್ಯವನ್ನು ಕೇವಲ ಸಾಹಿತ್ಯಾತ್ಮಕ ದೃಷ್ಟಿಕೋನದಿಂದ ಮಾತ್ರ ಅಭ್ಯಾಸಮಾಡಿದ್ದಾರೆಯೇ ಹೊರತು ಆಧ್ಯಾತ್ಮಿಕ ನೆಲೆಗಟ್ಟಿನ ಮೇಲಂತೂ ಅಲ್ಲ ಎಂಬುದನ್ನು ತಿಳಿಯಪಡಿಸಿ ನಮ್ಮಲ್ಲಿ ಜಾಗೃತಿಯನ್ನು ಮೂಡಿಸಿದ್ದೀರಿ. ಆದ್ದರಿಂದ ಪ್ರಾಮಾಣಿಕವಾಗಿ, ಅಧ್ಯಾತ್ಮದ ಹಸಿವೆಯಿಂದ, ನಿಷ್ಠೆ ಹಾಗೂ ಶ್ರದ್ಧಾಪೂರ್ವ ಅಧ್ಯಯನದಿಂದ ವಚನ ಸಾಹಿತ್ಯದ ಒಳಹೊರಗನ್ನು ಸಮಾಜಕ್ಕೆ ಪರಿಚಯಿಸುತ್ತಾ, ವೈಶಿಷ್ಟ್ಯಪೂರ್ಣ ತಾತ್ತ್ವಿಕ ಪರಿಕಲ್ಪನೆಗಳನ್ನು ಅಳವಡಿಸುತ್ತಾ ಸಮಾಜದ ಉದ್ಧಾರಕ್ಕೆ ಸತತವಾಗಿ ಶ್ರಮಿಸುತ್ತಿರುವ ತಮಗೆ ಹಾಗೂ ಪೂಜ್ಯ ಗಂಗಾ ಮಾತಾಜಿಯವರಿಗೆ ಹಾಗೂ ಬಸವ ಧರ್ಮ ಪೀಠದ ಎಲ್ಲ ಗುರುಹಿರಿಯರಿಗೆ ಸಮಾಜದ ಜನತೆ ಚಿರಋಣಿಯಾಗಿದೆ. ಪೂಜ್ಯ ಅಪ್ಪಾಜಿಯವರ ಕನಸನ್ನು ನನಸು ಮಾಡುವಲ್ಲಿ ತಮ್ಮೆಲ್ಲರ ಪರಿಶ್ರಮಕ್ಕೆ ನಾವು ಭಾಗಿಯಾಗುವ ಕಾಲ ಸನ್ನಿಹಿತವಾಗಿದೆ "ಧರ್ಮೋರಕ್ಷತಿ ರಕ್ಷಿತಃ" ಎಂಬ ಅಮೃತವಾಣಿ ನನ್ನಲ್ಲಿ ಸದಾ ಗುಂಯ್‌ಗುಡುತ್ತಿದೆ. ಧರ್ಮವೇ ಉಸಿರಾಗಿರುವ ತಮ್ಮೆಲ್ಲರ ಸನಿಹದಿಂದ ಬದುಕು ಸಾರ್ಥಕವಾಗುವುದರಲ್ಲಿ ಸಂಶಯವೇ ಇಲ್ಲ. ಆ ಸಾರ್ಥಕತೆಯ ಸಾಧನೆಗೆ ಅವಕಾಶ ಬೇಗ ಬರಲೆಂದು ಪ್ರಾರ್ಥಿಸುತ್ತಾ ಪತ್ರಕ್ಕೆ ಪೂರ್ಣವಿರಾಮ ಹಾಕುತ್ತೇನೆ.

ಶರಣು ಶರಣಾರ್ಥಿಗಳು

ಸುಜ್ಞಾನ ಪ್ರಭು

ಕಾರ್ಯದರ್ಶಿ, ರಾಷ್ಟ್ರೀಯ ಬಸವ ದಳ, ತುಮಕೂರು

ಬಸವ ಧರ್ಮ ಅಧ್ಯಯನ /ಸಂಶೋಧನ ಕೇಂದ್ರ

ಪರಮಪೂಜ್ಯ ಮಾತಾಜಿಯವರಿಗೆ ಭಕ್ತಿಪೂರ್ವಕ ಅನಂತ ಶರಣು ಶರಣಾರ್ಥಿಗಳು.

ಬಸವ ಧರ್ಮ ಸಮ್ಮೇಳನ, ಜನಗಣತಿಯಲ್ಲಿ ಲಿಂಗಾಯತ ಎಂದು ಬರೆಸುವ ಕುರಿತು ಹಾಗೂ ಬಸವ ಧರ್ಮ ಅಧ್ಯಯನ/ಸಂಶೋಧನ ಕೇಂದ್ರಕ್ಕಾಗಿ ಕುರಿತು ನನ್ನ ಅನಿಸಿಕೆಗಳು/ ಆಶಯಗಳು.

1. ಬೆಂಗಳೂರಿನಲ್ಲಿ ನಡೆದ ಬಸವ ಧರ್ಮ ಸಮ್ಮೇಳನದಲ್ಲಿ 'ಲಿಂಗಾಯತರು ಹಿಂದುಗಳಲ್ಲ' ಎನ್ನುವ ಖಡಾಖಂಡಿತ ಅಭೂತ ಪೂರ್ವ ಘೋಷಣೆ ಅತ್ಯಂತ ಸ್ವಾಗತಾರ್ಹವಾದದ್ದು, ಸ್ತುತ್ಯರ್ಹವಾದುದು. ಇದು ಬಸವ ಧರ್ಮ ಪೀಠದ ಕೊಡುಗೆ. ಇದರಿಂದ ಬಸವ ಧರ್ಮದ ಅಸ್ತಿತ್ವ, ತತ್ತ್ವ ಗಟ್ಟಿಗೊಳ್ಳುವುದು. ಒಂದು ಕರಾಳ ಕತ್ತಲೆಯ ಛಾಯೆಯಿಂದ ಹೊರಬಂದು ಸ್ವತಂತ್ರ ಧರ್ಮವಾಗಿ ಬಸವ ಪ್ರಕಾಶದಲ್ಲಿ ಬೆಳಗುವುದು. ಇದಕ್ಕಾಗಿ ನಾನಲ್ಲದೆ ಸಮಾಜ ಹಾಗೂ ಧರ್ಮವೂ ಕೂಡ ತಮಗೆ ಋಣಿಯಾಗಿರಬೇಕಾಗುತ್ತದೆ.
2. ಜನಗಣತಿಯಲ್ಲಿ ಲಿಂಗಾಯತ ಎಂದು ಬರೆಸುವುದು ಯಾವುದೇ ಮೀಸಲಾತಿ ಪಡೆಯಲು ಅದರ ಅವಶ್ಯಕತೆಯನ್ನು ಬಿಂಬಿಸದೆ, ಲಿಂಗಾಯತ ಧರ್ಮಾನುಯಾಯಿಗಳ ಒಟ್ಟು ಸಂಖ್ಯೆ, ಪ್ರದೇಶವನ್ನು ಕಂಡುಕೊಳ್ಳುವ ಮೂಲಕ ತಾತ್ತ್ವಿಕ ಒಗ್ಗಟ್ಟು ಮತ್ತು ಲಿಂಗಾಯತ ತತ್ತ್ವದ ಅನುಯಾಯಿತ್ವವನ್ನು ದೃಢಪಡಿಸುವುದಕ್ಕಾಗಿ ಪ್ರಚಾರ ಕೈಕೊಂಡರೆ ಹೆಚ್ಚು ಅರ್ಥಪೂರ್ಣವಾಗಿರುತ್ತದೆಂದು ನನ್ನ ಭಾವನೆ. ಕಾಯಕ-ದಾಸೋಹದಲ್ಲಿ ನಂಬಿಕೆ ಇಟ್ಟ ನಮಗೆ ಯಾವುದೇ ಲಾಭದ ಆಮಿಷ ನಮಗೆ ಸಲ್ಲದು.
3. ಕೊನೆಯದು ಬಸವ ಧರ್ಮ ಪೀಠ ಕೂಡಲಸಂಗಮದಲ್ಲಿ ಬಸವ ಧರ್ಮ ಅಧ್ಯಯನ/ಸಂಶೋಧನ ಕೇಂದ್ರ ಸ್ಥಾಪಿಸುವ ಕುರಿತು. ಬಸವ ಧರ್ಮದ ತತ್ತ್ವ ಪ್ರಸರಣದಲ್ಲಿ ಹಾಗೂ ಅತ್ಯುನ್ನತ ಮಟ್ಟದಲ್ಲಿ ಅಧ್ಯಯನ ಕೈಗೊಳ್ಳುವಲ್ಲಿ ಬಸವ ಧರ್ಮ ಪೀಠ ಕೂಡಲಸಂಗಮ ಪರಮೋಚ್ಚ ಸ್ಥಾನವಾಗಬೇಕು. Final authority ಆಗಬೇಕು. ಆದ್ದರಿಂದ ಬಸವಣ್ಣನವರಿಂದ ಆದಿಯಾಗಿ ಸಮಕಾಲೀನರ ವಚನಗಳು, ವಚನ ಕಟ್ಟುಗಳು, ಓಲೆಗರಿಗಳು, ನಂತರ ಬೆಳೆದು ಬಂದ ಶುದ್ಧ ಬಸವ ಸಾಹಿತ್ಯವನ್ನು, ಹಾಗೆ ಎಸ್. ಆರ್. ಗುಂಜಾಳರವರು ಸಂಪಾದಿಸಿದ ಬಸವ ಸಾಹಿತ್ಯ ದರ್ಪಣದಲ್ಲಿ ಕೊಟ್ಟಂತಹ ಎಲ್ಲ ಗ್ರಂಥಗಳು (ಎಲ್ಲ ಭಾಷೆಗಳನ್ನೊಳಗೊಂಡಂತೆ) ಒಂದು ಕಡೆ ಸಿಗುವಂತಹ ಸ್ಥಾನವಾಗಬೇಕು ಎನ್ನುವುದು ನನ್ನ ಹೆಬ್ಬಯಕೆ. ಇದು ಅಷ್ಟು ಸುಲಭ ಸಾಧ್ಯವಾಗುವ ಕಾರ್ಯವಲ್ಲ ಎಂಬುದು ನನಗೆ ಗೊತ್ತು. ಆದರೆ ತಮ್ಮ ಇಚ್ಛಾ ಹಾಗೂ ಕರ್ತೃ ಶಕ್ತಿಯು ಇದನ್ನು ಮಾಡಬಲ್ಲುದು ಎಂಬುದು ನನ್ನ ನಂಬಿಕೆ. ಇದರ ರೂಪುರೇಷೆಗಳ ಕುರಿತು ಶರಣ ಮೇಳದ ಪೂರ್ವಭಾವಿ ಸಭೆಯಲ್ಲಿ ಚರ್ಚಿತವಾದರೆ ಇನ್ನೂ ಸೂಕ್ತ.

ಭಕ್ತಿಪೂರ್ವಕ ಪ್ರಣಾಮಗಳೊಂದಿಗೆ,

ನಂದೂರ ಮಹಾಂತಪ್ಪ, M.A.B.Ed.,
ಹುಬ್ಬಳ್ಳಿ, 14-11-2000

ಬಸವಣ್ಣನವರ ವಚನಗಳು-ಅಮಿತ, ಅನುಪಮ, ಅನುಭವದ ಅಮರ ವಾಣಿಗಳು.

ಕಲ್ಯಾಣ ಕಿರಣದ ಎರಡು ಪ್ರತಿಗಳು ಬರುತ್ತಿದ್ದರೆ ಒಂದರ ಕ್ರಮ ಸಂಖ್ಯೆ ಕಾಣಿಸಿ ದಯವಿಟ್ಟು ಪತ್ರ ಬರೆಯಿರಿ. - ವ್ಯವಸ್ಥಾಪಕರು

ಲಿಂಗಾಯತ ಧರ್ಮದ ದುರಂತ ಅಧ್ಯಾಯದ ಮುಕ್ತಾಯ ಪುನರುತ್ಥಾನ ಕಾಲದ ಸನ್ನಿಹಿತ

ಮನುಕುಲವನ್ನು ಉದ್ಧರಿಸಲು ಪರಮಾತ್ಮನ ಪ್ರತಿನಿಧಿಗಳಾಗಿ ಈ ಭರತಭೂಮಿಯಲ್ಲಿ ಅನೇಕ ಮಹಾಪುರುಷರು ಕಾಲಕಾಲಕ್ಕೆ ಹುಟ್ಟಿಬಂದಿದ್ದಾರೆ. ಇವರಲ್ಲಿ ಅಸಮತೆ, ಸ್ತ್ರೀಶೋಷಣೆ, ವರ್ಣವರ್ಗ ವ್ಯವಸ್ಥೆಯ ವಿರುದ್ಧ ಹೋರಾಡಿದ ಮಹಾತ್ಮರಲ್ಲಿ ಬುದ್ಧ, ಬಸವ, ಅಂಬೇಡ್ಕರರನ್ನು ಹೆಸರಿಸಬಹುದು. ಇವರೆಲ್ಲ ಸುಮಾರು ಸಾವಿರ ವರ್ಷದ ಕಾಲಮಾನದ ಅಂತರದಲ್ಲಿ ಜನಿಸಿದವರು. ಬುದ್ಧ ರಾಜನಾದರೆ, ಬಸವಣ್ಣ ಪ್ರಧಾನಿ, ಅಂಬೇಡ್ಕರ್ ಒಬ್ಬ ಸಾಮಾನ್ಯ ಪ್ರಜೆ. ಇವರೆಲ್ಲರ ಸಾಧನೆಯ ಗುರಿ ಸಮಾನತೆ. ಬುದ್ಧ ಸ್ವತಃ ರಾಜನಾದರೂ ಸುಖ ತನಗೊಬ್ಬನಿಗೆ ಇರಬಾರದು. ಸಕಲ ಮಾನವರ ಕಲ್ಯಾಣ ಬಯಸುವ ಗುರಿ ಇರಬೇಕೆಂದು ಒಂದು ಹೊಸದಾದ ಧರ್ಮ ಸಿದ್ಧಾಂತವನ್ನೇ ಕೊಟ್ಟ. ಬುದ್ಧನ ಕಾಲಾನಂತರ ಅಶೋಕ ಚಕ್ರವರ್ತಿಯಂತಹ ಬಲಾಢ್ಯನಿಂದ ಬುದ್ಧನ ತತ್ತ್ವಗಳು ವ್ಯಾಪಕ ಪ್ರಚಾರ ಪಡೆದವು. ನಂತರ ವೈದಿಕ ಪುರೋಹಿತರ ಕಾಲ್ತುಳಿತಕ್ಕೆ ಒಳಗಾಗಿ ಬುದ್ಧನ ತತ್ತ್ವಗಳು ದುರ್ಬಲಗೊಂಡು ದೇಶದ ಗಡಿಯಾಚೆ ಹೊರಟುಹೋದವು. ನಂತರ 12ನೇ ಶತಮಾನದಲ್ಲಿ ಬಸವಣ್ಣ ಹುಟ್ಟಿಬಂದ. ಪ್ರಧಾನಿ ಪಟ್ಟ ಅಲಂಕರಿಸಿದ ಬಸವಣ್ಣರ ಕಾರ್ಯಕ್ಷೇತ್ರ ಕಲ್ಯಾಣ. ಕಳಚೂರ್ಯವಂಶದ ಬಿಜ್ಜಳನ ಮಹಾಮಂತ್ರಿಯಾಗಿ, ಸಮಾಜದಲ್ಲಿ ಧಾರ್ಮಿಕ, ಸಾಮಾಜಿಕ-ಆರ್ಥಿಕ, ಶೈಕ್ಷಣಿಕ ರಂಗಗಳಲ್ಲಿ ಅಪೂರ್ವ ಬದಲಾವಣೆಯನ್ನು ತಂದ ಮಹಾಕ್ರಾಂತಿಯೋಗಿ. ಇವನಾರವ ಇವನಾರವನೆಂದು ಭೇದವೆಣಿಸದೇ ಸಕಲ ಜೀವರಾಶಿಗಳ ಕಲ್ಯಾಣವನ್ನು ಬಯಸಿದ ಮಹಾಗುರು ಅನುಭವ ಮಂಟಪ ಸ್ಥಾಪಿಸಿ ನಾಡಿನಾದ್ಯಂತ ಚರಜಂಗಮವ್ಯವಸ್ಥೆಯನ್ನು ಮಾಡಿ, ಕೆಲವೇ ಜನರ ಸ್ವತ್ತಾಗಿದ್ದ ವಿದ್ಯೆಯನ್ನು ಸಾರ್ವತ್ರಿಕಗೊಳಿಸಿದ ಮಹಾಗುರು ಬಸವಣ್ಣನವರು. ಜನಸಾಮಾನ್ಯರನ್ನು ಸಾಹಿತಿಗಳನ್ನಾಗಿ ಮಾಡಿದ ಮಹಾಸಾಹಿತಿ. 770 ಅಮರಗಣಂಗಳಿಂದ ಹೊಗಳಿಸಿಕೊಂಡ ಮಹಾಪುರುಷ.

ಲಿಂಗವಂತ ಧರ್ಮದಲ್ಲಿ "ಶರಣು" ಎನ್ನುವ ಪದಕ್ಕೆ ಬಹಳ ಮಹತ್ವವಿದೆ. ಇದು ಕೇವಲ ಒಂದು ಶಬ್ದವಲ್ಲ ಒಂದು ಧರ್ಮಸಂಸ್ಕೃತಿಯ ಜೀವಾಳ. ಈ ಪರಂಪರೆಯ ಶರಣರು ಎಷ್ಟೊಂದು ಸೂಕ್ಷ್ಮಮತಿಗಳಾಗಿದ್ದರೆಂಬುದಕ್ಕೆ ಹರಳಯ್ಯ ಕಲ್ಯಾಣಮ್ಮರು ದೊಡ್ಡ ಉದಾಹರಣೆ. ಹರಳಯ್ಯನ ಒಂದು ಶರಣುವಿಗೆ ಪ್ರತಿಯಾಗಿ ಬಸವಣ್ಣನವರು ಶರಣು ಶರಣಾರ್ಥಿ ಎಂದು ಎರಡು ಶರಣು ಸಲ್ಲಿಸಿದರು. ಒಂದು ಹೆಚ್ಚಿನ ಶರಣುವಿನ ಭಾರವನ್ನು ತೀರಿಸಲು ಕಲ್ಯಾಣಮ್ಮನು ಗಂಡನಿಗೆ ಕೊಡುವ ಸಲಹೆ ಎಂದರೆ, ಇಬ್ಬರ ಒಂದೊಂದು ತೊಡೆಯ ಚರ್ಮವನ್ನು ಕೊಯ್ದು ಬಸವಣ್ಣನಿಗೆ ಚಪ್ಪಲಿ ಮಾಡಿ ಕೊಡುವುದು. ಒಂದು ಶಬ್ದದ ಋಣಭಾರವನ್ನು ತೀರಿಸಲು ತೊಡೆಯ ಚರ್ಮವನ್ನೇ ಕೊಯ್ದುಕೊಂಡ ಸೂಕ್ಷ್ಮಮತಿಗಳು ಜಗತ್ತಿನ ಯಾವ ಧಾರ್ಮಿಕ ಸಾಹಿತ್ಯದಲ್ಲಿ ಸಿಗುತ್ತಾರೆ ? ಬಸವಣ್ಣನವರು ಅವುಗಳನ್ನು ಮೆಟ್ಟಲು ನಿರಾಕರಿಸಿ ತಲೆಯ ಮೇಲೆ ಹೊತ್ತು ಕುಣಿದಾಡಿದರು. ಅವುಗಳನ್ನು ಗರ್ವದಿಂದ ಮೆಟ್ಟಿದ ಮಧುವರಸನ ಮೈಯಲ್ಲಿ ಉರಿಯೆದ್ದು, ಹರಳಯ್ಯನ ಬಾನೆಯ ನೀರಿನಿಂದ ಅದು ಉಪಶಮನವಾದಾಗ, ಮುಂದೆ ಅವರಿಬ್ಬರಲ್ಲಿ ಸಮಾನ ತತ್ತ್ವಗಳು ಅಳವಟ್ಟು ಅವರಿಬ್ಬರೂ ರಕ್ತಸಂಬಂಧಿಗಳಾಗಲು ಒಪ್ಪಿಕೊಳ್ಳುತ್ತಾರೆ.

ಬ್ರಾಹ್ಮಣನಾದ ಮಧುವರಸನ ಮಗಳು ಲಾವಣ್ಯವತಿಯನ್ನು ಅಂತ್ಯಜನಾದ ಹರಳಯ್ಯನ ಮಗನಿಗೆ ಕೊಟ್ಟು ಶರಣ ಸಮ್ಮತ ಲಗ್ನ ಮಾಡುತ್ತಾರೆ. ಭಾರತೀಯ ವರ್ಣವ್ಯವಸ್ಥೆಯ ಮೆಲ್ತುದಿಯಲ್ಲಿರುವ ಬ್ರಾಹ್ಮಣ ಮಧುವರಸ ಕೆಳತುದಿಯಲ್ಲಿರುವ ಅಂತ್ಯಜನಾದ ಹರಳಯ್ಯ ಇವರ ಸಂಬಂಧವನ್ನು ವಿಲೋಮ ಮದುವೆಯೆಂದು ಪರಿಗಣಿಸಿ, ಧರ್ಮಶಾಸ್ತ್ರಕೋವಿದರು ರಾಜನಲ್ಲಿ ದೂರುತ್ತಾರೆ. ಈ ಮದುವೆಗೆ ಸಮ್ಮತಿ ನೀಡಿದ ಬಸವಣ್ಣನ ಗಡಿಪಾರು ಮಾಡಿ ಮಧುವರಸ, ಹರಳಯ್ಯ, ಶೀಲವಂತರನ್ನು ಬಂಧಿಸಿ ಕಣ್ಣು ಕೀಳಿಸಿ

ಆನೆಯ ಕಾಲಿಗೆ ಕಟ್ಟಿ ತುಳಿಸುವ ಘೋರ ಶಿಕ್ಷೆ ವಿಧಿಸಲಾಯಿತು. ಲೆಕ್ಕವಿಲ್ಲದಷ್ಟು ಶರಣರ ವಧೆಯಾಯಿತು. ಉಳಿದ ಶರಣರು ವಚನಸಾಹಿತ್ಯವನ್ನು ಹೊತ್ತು ಉಳುವಿಗೆ ನಡೆದರು. ಬಿಜ್ಜಳನ ಕೊಲೆಯಾಯಿತು. ಶೀಲವಂತನ ಹೆಣವನ್ನು ತಲೆಕೆಳಗೆ ಮಾಡಿ ಕಲ್ಯಾಣ ಬಸವಣ್ಣನ ಪರುಷಕಟ್ಟೆಯ ಮೇಲೆ ತೂಗಿಬಿಡಲಾಯಿತು. ಈ ಘೋರ ದೃಶ್ಯವನ್ನು ಕಂಡ ಕಲ್ಯಾಣಮ್ಮ, "ಕಲ್ಯಾಣ ಕಟುಕರ ಕೇರಿಯಾಗಲಿ ಎಂದು" ಮನನೊಂದು ಪ್ರಾಣಬಿಟ್ಟಳು. ಇಷ್ಟೆಲ್ಲ ದುರ್ಘಟನೆ ನಡೆದರೂ ಶರಣರು ಎದೆಗುಂದಲಿಲ್ಲ. ಮರಣವೇ ಮಹಾನವಮಿ ಎಂದು ಸಾರಿ, ಮತ್ತೆ ನಾವೆಲ್ಲ 800 ವರ್ಷಕ್ಕೆ ಮತ್ತೆ ಬರುತ್ತೇವೆ ಎಂದು ಕಾಲಜ್ಞಾನ ವಚನಗಳಲ್ಲಿ ದಾಖಲಿಸಿ ಹೋಗಿದ್ದಾರೆ.

ಸಮಾನತೆಗಾಗಿ ಹೋರಾಡಲು 800 ವರ್ಷಗಳ ನಂತರ ಅಂಬೇಡ್ಕರ್ ಹುಟ್ಟಿಬಂದರು, ಅಸ್ಪೃಶ್ಯನಾಗಿ ಜನಿಸಿ, ಅಸ್ಪೃಶ್ಯರಿಗಾಗುತ್ತಿದ್ದ ಎಲ್ಲಾ ನೋವುಗಳನ್ನು ಸಹಿಸಿಕೊಂಡು, ಚಿಂತನಶೀಲವ್ಯಕ್ತಿಯಾಗಿ ದೇಶ ವಿದೇಶಗಳ ಉನ್ನತ ಪದವಿಗಳನ್ನು ಪಡೆದು, ಕಾನೂನು ಮಂತ್ರಿಯಾಗಿ, ಸಂವಿಧಾನ ಶಿಲ್ಪಿಯಾಗಿ ಏನೆಲ್ಲವನ್ನೂ ಸಾಧಿಸಿದ ಅಂಬೇಡ್ಕರ್‌ರು ಕೊನೆಗೆ ಮಾಡಿದ್ದು ಧರ್ಮಾಂತರ, ನಾನು ಹಿಂದು ಆಗಿ ಹುಟ್ಟಿದ್ದೇನೆ. ಆದರೆ ಹಿಂದು ಆಗಿ ಸಾಯಲಾರೆ ಎಂದು 5 ಲಕ್ಷ ಅನುಯಾಯಿಗಳೊಂದಿಗೆ ನಾಗಪುರದ ಬೃಹತ್ ಸಮಾರಂಭದಲ್ಲಿ ಬೌದ್ಧಧರ್ಮ ಸ್ವೀಕರಿಸಿದರು. ಇದು ಅಂಬೇಡ್ಕರ ದುರಂತವೋ ಲಿಂಗಾಯತ ಧರ್ಮದ ದುರಂತವೋ ತಿಳಿಯದಾಗಿದೆ. ಯಾವ ಅಸ್ಪೃಶ್ಯತೆಗಾಗಿ ಶರಣರೆಲ್ಲಾ ಹೋರಾಡಿ ಕಲ್ಯಾಣದಲ್ಲಿ ಕ್ರಾಂತಿ ಜರುಗಿತು ಎನ್ನುವ ವಿಚಾರ ಅಂಬೇಡ್ಕರರಿಗೇನಾದರೂ ತಿಳಿದಿದ್ದರೆ, ಲಿಂಗಾಯತ ಧರ್ಮದ ಚಿತ್ರಣವೇ ಬೇರೆಯಾಗುತ್ತಿತ್ತು. ದುರದೃಷ್ಟವಶಾತ್ ಅವರ ಸಾಹಿತ್ಯದಲ್ಲಿ ಅಪ್ಪಿ ತಪ್ಪಿಕೂಡಾ ಬಸವಣ್ಣನವರಾಗಲಿ ಶರಣರಾಗಲಿ ಅವರ ಸಾಹಿತ್ಯವಾಗಲಿ ದಾಖಲಾತಿಯಾಗಿಲ್ಲದ್ದನ್ನು ನೋಡಿದಾಗ ಅವರಿಗೆ ನಮ್ಮ ಶರಣರ ಬಗ್ಗೆಯಾಗಲಿ ಅವರ ಸಾಹಿತ್ಯದ ಬಗ್ಗೆಯಾಗಲಿ ಪರಿಚಯ ಇದ್ದಿದ್ದೆ ಆಗಿದ್ದರೆ ಅವರು ತಮ್ಮದೇ ಆದ ಅಧಿಕೃತ ಧರ್ಮವನ್ನು ಬಿಟ್ಟು ಬೇರೊಂದು ಧರ್ಮ ಸ್ವೀಕರಿಸುತ್ತಿದ್ದರೊ ಅಥವಾ, ಸಂವಿಧಾನ ಶಿಲ್ಪಿಯಾದ ಅವರು ಇದನ್ನು ಕಾನೂನು ಬದ್ಧಸ್ವತಂತ್ರ ಧರ್ಮವನ್ನಾಗಿ ಗಟ್ಟಿಗೊಳಿಸುತ್ತಿದ್ದರೋ ? ಇದೆಲ್ಲ ಕಾಲಗರ್ಭದಲ್ಲಿ ಹೂತುಹೋದ ಲಿಂಗಾಯತ ಧರ್ಮದ ದುರಂತ ಅಧ್ಯಾಯವಾಗಿದೆ.

ಈ ವಿಚಾರಗಳೆಲ್ಲ ಮನಸ್ಸಿನ ಮಂಡಿಗೆಗಳಾದರೆ, ಶರಣರ ಸತ್ಯವಾದ ವಚನಗಳ ವಿಶ್ವಾಸ ಲಿಂಗವಂತರಿಗಿದೆ. "ನಾರಿಯೊಬ್ಬಳು ಬಂದು ಭಾರಿ ಅಬ್ಬರಹೊತ್ತು ಆರೂಢ ಭಿಕ್ಷೆ ಬೇಡ್ಯಾಳೋ ವೀರ ಬಸವಣ್ಣ ಬರುವಾಗ" ಎಂಬ ಕಾಲಜ್ಞಾನದ ವಚನ. "ಬಸವ ಪೀಠವು ಎದ್ದು ಒಸೆದು ನಾಣ್ಯವು ಹುಟ್ಟಿ ಬಸವನಾ ಮುದ್ರೆ ಮೆರೆದಾವು ಜಗದೊಳಗೆ ವಶವಾಗದಿಹುದೆ" ಎಂದು ಸರ್ವಜ್ಞ ಮಹಾಕವಿಯ ವಾಣಿ. ಇವು ಎಂದೂ ಸುಳ್ಳಾಗಲು ಸಾಧ್ಯವಿಲ್ಲ. ಈಗಾಗಲೇ ಅನೇಕ ಕಾಲಜ್ಞಾನದ ವಿಚಾರಗಳು ನಿಜವಾಗುತ್ತಾ ಬಂದಿವೆ. ಬಸವ ಪೀಠವೂ ಎದ್ದಿದೆ. ಮಾತಾಜಿಯ ರೂಪದಲ್ಲಿ ನಾರಿಯೂ ಬಂದಿದ್ದಾಳೆ. ಭಾರಿ ಅಬ್ಬರದ ಪ್ರಚಾರ ಕೂಡಾ ನಡೆದಿದೆ. ಎಲ್ಲರೂ ಒಂದೊಂದು ಆಯುಧವನ್ನು ದೇವಿ ಜಗದಂಬೆಗೆ ಕೊಟ್ಟು ಶುಂಭ ನಿಶುಂಭರನ್ನು ಸಂಹಾರ ಮಾಡಲು ಕಳಿಸಿದಂತೆ. ಎಲ್ಲಾ ಲಿಂಗಾಯತರು ಬರುವ 2001ನೇ ಜನಗಣತಿಯ 8ನೇ ಕಾಲಂನಲ್ಲಿ "ಲಿಂಗಾಯತ" ಎಂಬ ಆಯುಧವನ್ನು ಕೊಟ್ಟು ಲಿಂಗಾಯತರನ್ನು ಕಾಡುವ ಶುಂಬ ನಿಶುಂಭರನ್ನು ದೇವಿ ಸಂಹರಿಸುವಂತೆ ಸೃಷ್ಟಿಕರ್ತ ಲಿಂಗದೇವ ಹಾಗೂ ಧರ್ಮಕರ್ತ ಬಸವಣ್ಣನಲ್ಲಿ ಬೇಡಿಕೊಳ್ಳೋಣ. ಆದ್ದರಿಂದ ಎಲ್ಲ ಲಿಂಗಾಯತ ಬಂಧುಗಳು ಜನಗಣತಿಯ 7ನೇ ಪ್ರಶ್ನೆ, 8ನೆಯ ಕಾಲಂನಲ್ಲಿ 'ಲಿಂಗಾಯತ' ಎಂದು ಮಾತ್ರ ಬರೆಸಿ, ವೈದಿಕದ ಬಂಗಾರದ ಪಂಜರದಲ್ಲಿ ಕುಳಿತ ನಮ್ಮ ಧರ್ಮದ ಪಕ್ಷಿಯನ್ನು ಸ್ವತಂತ್ರಗೊಳಿಸೋಣವೆಂದು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

-ಎನ್.ಕೆ. ಬಸವರಾಜ
ಕೌಲಪೇಟೆ, ಬಳ್ಳಾರಿ

ಶರಣ ವ್ರತ ಸ್ವೀಕಾರ

-ಮಾತಾಜಿ

ಸಿಖ್ ಧರ್ಮದ ಖಾಲ್ಸಾ, ಇಸ್ಲಾಂ ಧರ್ಮದ ಹಜ್‌ದಿಂದ ಪ್ರೇರಿತರಾಗಿ, ಪಂಢರಾಪುರದ ವಾರಕರಿಯ ದಿಂಡಿ ಉತ್ಸವ, ಶಬರಿ ಮಲೈದ ಅಯ್ಯಪ್ಪಸ್ವಾಮಿ ಭಕ್ತಿಪಂಥದ ಆಚರಣೆಗಳಿಂದ ಸ್ಫೂರ್ತಿ ಪಡೆದು ವಿಶ್ವಗುರು ಬಸವಣ್ಣನವರ ವಿದ್ಯಾಭೂಮಿ, ತಪೋಸ್ಥಾನ, ಐಕ್ಯಕ್ಷೇತ್ರ ಕೂಡಲ ಸಂಗಮವನ್ನು ಧರ್ಮಕ್ಷೇತ್ರವೆಂದು ಗುರುತಿಸಿಕೊಂಡು 1988ರಲ್ಲಿ ಮೊಟ್ಟ ಮೊದಲ ಶರಣ ಮೇಳವನ್ನು ನಡೆಸಲಾಯಿತು. ಇದು ವಿಶ್ವಗುರು ಬಸವಣ್ಣನವರೇ ಆದಿಯಾಗಿ ಶರಣ ಪುಂಗವರೆಲ್ಲರ ಅಪೇಕ್ಷೆ ಮತ್ತು ಸಂಕಲ್ಪ ಎಂಬುದು ನಮಗೆಲ್ಲ ಮನದಟ್ಟಾಗಿದೆ. ಧರ್ಮಪಿತ ಬಸವಣ್ಣನವರು ಅವರ ಕಾಲದಲ್ಲಿಯೇ ಆಗಾಗ ಗಣಪರ್ವಗಳನ್ನು ನಡೆಸಿ ಶರಣರನ್ನು ಒಂದೆಡೆಯಲ್ಲಿ ಸಮಾವೇಶಗೊಳಿಸುತ್ತಿದ್ದರು. ಇದಕ್ಕೆ ಅಂಗ, ವಂಗ, ಕಳಿಂಗ, ಗುರ್ಜರ ದೇಶಗಳಿಂದೆಲ್ಲ ಭಕ್ತರು ಬರುತ್ತಿದ್ದರು ಎಂಬುದನ್ನು ಹರಿಹರ ಮಹಾಕವಿ, ಸಿಂಗಿರಾಜ ಮುಂತಾದವರು ಬಣ್ಣಿಸಿದ್ದಾರೆ.

ಮಡಿವಾಳ ಮಾಚಿದೇವರು ಕಾಲಜ್ಞಾನ ವಚನದಲ್ಲಿ ಹೀಗೆ ಹೇಳುತ್ತಾರೆ.

೧. ದಕ್ಷಿಣದ ಕೃಷ್ಣೆಗೆ ಕರೆವರೈಯ್ಯ ಜನ ನೆರೆವರಯ್ಯ

೨. ಉತ್ತರ ದಕ್ಷಿಣ ಪೂರ್ವ ಪಶ್ಚಿಮ ಹರನಾಜ್ಞೆಯಿಂದ ಬಂತು
ಜರಿಯಲು ಬೇಡ, ಅರಿದು ನೋಡುವುದು
ಅಮೃತ ರಸಾಯನವೆಂದು ಶರಣ ಸಂತತಿಗಳು ತಿಳಿವರು

೩. ಪರಿಧಾವಿಯೆಂಬ ಕಟ್ಟಳೆಗೆ ಉಳಿದವರು ಬರುವರು
ಒಬ್ಬರುಳಿಯದ ಹಾಗೆ ನೆರೆದು ಕೂಡುವರು.

ಪರಿಧಾವಿ ಸಂವತ್ಸರವು ಕ್ರಿ.ಶ. 2032ಕ್ಕೆ ಬರುವುದು. ಈಗ ನಾವು ಎಷ್ಟೇ ಕಳಕಳಿಯಿಂದ ನಿಷ್ಕಲ್ಮಶ ಮನಸ್ಸಿನಿಂದ ಕರೆದರೂ ಲಿಂಗಾಯತರು ಎಲ್ಲರೂ ಒಟ್ಟಾಗಿ ಸೇರದೆ, ಶರಣ ಮೇಳಕ್ಕೆ ಬರದೆ ಗುಂಪುಗುಂಪಾಗಿ ಇರುವರು. ಆದರೆ ಆದಿ ಶರಣರ ಸಂಕಲ್ಪ, ನಮ್ಮ ಆಶಯ ಖಂಡಿತ ವ್ಯರ್ಥವಾಗದು. ಈ ಎಲ್ಲ ಭೇದಗಳು ಅಳಿದು ಕ್ರಿ.ಶ. 2032ರ ಸುಮಾರಿಗೆ (ನಾವು ಅಷ್ಟು ಕಾಲ ಬದುಕಿರದೆ ಇದ್ದರೂ) ಎಲ್ಲ ಬಸವ ಭಕ್ತರು, ಲಿಂಗಾಯತರು ಶರಣ ಮೇಳಕ್ಕೆ, ಧರ್ಮಕ್ಷೇತ್ರ ಕೂಡಲ ಸಂಗಮಕ್ಕೆ ಬರಲು ಆರಂಭಿಸುವರು. ಇದು ಮಾಚಿದೇವರ ವಾಣಿ.

ಬಸವ ಧರ್ಮ ಸಂಸ್ಥಾಪನಾ ದಿನದ ಅಂಗವಾಗಿ ಜನವರಿ 11ರಿಂದ ೧೪ರವರೆಗೆ ಶರಣ ಮೇಳವು 1988 ರಿಂದಲೂ ನಡೆಯುತ್ತ ಬರುತ್ತಿದ್ದು 2001 ಇಸವಿಗೆ 14ನೆಯ ಶರಣ ಮೇಳ ಒದಗಿ ಬಂದಿದೆ. ಕೇವಲ ಯಾಂತ್ರಿಕವಾಗಿ ಬಂದು ಹೋಗುವ ಪರಿಪಾಠಕ್ಕಿಂತಲೂ 'ಶರಣ ವ್ರತ'ವನ್ನು ಸ್ವೀಕಾರ ಮಾಡಿ ಬರುವ ಪರಿಪಾಠವು ಅತ್ಯುತ್ತಮ. ಈಗಾಗಲೇ 3-4 ವರ್ಷಗಳಿಂದ ಕೆಲವರು ಶರಣ ವ್ರತಧಾರಿಗಳಾಗಿ ಬರುತ್ತಲಿದ್ದಾರೆ. ಈಗ ನಾವು ಇದಕ್ಕೆ ನಿರ್ದಿಷ್ಟ ರೂಪ ಕೊಡಬೇಕಲ್ಲದೆ, ಹೆಚ್ಚಿನ ಸಂಖ್ಯೆಯಲ್ಲಿ ಶರಣ ವ್ರತಿಗಳು ವ್ರತ ಸ್ವೀಕಾರ ಮಾಡುವುದಕ್ಕೆ ಒತ್ತು ಕೊಡಬೇಕು. ಇದಕ್ಕಾಗಿ ಕೆಲವು ನಿಯಮಾವಳಿ ಸೂಚಿಸಲಾಗಿದೆ.

ಜನವರಿ 14ರಂದು ಬೆಳಿಗ್ಗೆ ಗಣಲಿಂಗ ದರ್ಶನ ಪಡೆಯುವುದು, 11ರಿಂದ 2ರವರೆಗೆ ನಡೆಯುವ ಸಮುದಾಯ ಪ್ರಾರ್ಥನೆಯಲ್ಲಿ ಭಾಗವಹಿಸುವುದು, ಸಂಜೆ ನಡೆಯುವ ಸಾಮೂಹಿಕ ಇಷ್ಟಲಿಂಗಾರ್ಚನೆಯಲ್ಲಿ ಪಾಲ್ಗೊಳ್ಳುವ ಕ್ರಿಯೆಯಿಂದ ಆ ವರ್ಷದ ವ್ರತ ಪೂರ್ತಿಯಾಗುತ್ತದೆ. ಈ ದಿನಾಂಕಕ್ಕೆ ಪೂರ್ವಭಾವಿಯಾಗಿ 10,20,30,40 ದಿವಸಗಳ ವ್ರತವನ್ನು ಶರಣ ಬಂಧುಗಳು ಕೈಗೊಳ್ಳಬೇಕು.

೧. ಗುರು ಸಾರಾಯ ಸಂಪದ್ ವ್ರತ : 40 ದಿವಸಗಳ ವ್ರತ ; ಡಿಸೆಂಬರ್ 6ರಂದು ಪ್ರಾರಂಭ
೨. ಲಿಂಗ ಸಾರಾಯ ಸಂಪದ್ ವ್ರತ : 30 ದಿವಸಗಳ ವ್ರತ ; ಡಿಸೆಂಬರ್ 16ರಂದು ಪ್ರಾರಂಭ
೩. ಜಂಗಮ ಸಾರಾಯ ಸಂಪದ್ ವ್ರತ : 20 ದಿವಸಗಳ ವ್ರತ ; ಡಿಸೆಂಬರ್ 26ರಂದು ಪ್ರಾರಂಭ.
೪. ಪ್ರಸಾದ ಸಾರಾಯ ಸಂಪದ್ ವ್ರತ : 10 ದಿವಸಗಳ ವ್ರತ ; ಜನವರಿ 5ರಂದು ಪ್ರಾರಂಭ.

ಈ ನಾಲ್ಕು ಅವಧಿಯ ವ್ರತಗಳಲ್ಲಿ ಯಾವುದನ್ನೇ ಆಯ್ದುಕೊಂಡರೂ ಶರಣ-ಶರಣೆಯರು, ಮಕ್ಕಳು-ಮುದುಕರು ಯಾರೇ ಇರಲಿ ಮುಂದೆ ತಿಳಿಸುವ ನೇಮಗಳನ್ನು ನಡೆಸಬೇಕು.

೧. ಬಿಳಿಯ ವಸ್ತ್ರಗಳನ್ನು ಧರಿಸಬೇಕು. ವ್ರತದ ಅವಧಿಯಲ್ಲಿ ಶರಣರಿರಲಿ, ಶರಣೆಯರೇ ಇರಲಿ ಬಿಳಿಯ ವಸ್ತ್ರಗಳನ್ನು ಧರಿಸಿರಬೇಕು, ಕಾಲಲ್ಲಿ ಚಪ್ಪಲಿ ಧರಿಸುವುದನ್ನು ತೊರೆಯಬೇಕಾಗಿಲ್ಲ. ಚಪ್ಪಲಿ ತೊಡುವುದರಿಂದ ಕಾಲಿಗೆ ರಕ್ಷೆ ಇರುತ್ತದೆ. ಚಪ್ಪಲಿ ಮೈಲಿಗೆ ಎಂಬ ತಪ್ಪು ತಿಳುವಳಿಕೆಯಿಂದ ಯಾರೋ ಬೇರೆ ವ್ರತಗಳವರನ್ನು ನೋಡಿ ಚಪ್ಪಲಿ ತೊಡುವುದನ್ನು ಬಿಡಬೇಕಾಗಿಲ್ಲ.
೨. ಪೂಜೆ-ಪಠಣ ಮಾಡುವಾಗ ಬಿಳಿಯ ವಸ್ತ್ರದ ಮೇಲೆ ಕಾವಿಯ ಸ್ಕಾರ್ಫನ್ನು ಕಡ್ಡಾಯವಾಗಿ ಧರಿಸಬೇಕು.
೩. ಶರಣರು ತಲೆಯ ಮೇಲೆ ಷಟ್ಕೋನದ ಟೋಪಿ ಧರಿಸಿರಬೇಕು.
೪. ಬೆಳಗ್ಗೆ-ಸಂಜೆ ಎರಡೂ ಹೊತ್ತು ಸ್ನಾನ ಮಾಡಬೇಕು. ಲಿಂಗಾಯತರು, ಇಷ್ಟಲಿಂಗಾರ್ಚನೆ, ಗುರು ಬಸವಾರ್ಚನೆ ಮಾಡಬೇಕು. ಲಿಂಗಾಯತೇತರರ ಬಸವ ಭಕ್ತರು ಗುರು ಬಸವಾರ್ಚನೆ ಮಾಡಬೇಕು.
೫. ಎರಡೂ ಹೊತ್ತು ವಚನ ಪಠಣ ಮಾಡಬೇಕು. ಬೆಳಗ್ಗೆ 108 ವಚನ ಸಂಜೆ 108 ವಚನ ಪಠಿಸಬೇಕು. ಓದಲು ಬರದ ಅವಿದ್ಯಾವಂತರು 'ಓಂ. ಶ್ರೀ ಗುರು ಬಸವಲಿಂಗಾಯ ನಮಃ' ಮಂತ್ರವನ್ನು ೧೦೮ರಂತೆ ಎರಡೂ ಹೊತ್ತು ಪಠಿಸಬಹುದು.
೬. ಸಂಜೆಯ ವೇಳೆಯಲ್ಲಿ ಶರಣ ವ್ರತಿಗಳೆಲ್ಲರು ಒಂದು ಸ್ಥಳದಲ್ಲಿ ಸಾಮೂಹಿಕವಾಗಿ ಸೇರಿ ನೆನಹು-ಸಂಕ್ಷಿಪ್ತ ಪ್ರಾರ್ಥನೆ ಮಾಡಿ, ವಚನ ಪಠಣ ಮಾಡಿ, ವಚನ ಲೇಖನವನ್ನು ಮಾಡಬೇಕು. ಪ್ರಾರ್ಥನೆ-ವಚನ ಪಠಣದ ನಂತರ, ಮೌನವಾಗಿ ವಚನ ಲೇಖನವನ್ನು ಕೈಗೊಳ್ಳಬೇಕು. ಬರೆಯಲು ಬರದವರು ಕನಿಷ್ಠ "ಓಂ ಶ್ರೀ ಗುರು ಬಸವಲಿಂಗಾಯ ನಮಃ" ಬರೆಯಲು ಕಲಿತು, ಅದೇ ಮಂತ್ರವನ್ನು ಬರೆಯಬೇಕು. ವಚನ ಲೇಖನ ಗ್ರಂಥವನ್ನು ಬರುವಾಗ ತಮ್ಮ ಜೊತೆಗೆ ತಂದು, ಪುನಃ ಮನೆಗೆ ಹೋಗುವಾಗ ಒಯ್ದು, ಮನೆಯಲ್ಲೂ ಬರಹ ಮುಂದುವರಿಸಬಹುದು.
೭. ವ್ರತ ಕಾಲದಲ್ಲಿ ಕಾಯಕವನ್ನು ಬಿಡಬೇಕಾಗಿಲ್ಲ. ಇನ್ನೂ ನಿಷ್ಠೆಯಿಂದ ಮಾಡಬೇಕು.
೮. ಲಿಂಗಾಯತರು ಭಸ್ಮ, ರುದ್ರಾಕ್ಷಿ ಇಷ್ಟಲಿಂಗಗಳನ್ನು ಸದಾ ಧರಿಸಿರಬೇಕು, ಲಿಂಗಾಯತೇತರ ವ್ರತಧಾರಿಗಳು ಭಸ್ಮ-ರುದ್ರಾಕ್ಷಿಗಳನ್ನು ತಪ್ಪದೇ ಧರಿಸಿರಬೇಕು.
೯. ಸ್ತ್ರೀಯರು ಮುಟ್ಟು-ಮೈಲಿಗೆ ಮುಂತಾದ ಭ್ರಾಂತಿಗೆ ಒಳಗಾಗಬಾರದು.
೧೦. ವ್ರತದ ಅವಧಿಯಲ್ಲಿ ಧೂಮ್ರಪಾನ, ತಂಬಾಕು ಸೇವನೆ, ಮಾಂಸಾಹಾರ, ದಾಂಪತ್ಯ ಸುಖ ಪೂರ್ಣವಾಗಿ ವರ್ಜಿಸಬೇಕು, ಮದ್ಯಪಾನ ವ್ಯಸನಿಗಳು ಮತ್ತು ಮಾಂಸಾಹಾರಿಗಳು ವ್ರತದ ಅವಧಿಯ ನಂತರವೂ ಇವನ್ನು ಬಿಟ್ಟು ಶುದ್ಧಿಯನ್ನು ಕಾಯ್ದುಕೊಂಡರೆ ಉತ್ತಮ.
೧೧. ವ್ರತದ ಅವಧಿಯಲ್ಲಿ ಲಿಂಗಾಯತರು ಪ್ರತಿ ದಿವಸವೂ ಎರಡೂ ಹೊತ್ತು ಇಷ್ಟಲಿಂಗ ಪೂಜೆ ಮಾಡಿ, ನಂತರ ಗುರು ಬಸವಣ್ಣನವರ 108 ಸ್ತುತಿಗಳನ್ನು ಹೇಳಿ ಪೂಜಿಸಿ, ತದ ನಂತರ ವಚನ ಪಠಣ ಮತ್ತು ವಚನ ಲೇಖನ ವಿಧಿಯನ್ನು ಪೂರ್ಣಗೊಳಿಸಬೇಕು. ವ್ರತದ ಅವಧಿಯಲ್ಲಿ ಎಷ್ಟು

ಸೋಮವಾರ ಬರುತ್ತವೋ ಅಷ್ಟು ಸೋಮವಾರ ಅಥವಾ ಕಾಯಕ ಜೀವಿಗಳು ಸೋಮವಾರ ರಜೆ ಇಲ್ಲದಿರುವುದರಿಂದ ಭಾನುವಾರದಂದು ಬಸವೇಶ್ವರ ಪೂಜಾವ್ರತವನ್ನು ಪೂರ್ಣ ರೂಪದಲ್ಲಿ ಮಾಡಬೇಕು. ಲಿಂಗಾಯತೇತರರು ಇಷ್ಟಲಿಂಗ ದೀಕ್ಷೆ ಪಡೆದಿರದಿದ್ದರೆ, ಆಗ ದಿನನಿತ್ಯ ಗುರುಬಸವಾರ್ಚನೆ ಮಾಡಿ 108 ಬಸವ ಮಂತ್ರ ಪಠಣ ಮಾಡಬೇಕು. ವಾರಕ್ಕೊಮ್ಮೆ ಪೂರ್ತಿ ಪೂಜಾವ್ರತ ಮಾಡಬೇಕು. ವಚನ ಪಠಣ ಮತ್ತು ವಚನ ಲೇಖನಗಳನ್ನು ಕಡ್ಡಾಯವಾಗಿ ಮಾಡಬೇಕು.
೧೨. ರಾಷ್ಟ್ರೀಯ ಬಸವ ದಳಗಳು ಇದ್ದಲ್ಲಿ ಹೆಚ್ಚು ಹೆಚ್ಚು ಜನರನ್ನು ಅವರ ಸಮಯಾವಕಾಶಕ್ಕೆ ತಕ್ಕಂತೆ 10, 20, 30, 40 ದಿವಸಗಳ ಶರಣ ವ್ರತಿಗಳಾಗಲು ಪ್ರೇರೇಪಿಸಬೇಕು. ಕೂಡಲ ಸಂಗಮಕ್ಕೆ ಶರಣ ಮೇಳಕ್ಕೆ ಕರೆ ತರಬೇಕು. ಅಲ್ಲಿ ಅವರವರ ರಾಷ್ಟ್ರೀಯ ಬಸವ ದಳಗಳಿಂದ ಶರಣ ವ್ರತಧಾರಿಗಳ ಪಟ್ಟಿಯನ್ನು ಸಲ್ಲಿಸಬೇಕು ಅತಿ ಹೆಚ್ಚಿನ ಶರಣ ವ್ರತಿಗಳನ್ನು ಕರೆತಂದ ರಾಷ್ಟ್ರೀಯ ಬಸವ ದಳಗಳಿಗೆ ಕ್ರಮವಾಗಿ ೩ ಬಹುಮಾನಗಳನ್ನು ಕೊಡಲಾಗುವುದು. ರಾಷ್ಟ್ರೀಯ ಬಸವ ದಳ ಇಲ್ಲದಿರುವಲ್ಲಿ ವೈಯಕ್ತಿಕವಾಗಿಯೇ ಶರಣ ಬಂಧುಗಳು ವ್ರತವನ್ನು ಧಾರಣೆ ಮಾಡಬಹುದು.
ಅದೇ ರೀತಿ, ಶರಣ ವ್ರತ ಸ್ವೀಕಾರ ಮಾಡದೆಯೂ ಕೇವಲ ವಚನ ಲೇಖನ ಮಾತ್ರ ಮಾಡುವವರನ್ನು ಪ್ರೇರೇಪಿಸಿ, ವಚನಗಳನ್ನು, ಬರೆಸಿ,-ತಂದು ಸಮರ್ಪಿಸುವ ರಾಷ್ಟ್ರೀಯ ಬಸವ ದಳ ಅಥವಾ ಇನ್ನಿತರ ಧಾರ್ಮಿಕ ಸಂಸ್ಥೆಗಳಿಗೂ ಬಹುಮಾನ ಉಂಟು.
೧೩. ರಾಷ್ಟ್ರೀಯ ಬಸವ ದಳಗಳಲ್ಲಿ ಕ್ರಿಯಾ ಮೂರ್ತಿಗಳಿದ್ದರೆ ಅವರಿಂದ ಶರಣ ವ್ರತ ದೀಕ್ಷೆ ಪಡೆಯಬಹುದು. ಸಾಮಾನ್ಯವಾಗಿ ಮೊದಲೇ ಶರಣ ಬಂಧುಗಳು ಇಷ್ಟಲಿಂಗ, ರುದ್ರಾಕ್ಷಿ ಮಾಲೆ ಮುಂತಾಗಿ ಧರಿಸಿರುತ್ತಾರೆ. ಅಕಸ್ಮಾತ್ ರುದ್ರಾಕ್ಷಿ ಮಾಲೆಯನ್ನು ಮೊದಲೇ ಧರಿಸಿರದಿದ್ದರೆ ಶರಣ ವ್ರತದ ಕಾಲದಲ್ಲಿ ತಪ್ಪದೆ ಧರಿಸಬೇಕು. ರುದ್ರಾಕ್ಷಿ ಮಾಲೆ ಸಿಕ್ಕದೆ ಇದ್ದರೆ, ಅಥವಾ ಅದು ಬಹಳ ತುಟ್ಟಿ ಇರುವ ಕಾರಣ ಕಡೆಗೆ ಭದ್ರಾಕ್ಷಿ ಕಾಳಿನ ಸರವನ್ನಾದರೂ ಧರಿಸಬೇಕು.

ನಿಜವಾಗಿಯೂ ಹೇಳುವುದಾದರೆ ಬಸವ ಧರ್ಮದ ಪ್ರಕಾರ ಅವಧಿಯ ವ್ರತಗಳು ಇರದೆ, ಜೀವನವೇ ಒಂದು ವ್ರತವಾಗಬೇಕು. ಹತ್ತು ದಿನವೋ ಒಂದು ತಿಂಗಳೋ ವ್ರತ ಮಾಡಿ (ಅಯ್ಯಪ್ಪ ಸ್ವಾಮಿ ವ್ರತದಂತೆ) ಕಟ್ಟುನಿಟ್ಟಾದ ಆಚರಣೆ ನಡೆಸಿ, ಪುನಃ ಮೊದಲಿನಂತೆ ಇರುವುದು ನಿಜಕ್ಕೂ ಅರ್ಥರಹಿತ. ಶರಣನ ನಿತ್ಯ ನೇಮಗಳು ಸಹಜವಾಗಿದ್ದು ವರ್ಷ ಪೂರ್ತಿ, ಜೀವಮಾನಪೂರ್ತಿ ಒಂದೇ ರೀತಿ ಇರಬೇಕು. ಆದರೆ ಲಿಂಗಾಯತರು ಧರ್ಮಾಚರಣೆಗೆ ಹೆಚ್ಚಿನ ಸಂಖ್ಯೆಯಲ್ಲಿ ವಿಮುಖರಾಗುತ್ತ ಇಷ್ಟಲಿಂಗಧಾರಣೆ, ವಚನ ಸಾಹಿತ್ಯ ಅಧ್ಯಯನ ಮುಂತಾದುವನ್ನು ತೊರೆಯುತ್ತಲಿರುವುದರಿಂದಲೂ ಮತ್ತು ಅನ್ಯ ದೈವಗಳ ಪೂಜೆ-ವ್ರತಗಳತ್ತ ಒಂದು ಫ್ಯಾಶನ್ ಎಂಬಂತೆ ಆಕರ್ಷಿತರಾಗುತ್ತಿರುವುದರಿಂದಲೂ ಅವರಲ್ಲಿ ವಿಶೇಷ ಆಸಕ್ತಿ ಮೂಡಿಸಲೋಸುಗ ವಿಶಿಷ್ಟ ಅವಧಿಯ ವ್ರತಗಳನ್ನು ನಿರ್ದೇಶಿಸಲಾಗುತ್ತಿದೆ. ಈ ನಿಮಿತ್ತವಾಗಿಯಾದರೂ ಅವರು ಮತ್ತು ಇನ್ನಿತರರು ವಚನ ಸಾಹಿತ್ಯದ ಅಧ್ಯಯನಕ್ಕೆ ತೊಡಗಿದರೆ ಮುಂದೆ ಧರ್ಮಪ್ರಜ್ಞೆಯು ಸ್ಥಾಯಿಯಾಗುತ್ತಾ ಹೋಗುವುದು.

ಶರಣ ಮೇಳದಲ್ಲಿ ಶರಣ ವ್ರತಿಗಳಿಗೆ ವಿಶೇಷ ಸಂದರ್ಶನಾವಕಾಶ

ವಿಶೇಷವಾದ ದರ್ಶನಾವಕಾಶವನ್ನು ಏರ್ಪಡಿಸಿ, ಶರಣ ವ್ರತಿಗಳು ಬಸವ ಧರ್ಮದ ಮಹಾಜಗದ್ಗುರು ಪೀಠಾಧ್ಯಕ್ಷರನ್ನು ಸಂದರ್ಶಿಸಿ, ಶರಣ ವ್ರತಧಾರಣೆಗಾಗಿ ವಿಶೇಷ ಪ್ರಮಾಣ ಪತ್ರವನ್ನು ಪಡೆಯಲು ಅವಕಾಶ ಕಲ್ಪಿಸುವ ಯೋಜನೆಯನ್ನು ಸಿದ್ಧಪಡಿಸಲಾಗಿದೆ. ಪ್ರತಿ ವರ್ಷದ ಜನವರಿಯ

೧೫ನೆಯ ದಿನಾಂಕದಂದು ಈ ಗುರುದರ್ಶನ ಕಾರ್ಯಕ್ರಮವಿರುತ್ತಿದ್ದು ಶರಣ ವ್ರತಿಗಳು ಪೀಠಾಧ್ಯಕ್ಷರಿಂದ ಆಶೀರ್ವಾದ ಮತ್ತು ಪ್ರಮಾಣ ಪತ್ರವನ್ನು ಪಡೆಯಬಹುದಾಗಿರುತ್ತದೆ.

ಆಧಾರ ಗ್ರಂಥಗಳು

ಶರಣ ವ್ರತ ಧಾರಣೆಯ ಕಾಲದಲ್ಲಿ ವಚನ ಸಾಹಿತ್ಯ ಪಠಣಕ್ಕೆ ಮತ್ತು ವಚನ ಲೇಖನ ಕಾರ್ಯಕ್ಕೆ ಬಳಸಬಹುದಾದ ಗ್ರಂಥಗಳೆಂದರೆ :

೧. ಬಸವ ವಚನ ದೀಪ್ತಿ. ಸಂಪಾದಕರು : ಬಸವಾತ್ಮಜೆ

೨. ವಚನ ಸಾಹಿತ್ಯ ಸಂಗ್ರಹ. ಸಂಪಾದಕರು : ಎಸ್. ಎಸ್. ಭೂಸನೂರಮಠ

೩. ಕರ್ನಾಟಕ ಸರ್ಕಾರ ಪ್ರಕಟಿಸಿರುವ ವಚನ ಸಂಪುಟಗಳು.

೪. ಅಥವಾ ಲಭ್ಯವಿರುವ ಆದಿ ಶರಣರ ವಚನ ಕೃತಿಗಳು.

ಶ್ರೀಗುರು ಬಸವಣ್ಣನವರೇ ಆದಿ ಪ್ರಮಥರಾಗಿ ಅವರ ಸಮಕಾಲೀನ ಶರಣರು ಬರೆದಿರುವ ವಚನಗಳು, ನಂತರದಲ್ಲಿ ಶ್ರೀ ತೋಂಟದ ಸಿದ್ಧಲಿಂಗೇಶ್ವರರು, ಷಣ್ಮುಖ ಶಿವಯೋಗಿಗಳು ಬರೆದಿರುವ ವಚನಗಳನ್ನು ಪಠಣ ಮಾಡಲು ಮತ್ತು ಬರೆಯಲು ಸೀಮಿತಗೊಳಿಸಬೇಕಾಗಿದೆ.

ವಚನ ಮಂಟಪ ರಚನೆ

ವಚನ ಮಂಟಪ ಬಳ್ಳಿ ಶುಚಿ ಮೊಗ್ಗೆ ಹೂ ಬಿಡಲು
ರುಚಿ ಜೇನ ಹುಟ್ಟ ಹೊಸಮತವ ಕಟ್ಟಿದರು
ವಚನ ಶಾಸ್ತ್ರಕರು ನಾಡೊಳಗೆ ॥ ನೇ.ಅ. 75 ॥ *ಜನಪದ ಗೀತೆಗಳು*

ಸಾಮಾನ್ಯವಾಗಿ ಪೂಜಾ ಕೋಣೆಗಳು ಚಿಕ್ಕವಿರುತ್ತವೆ. ಆದ್ದರಿಂದ ನಡುಮನೆ ಅಥವಾ ಪಡಶಾಲೆಯಲ್ಲಿ ಒಂದು ಮಂಟಪ ರಚಿಸಿ, ಅದನ್ನು ಅಲಂಕರಿಸಿ ಅದರಲ್ಲಿ ಧರ್ಮಪಿತ ಬಸವಣ್ಣನವರ ಭಾವಚಿತ್ರವಿಟ್ಟು, ಅದರ ಮುಂದೆ ಪಠಣ ಮಾಡುವ ವಚನ ಗ್ರಂಥ ಮತ್ತು ವಚನ ಲೇಖನ ಗ್ರಂಥವನ್ನು ಇಡಬೇಕು. ಎಲ್ಲ ವಿಧಿಗಳನ್ನೂ ಪೂಜೆ-ಪಠಣ-ಲೇಖನ ವಚನ ಮಂಟಪದ ಮುಂದೆಯೇ ಮಾಡಬಹುದು ; ಅಲ್ಲಿ ಏಕಾಂತ ಇರುವುದಿಲ್ಲ ಎಂಬುವ ಶಂಕೆ ಇದ್ದರೆ ಇಷ್ಟಲಿಂಗಾರ್ಚನೆ-ಶಿವಯೋಗ ಸಾಧನೆಯನ್ನು ಪೂಜಾಗೃಹದಲ್ಲಿ ಮಾಡಿ ಬಸವ ಗುರುಪೂಜೆ, ವಚನ ಪಠಣ, ವಚನ ಲೇಖನ ಮುಂತಾದುವನ್ನು ವಚನ ಮಂಟಪದ ಮುಂದೆಯೇ ಮಾಡಬೇಕು. ಈ ಪವಿತ್ರ ವಿಧಿ ಪೂರೈಸಿದ ಮೇಲೆ ಶರಣ ವ್ರತಿಯು ಮನೆಯ ಎಲ್ಲರಿಗೆ ಕರುಣೋದಕ-ಕರುಣಪ್ರಸಾದ ವಿತರಿಸಬೇಕು. ಈ ವ್ರತದ ಅವಧಿಯಲ್ಲಿ ಇನ್ನಿತರರನ್ನು ಜಾತಿಮತಭೇದವಿಲ್ಲದೆ ಆಹ್ವಾನಿಸಿ ಅವರೂ ವಚನ ಪಠಣದಲ್ಲಿ ಪಾಲ್ಗೊಳ್ಳುವಂತೆ ಮಾಡಬೇಕು. ಒಮ್ಮೆ, ಇನ್ನಿತರ ಶರಣ ವ್ರತಿಗಳನ್ನು ಆಹ್ವಾನಿಸಿ, ಸಾಮೂಹಿಕ ಪ್ರಾರ್ಥನೆ-ವಚನ ಪಠಣ ಮಾಡಿ, ಪ್ರಸಾದ ದಾಸೋಹ ಮಾಡಬೇಕು. ವ್ರತದ ಅವಧಿಯಲ್ಲಿ ತಮ್ಮ ಆರ್ಥಿಕ ಶಕ್ತಿಗೆ ಅನುಸಾರವಾಗಿ ಇನ್ನಿತರರನ್ನು ಆಹ್ವಾನಿಸಿ ಪ್ರಸಾದ ದಾಸೋಹ ಮಾಡಿಸಬಹುದು. ವಚನ ಮಂಟಪದ ಬಳಿ ಒಂದು ಕಾಣಿಕೆ ಪೆಟ್ಟಿಗೆ (ಹುಂಡಿ) ಇಟ್ಟಿದ್ದು ಬಂದ ಜನರಿಗೆ ಧನ ಸಹಾಯ ಮಾಡಲು ಪ್ರೇರಣೆ ನೀಡಿ ಸಂಗ್ರಹವಾದ ಹಣವನ್ನು ಶರಣ ಮೇಳದ ದಾಸೋಹಕ್ಕಾಗಿ ತಂದು ಒಪ್ಪಿಸಬಹುದು. ಶರಣ ಮೇಳದಿಂದ ವಾಪಸ್ಸಾದ ಮೇಲೆ ವಚನ ಮಂಟಪವನ್ನು ಬಿಚ್ಚಬೇಕು.

ಮಾಘ ಪೌರ್ಣಿಮೆ ಸಂದರ್ಶನ

ಶರಣ ವ್ರತ ಕೈಗೊಂಡು ಸಹ ತೀರಾ ಅನಿವಾರ್ಯವಾದ ಕಾರಣಕ್ಕೆ ಜನವರಿ ೧೪ರಂದು ಶರಣ ಮೇಳದಲ್ಲಿ ಭಾಗಿಗಳಾಗಲು ಆಗದೆ ಇದ್ದರೆ ಮಾಘ ಪೌರ್ಣಿಮೆಯಂದು (ಚನ್ನ ಹುಣ್ಣಿಮೆ) ಕೂಡಲ ಸಂಗಮಕ್ಕೆ ಬಂದು ಗಣಲಿಂಗ ದರ್ಶನ ಪಡೆದು ವ್ರತವನ್ನು ಪೂರ್ಣಗೊಳಿಸಬಹುದು.

ಕಾಯಕ - ದಾಸೋಹ - ಪ್ರಸಾದ

ಶರಣರು ಬೋಧಿಸಲ್ಪಟ್ಟ ಪಂಚಾಚಾರಗಳಲ್ಲಿ ಒಂದಾದ ಸದಾಚಾರ ಅಥವಾ ಅರ್ಪಣಾ ತತ್ತ್ವದ ಮೂರು ಅಂಗಗಳು ಕಾಯಕ - ದಾಸೋಹ - ಪ್ರಸಾದ. ಇವು ಮೂರನ್ನೂ ಶರಣ ವ್ರತಿಗಳು ಶುದ್ಧವಾಗಿ ಪಾಲಿಸುತ್ತ -ತಮ್ಮ ಆರ್ಥಿಕ ಸ್ಥಿತಿಯು ಅನುಮೋದಿಸುವಷ್ಟು ಧನ ದಾಸೋಹವನ್ನು ಮಾಡಬಹುದು. ಧರ್ಮಕ್ಷೇತ್ರ ಕೂಡಲ ಸಂಗಮದಲ್ಲಿ ನಡೆಯುವ ಶರಣ ಮೇಳಕ್ಕೆ ತಮ್ಮ ಸ್ವಂತ ಕಾಣಿಕೆಯನ್ನು ಮಾತ್ರವಲ್ಲದೆ, ಶರಣ ಮೇಳದ ಮಹತ್ವ ತಿಳಿಸಿ ಇನ್ನಿತರರಿಂದಲೂ ಕಾಣಿಕೆ ಸಂಗ್ರಹಿಸಿ ಕೊಡುವ ಪವಿತ್ರ ಕಾರ್ಯವನ್ನು ಶರಣ ವ್ರತಿಗಳು ಕೈಗೊಳ್ಳಬೇಕೆಂದು ನಿರೀಕ್ಷಿಸುವೆವು. ಹೆಚ್ಚಿನ ಸಂಖ್ಯೆಯಲ್ಲಿ ಶರಣ ವ್ರತಿಗಳು 2001 ಇಸವಿಯ ಶರಣ ಮೇಳದಲ್ಲಿ ಭಾಗಿಗಳಾಗಬೇಕೆಂದು ಆಶಿಸುತ್ತೇವೆ.

-ಬಸವಾತ್ಮಜೆ

ವಚನ ಲೇಖನ ವ್ರತ

ವಚನ ಸಾಹಿತ್ಯವು ಕೇವಲ ಸಾಹಿತ್ಯ ಮಾತ್ರವಲ್ಲ, ಒಂದು ಧರ್ಮ ಶಾಸ್ತ್ರ. ಮಾನವ ಕುಲಕ್ಕೆ ಬೇಕಾದ ಅಮೂಲ್ಯ ವಿಚಾರಗಳನ್ನು ಪ್ರತಿಪಾದಿಸುವುದಲ್ಲದೆ ಲಿಂಗಾಯತ ಧರ್ಮಾನುಯಾಯಿಗಳಿಗೆ ಧಾರ್ಮಿಕ ಕೈಪಿಡಿ, ಇಂಥ ವಚನ ಸಾಹಿತ್ಯದ ಪಾರಾಯಣ, ಪಠಣ ಮತ್ತು ಬರವಣಿಗೆಯನ್ನು ಅಳವಡಿಸಿಕೊಳ್ಳುವುದು ಉತ್ತಮ ಅಭ್ಯಾಸ.

ಧಾರ್ಮಿಕ ವಿಧಿಗಳನ್ನು ಕೇವಲ ಯಾಂತ್ರಿಕವಾಗಿ ಮಾಡಿದರೆ ಸಾಲದು ಅಥವಾ ಭಾಕ್ತಿಕ ಉತ್ಕಟತೆಯಿಂದ ಮಾಡಿದರೆ ಸಾಲದು, ಧಾರ್ಮಿಕ ವಿಧಿಯ ಜೊತೆಗೆ ಸುಜ್ಞಾನ ಸಂಪಾದನೆಯೂ ಆಗಬೇಕು. ಈ ಹಿನ್ನೆಲೆಯಲ್ಲಿ ವಚನಗಳ ಬರಹವನ್ನು ಮಾಡಲು ಪ್ರಸ್ತುತ ಸೂಚನೆ ನೀಡಲಾಗುತ್ತಿದೆ.

ಫುಲ್‌ಸ್ಕೇಪ್ ಸೈಜಿನ ಲೆಡ್ಜರ್ ಪುಸ್ತಕ ತೆಗೆದುಕೊಳ್ಳಬೇಕು. ಅದು ಅಡ್ಡಗೆರೆ ಉಳ್ಳದ್ದಾದರೂ ಇರಬಹುದು, ಪೂರ್ಣ ಬಿಳಿಯದೂ ಇರಬಹುದು. ಅಥವಾ ವಚನಗಳ ಸಂಖ್ಯೆ ನಿಗದಿತವಾಗಿ ಇಲ್ಲದಿರುವುದರಿಂದ ಬಿಡಿಬಿಡಿ ಹಾಳೆಗಳನ್ನೂ ತೆಗೆದುಕೊಳ್ಳಬಹುದು. ಮೊದಲ ಪುಟದಲ್ಲಿ ಮೇಲೆ ಓಂ ಶ್ರೀ ಗುರುಬಸವಲಿಂಗಾಯ ನಮಃ ಬರೆದು, ಅದರ ಕೆಳಗೆ 86666 ಬರೆಯಬೇಕು. ಅದರ ಕೆಳಗೆ ಷಟ್ಕೋನ ಸಹಿತ 'ಬಸವ-ಲಿಂಗ' ಮುದ್ರೆಯನ್ನು ಬರೆಯಬೇಕು. ಅದರ ಕೆಳಗೆ ಬರೆಯುವವರ ಹೆಸರು,ಪೂರ್ಣವಿಳಾಸ, ಬರೆಯಲು ಆರಂಭಿಸಿದ ದಿನಾಂಕ ಇವನ್ನು ಬರೆಯಬೇಕು. ಶರಣ ಮೇಳಕ್ಕೆ ಹೊರಡುವ ದಿನಾಂಕದವರೆಗೂ ವಚನಗಳನ್ನು ಬರೆಯಬಹುದು. ಬಿಡಿಬಿಡಿ ಹಾಳೆಗಳಲ್ಲಿ ಬರೆದವರು, ಎಲ್ಲಾ ಸೇರಿಸಿ, ಒಟ್ಟಾಗಿ ಬೈಂಡ್ ಮಾಡಿಸಿ ತರಬಹುದು. ಇಲ್ಲವೇ ಎಲ್ಲಾ ಹಾಳೆಗಳನ್ನು ಪೇರಿಸಿ, ದಾರದಲ್ಲಿ ಕಟ್ಟಬಹುದು.

ವಚನಗಳನ್ನು ಪ್ರತಿನಿತ್ಯ ಎಷ್ಟು ಸಾಧ್ಯವೋ ಅಷ್ಟನ್ನು ಅಂದವಾಗಿ, ಸ್ಪಷ್ಟವಾಗಿ (ಅಥವಾ ತಮಗೆ ಬರುವಂತೆ) ಬರೆದು ಇಡಬೇಕು. ಬರೆಯುವಾಗ ಸಂಖ್ಯೆಗೆ ಗಮನ ಕೊಡದೆ ಅರ್ಥವನ್ನು ಮನನ ಮಾಡುತ್ತ ಬರೆಯಬೇಕು.

ಹೀಗೆ ಬರೆದ ಒಟ್ಟು ವಚನಗಳು ಎಷ್ಟು ಎಂಬುದನ್ನು ಬರೆದು ಮುಗಿಸಿದ ದಿವಸ ಮೇಲಿನ ಹಾಳೆಯಲ್ಲಿ ಬರೆದು ಇಡಬೇಕು. ಇಂಥ ಬರಹವನ್ನು ಶರಣ ಮೇಳಕ್ಕೆ ಬರುವಾಗ ತಂದು ಗಣಲಿಂಗ ಮಂಟಪದ ಪಕ್ಕದಲ್ಲಿರುವ ವಚನ ಮಂಟಪದಲ್ಲಿ ಒಪ್ಪಿಸಿ, ಒಂದು ಪ್ರಮಾಣ ಪತ್ರ (certificate) ಪಡೆಯಬೇಕು. ಪ್ರತಿ ಶರಣ ಮೇಳಕ್ಕೆ ಹೀಗೆ ಒಂದು ವಚನ ಬರಹವನ್ನು ತಂದುಕೊಡಬೇಕು. ಶರಣ ಮೇಳ ಮುಗಿಸಿ ಹೋದ ಮೇಲೆ ಮುಂದಿನ ವರ್ಷದ ಬರಹ ಆರಂಭಿಸಬೇಕು. ಈಗ ಈ ಕಲ್ಯಾಣ ಕಿರಣ ಸಂಚಿಕೆ ತಲ್ಪಿದ ಮೇಲೆ ವಚನ ಲೇಖನ ವ್ರತವನ್ನು ಆರಂಭಿಸಬಹುದು.

ವಿಶೇಷ ಸೂಚನೆ :

೧. ಸಮಯವು ಸಿಕ್ಕಾಗಲೆಲ್ಲ ಬರೆಯುತ್ತ ಹೋಗಬಹುದು.
೨. ವಚನ ಲೇಖನ ಗ್ರಂಥ ತಂದುಕೊಟ್ಟವರಿಗೆಲ್ಲ ಪ್ರಮಾಣಪತ್ರವನ್ನು ನೀಡಲಾಗುವುದು.
೩. ಕನ್ನಡ, ಹಿಂದಿ, ಮರಾಠಿ, ತಮಿಳು, ತೆಲುಗು, ಇಂಗ್ಲೀಷ್ ಯಾವುದೇ ಭಾಷೆಗಳಲ್ಲಿ ಬರೆಯಬಹುದು.

ಆಧಾರ ಗ್ರಂಥಗಳು :

೧. ೧೨ನೆಯ ಶತಮಾನದ ಆದಿ ಶರಣರ ವಚನಗಳನ್ನು ಬರೆಯಬೇಕು. ನಂತರ ಆಗಿ ಹೋಗಿರುವ ಶ್ರೀ ತೋಂಟದ ಸಿದ್ದಲಿಂಗೇಶ್ವರರು, ಶ್ರೀ ಷಣ್ಮುಖ ಶಿವಯೋಗಿಗಳ ವಚನಗಳಿಗೂ ಆದ್ಯತೆಯುಂಟು.
೨. ಬಸವ ವಚನ ದೀಪ್ತಿ, ಕರ್ನಾಟಕ ಸರ್ಕಾರದ 15 ಸಂಪುಟಗಳ ಗ್ರಂಥಗಳು, ಲಿ॥ ಭೂಸನೂರುಮಠರು ಸಂಪಾದಿಸಿದ "ವಚನ ಸಾಹಿತ್ಯ ಸಂಗ್ರಹ" ಬಳಸಿಕೊಳ್ಳಬಹುದು.
೩. ಶರಣ ವ್ರತ ಸ್ವೀಕಾರ ಮಾಡಿಯೂ ಬರೆಯಬಹುದು ಅಥವಾ ಹಾಗೆಯೂ ಬರೆಯಬಹುದು.
೪. ವಚನ ಲೇಖನಕ್ಕೆ ವಯಸ್ಸು ಮತ್ತು ಶಿಕ್ಷಣಾರ್ಹತೆಯ ಮಿತಿ ಇಲ್ಲ. ಬರೆಯಲು ಸಮರ್ಥರಿರುವ ಮಕ್ಕಳಿಂದ ಮುದುಕರವರೆಗೆ ಎಲ್ಲ ವಯಸ್ಸಿನವರು ಬರೆಯಬಹುದು. ಸೂಕ್ತವಾಗಿ ವರ್ಗೀಕರಿಸಿ ಬಹುಮಾನ ನೀಡಲಾಗುವುದು.
೫. ಜನವರಿ 11ರಂದು ವಚನ ಮಂಟಪದಲ್ಲಿ ವಚನ ಲೇಖನ ಗ್ರಂಥವನ್ನು ಅರ್ಪಿಸುವಾಗ ಅಲ್ಲಿ ಒಂದು ಅರ್ಜಿ ಪತ್ರವು ಲಭ್ಯವಿರುತ್ತದೆ. 10 ರೂ (ಹನ್ನೊಂದು) ಕೊಟ್ಟು ಅದನ್ನು ಪಡೆದು, ಗ್ರಂಥದೊಡನೆ ಅರ್ಜಿಪತ್ರವನ್ನು ವಿವರಗಳೊಡನೆ ಸಲ್ಲಿಸಬೇಕು.
೬. ಆಶೀರ್ವಾದಪೂರ್ವಕವಾಗಿ ಆ ವಚನ ಲೇಖನ ಪುಸ್ತಕವನ್ನು ವಾಪಸ್ಸು ಪಡೆಯಬೇಕು ಎನ್ನುವವರಿಗೆ ಬಸವ ಧರ್ಮ ಪೀಠದ ಮುದ್ರೆ ಒತ್ತಿ ವಾಪಸ್ಸು ನೀಡಲಾಗುವುದು.

ವಚನ ಲೇಖನ ವ್ರತವು ಅತ್ಯಂತ ಪವಿತ್ರವಾದುದು. ಇದು ಭಕ್ತಿಪ್ರೇರಕ, ಜ್ಞಾನ ಸಂಪಾದನ ಸಾಧನ ಮಾತ್ರವಲ್ಲ, ಸಮಯವನ್ನು ಸಾರ್ಥಕಪಡಿಸಿಕೊಳ್ಳಲು ಉತ್ತಮ ಸಾಧನ. ಬಹುಮಾನ ಪಡೆದರಷ್ಟೇ ಸಾರ್ಥಕವಲ್ಲ, ಬರವಣಿಗೆಯೇ ಮಹಾನ್ ತಪಸ್ಸಾಗುವುದು ಎಂಬುದನ್ನು ಶರಣ ಬಂಧುಗಳು ಲಕ್ಷ್ಯದಲ್ಲಿಡಬೇಕು. ಅರ್ಧವಾರ್ಷಿಕ ಪರೀಕ್ಷೆಗಳು ಮುಗಿದಿದ್ದು, ವಾರ್ಷಿಕ ಪರೀಕ್ಷೆಗಳಿಗೆ ತೀವ್ರ ಅಭ್ಯಾಸವು ಜನವರಿಯ ನಂತರ ಪ್ರಾರಂಭವಾಗುವುದು. ಆದ್ದರಿಂದ ನವೆಂಬರ್-ಡಿಸೆಂಬರ್ ತಿಂಗಳಿನಲ್ಲಿ ವಚನ ಲೇಖನ ಮಾಡಲು ವಿದ್ಯಾರ್ಥಿಗಳು ಸಹ ಹೆಚ್ಚಿನ ಆಸಕ್ತಿ ವಹಿಸಬೇಕು.

ಜನವರಿ 11ರಂದು ಶರಣ ಮೇಳಕ್ಕೆ ಬರುತ್ತಿದ್ದಂತೆಯೇ ವಚನ ಲೇಖನ ಗ್ರಂಥವನ್ನು ಅರ್ಪಿಸಿದರೆ, ಪ್ರಮಾಣಪತ್ರ-ಬಹುಮಾನ ನೀಡಲು ಅನುಕೂಲವಾಗುತ್ತದೆ ಎಂಬುದನ್ನು ಶರಣ ಬಂಧುಗಳ ಗಮನಕ್ಕೆ ತಂದು, ಈ ಬಾರಿ ಹೆಚ್ಚಿನ ಜನರು ವಚನ ಲೇಖನ ಗ್ರಂಥಗಳನ್ನು ತರುತ್ತಾರೆಂದು ನಿರೀಕ್ಷಿಸುತ್ತೇವೆ. ಶುಭ ಹಾರೈಕೆಗಳೊಡನೆ,

19-10-2000

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ

ವಚನ ಲೇಖನ ವ್ರತಕ್ಕಾಗಿ ವಿಶೇಷ ಪುಸ್ತಕ

ಶರಣ ಬಂಧುಗಳೇ, ವಚನ ಲೇಖನ ವ್ರತಕ್ಕಾಗಿ ವಿಶೇಷ ಪುಸ್ತಕವೊಂದನ್ನು ಸಿದ್ಧಪಡಿಸಲಾಗಿದೆ. ಪ್ರಾರಂಭದ [illegible]ಲ್ಲಿ ಕಡ್ಡಾಯವಾಗಿ ಬರೆಯಬೇಕಾದ ಕೆಲವು ಮಂತ್ರ, ಸ್ತೋತ್ರ, ತತ್ತ್ವವಾಕ್ಯಗಳನ್ನು ಮುದ್ರಿ[illegible] ಅನುಕರಿಸಿ (ಕಾಪಿ ರೈಟಿಂಗ್) ಬರೆಯಲು ವ್ಯವಸ್ಥೆ ಮಾಡಲಾಗಿದೆ. ಮೊದಲ ಪುಸ್ತಕವನ್ನು ಬಸವ ಧರ್ಮ ಪೀ[illegible]ಂದ ಆಶೀರ್ವಾದ ಪೂರ್ವಕವಾಗಿ ತರಿಸಿಕೊಂಡು ಬರೆದು ಅದು ತುಂಬಿದ ನಂತರ ಬೇರೆ ನೋಟ್ ಬುಕ್‌ಗಳಲ್ಲಿ ಬರೆಯಬಹುದು. ವಚ[illegible] ಲೇಖನ ವ್ರತದ ಪುಸ್ತಕದ ಬೆಲೆ 45 ರೂ. ಅಂಚೆ ವೆಚ್ಚಕ್ಕೆ 10 ರೂ. ಸೇರಿಸಿ 55 ರೂ.ಗಳನ್ನು ಮನಿಯಾರ್ಡರ್ ಮೂಲ[illegible] ಕೂಡಲಸಂಗಮ ಅಥವಾ ಬೆಂಗಳೂರು ವಿಳಾಸಕ್ಕೆ ಕಳಿಸಬಹುದು.




ಧರ್ಮಗುರು ಬಸವಣ್ಣ

॥ ಓಂ ಶ್ರೀ ಗುರುಬಸವಲಿಂಗಾಯ ನಮಃ ॥

86666

ಕೂಡಲ ಸಂಗಮ ಸುಕ್ಷೇತ್ರದಲ್ಲಿ
ಬಸವ ಧರ್ಮ ಸಂಸ್ಥಾಪನಾ ದಿನದ
ಅಂಗವಾಗಿ ಹದಿನಾಲ್ಕನೆಯ

ಶರಣ ಮೇಳ



ಗಣಧ್ವಜ

2001ರ ಜನವರಿ 11, 12, 13, 14 ಮತ್ತು 15 ರಂದು

ಶರಣ ಬಂಧುಗಳೇ,

ಮಹಾಮಾನವತಾವಾದಿ, ಲಿಂಗಾಯತ ಧರ್ಮ ಸಂಸ್ಥಾಪಕ, ಧರ್ಮಗುರು ಬಸವಣ್ಣನವರ ಕಾರಣಿಕತ್ವ ಮತ್ತು ಸಂದೇಶಗಳಲ್ಲಿ ನಂಬಿಕೆ ಇಟ್ಟು ನಡೆಯುವ ಬಸವ ಭಕ್ತರು, ಬಸವ ಧರ್ಮೀಯರಾದ ಲಿಂಗಾಯತರು ಮತ್ತು ಬಸವ ತತ್ತ್ವಾಭಿಮಾನಿಗಳೆಲ್ಲರೂ ವರ್ಷಕ್ಕೆ ಒಮ್ಮೆಯಾದರೂ ಒಂದು ಸ್ಥಳದಲ್ಲಿ ಸಮಾವೇಶವಾಗುವುದು ಅತ್ಯಂತ ಅವಶ್ಯಕ. ಇದು ಸಮಾನತ್ವ ಮತ್ತು ಸಹೋದರತ್ವ ಬೆಳೆಸಲು ಸಹಕಾರಿಯಾಗುವುದು ಎಂಬ ಉದ್ದೇಶದಿಂದ ಆದಿ ಶರಣರ ಸಂಕಲ್ಪದಂತೆ ಶರಣ ಮೇಳವನ್ನು ನಡೆಸಲಾಗುತ್ತಿದೆ. ಧರ್ಮಕರ್ತ ಬಸವಣ್ಣನವರ ವಿದ್ಯಾಭೂಮಿ, ತಪೋಸ್ಥಾನ, ಐಕ್ಯಕ್ಷೇತ್ರ ಕೂಡಲ ಸಂಗಮವನ್ನು ಲಿಂಗಾಯತ (ಬಸವ) ಧರ್ಮೀಯರ ಧರ್ಮಕ್ಷೇತ್ರ ಎಂದು ಗುರುತಿಸಿಕೊಂಡು 1988ರ ಜನವರಿ 14, 15 ಮತ್ತು 16ರಂದು ಪ್ರಥಮ ಚಾರಿತ್ರಿಕ ಶರಣ ಮೇಳವನ್ನು ನಡೆಸಲಾಯಿತು. ಮೊಟ್ಟ ಮೊದಲನೆಯ ಚಾರಿತ್ರಿಕ ಶರಣ ಮೇಳವು ಎರಡೂವರೆ ಲಕ್ಷಕ್ಕೂ ಮಿಕ್ಕಿದ ಜನ ಸಮೂಹವನ್ನು ಆಕರ್ಷಿಸಿತು.

ಇಂತಹ ಶರಣ ಮೇಳವು ಪ್ರತಿವರ್ಷವೂ ಬಸವ ಧರ್ಮ ಸಂಸ್ಥಾಪನಾ ದಿನದ ಅಂಗವಾಗಿ ನಡೆಯುತ್ತಲಿದ್ದು ಹದಿನಾಲ್ಕನೆಯ ಶರಣ ಮೇಳವು 2001ರ ಜನವರಿ 11, 12, 13, 14 ಮತ್ತು 15ರಂದು ನಡೆಯುವುದು. ಸಾಮೂಹಿಕ ಪ್ರಾರ್ಥನೆ, ಸಾಮೂಹಿಕ ಲಿಂಗಪೂಜೆ, ಗಣಲಿಂಗ ದರ್ಶನ ಶರಣ ಮೇಳದ ಪ್ರಮುಖ ಧಾರ್ಮಿಕ ವಿಧಿಗಳು. ಜನವರಿ ೧೪ರಂದು ಬೆಳಗ್ಗೆ 10 ರಿಂದ ಧ್ವಜಾರೋಹಣ, ಪಥ ಸಂಚಲನ, ಸಮುದಾಯ ಪ್ರಾರ್ಥನೆ ಇರುತ್ತದೆ. ಸಂಜೆ 7 ಗಂಟೆಗೆ ಸಾಮೂಹಿಕ ಇಷ್ಟಲಿಂಗಾರ್ಚನೆ ಇರುತ್ತದೆ. ಇವುಗಳಲ್ಲಿ ಶರಣ ವ್ರತಿಗಳು ಭಾಗವಹಿಸುವುದು ಕಡ್ಡಾಯವಾಗಿರುತ್ತದೆ. 40, 30 ಮತ್ತು 10 ದಿವಸಗಳ 'ಶರಣ ವ್ರತ'ವನ್ನು ಅವರವರ ಸಮಯಾವಕಾಶಕ್ಕೆ ತಕ್ಕಂತೆ ಸ್ವೀಕರಿಸಿ, ಆಚರಿಸಿ ಯಾರು ಬೇಕಾದರೂ ಶರಣ ಮೇಳದಲ್ಲಿ ಭಾಗಿಗಳಾಗಬಹುದು. ಚಿಂತನ ಗೋಷ್ಠಿ, ಉಪನ್ಯಾಸ, ಧಾರ್ಮಿಕ ರಸಪ್ರಶ್ನೆ ಮುಂತಾದ ಕಾರ್ಯಕ್ರಮಗಳಿಂದ ಕೂಡಿದ ಶರಣ ಮೇಳವು ಉತ್ತಮ ಜ್ಞಾನ ದಾಸೋಹದೊಡನೆ, ಅನ್ನದಾಸೋಹವನ್ನು ಅಚ್ಚುಕಟ್ಟಾಗಿ ಮಾಡುತ್ತದೆ. ದಿ. 11 ಮತ್ತು 12ರಂದು ಧರ್ಮಚಿಂತನ ಗೋಷ್ಠಿ ನಡೆಯುತ್ತಿದ್ದು ಸಮಾಜ-ಧರ್ಮಗಳಿಗೆ ಸಂಬಂಧಪಟ್ಟಂತೆ ಮುಕ್ತ ಚರ್ಚೆಗೆ ಅವಕಾಶವಿರುತ್ತದೆ. ಹೆಚ್ಚಿನ ಸಂಖ್ಯೆಯಲ್ಲಿ ಬಂದು ಪಾಲ್ಗೊಳ್ಳಿರಿ.

ಶರಣ ಮೇಳಕ್ಕೆ ಧನ ಸಹಾಯ

ಶರಣ ಮೇಳವು ಬಸವ ಧರ್ಮೀಯರ ಜಾಗತಿಕ ಉತ್ಸವವಾಗಿರುವುದರಿಂದ ವರ್ಷದಿಂದ ವರ್ಷಕ್ಕೆ ವಿಸ್ತಾರಗೊಳ್ಳುತ್ತಿದೆ. ಕರ್ನಾಟಕ ರಾಜ್ಯದ ವಿವಿಧ ಜಿಲ್ಲೆಗಳಿಂದ ಮಾತ್ರವಲ್ಲದೆ, ಹೊರರಾಜ್ಯಗಳಿಂದಲೂ ಶರಣ ವ್ರತಿಗಳು ಆಗಮಿಸುವರು. ಜನವರಿ 10ನೆಯ ದಿನಾಂಕ ರಾತ್ರಿಯಿಂದ 15ನೆಯ ದಿನಾಂಕದ ರಾತ್ರಿಯವರೆಗೆ

ಭಾಗಿಗಳಾಗುವ ಎಲ್ಲರಿಗೂ ಪ್ರಸಾದದ ವ್ಯವಸ್ಥೆ ಮಾಡಲಾಗುವುದು. ಬೆಳಗಿನ ಉಪಾಹಾರ, ಮಧ್ಯಾಹ್ನದ ಊಟ ಮತ್ತು ರಾತ್ರಿಯ ಊಟಗಳನ್ನು ವ್ಯವಸ್ಥೆ ಮಾಡಲಾಗುತ್ತದೆ. ಭವ್ಯವಾದ ಸಭಾ ಮಂಟಪ, ಶಾಮಿಯಾನಾ ಕೊಠಡಿಗಳು, ವಿಶಾಲವಾದ ಪ್ರಸಾದ (ಊಟ) ಮಂಟಪ ಮುಂತಾದವುಗಳ ವ್ಯವಸ್ಥೆ ಮಾಡಲು ಅಪಾರವಾದ ಹಣದ ಆವಶ್ಯಕತೆ ಇರುತ್ತದೆ. ದಾನಿಗಳು ಕೆಳಗಿನಂತೆ ಧನ ಸಹಾಯ ಮಾಡಬಹುದು.

1. ಮಹಾಪೋಷಕರು	: 5000 ರೂ. ಮತ್ತು ಮೇಲೆ ಕೊಟ್ಟವರು.
4. ಹಿತೈಷಿಗಳು	: 500 ರೂ
2. ಪೋಷಕರು	: 2000 ರೂ. ಮತ್ತು ಮೇಲೆ ಕೊಟ್ಟವರು.
5. ಸ್ವಾಗತ ಸಮಿತಿ ಸದಸ್ಯತ್ವ	: 250 ರೂ
3. ದಾನಿಗಳು	: 1000 ರೂ. ಮತ್ತು ಮೇಲೆ ಕೊಟ್ಟವರು.
6. ಪ್ರತಿನಿಧಿ ಶುಲ್ಕ	: 125 ರೂ

ಅನ್ನ ದಾಸೋಹಕ್ಕಾಗಿ ಎಷ್ಟಾದರೂ ಭಕ್ತಿಪೂರ್ವಕ ಕಾಣಿಕೆಯನ್ನು ಕೊಡಬಹುದು.

ಶರಣ ಮೇಳಕ್ಕೆ ತಮ್ಮ ಕೊಡುಗೆ ನಿರಂತರವಾಗಿ ಇರಲಿ ಎಂಬ ಇಷ್ಟವಿದ್ದವರು 5000 / 10000 ರೂಪಾಯಿಗಳ ಪುದುವಟ್ಟು (F.D.) ಇಡಲು ದೇಣಿಗೆ ನೀಡಿದರೆ, ಈ ಪುದುವಟ್ಟಿನ ಬಡ್ಡಿಯ ಹಣವನ್ನು ಶರಣ ಮೇಳದ ದಾಸೋಹಕ್ಕೆ ವಿನಿಯೋಗಿಸಲಾಗುವುದು.

ಜನರು ತಮ್ಮ ಕೈಲಾದಷ್ಟು ದೇಣಿಗೆ ಸಲ್ಲಿಸಬಹುದು. ದವಸ-ಧಾನ್ಯಗಳ ರೂಪದಲ್ಲಿ ಕೊಡಬಹುದು. ಬ್ಯಾಂಕ್ ಡ್ರಾಫ್ಟ್, ಚೆಕ್ಕುಗಳನ್ನು ''ಶರಣ ಮೇಳ ಉತ್ಸವ ಸಮಿತಿ, ಕೂಡಲಸಂಗಮ''ದ ಹೆಸರಿನಲ್ಲಾಗಲೀ, (ಕೂಡಲ ಸಂಗಮಕ್ಕೆ ಡಿ.ಡಿ. ತೆಗೆಸುವವರು ಕೇವಲ State Bank of India ದ Koodala Sangama ಶಾಖೆಗೆ ಡಿ.ಡಿ. ತೆಗೆಸಬೇಕು.) ಬೆಂಗಳೂರಿನ ಯಾವುದೇ ಬ್ಯಾಂಕ್ ಶಾಖೆಯ ಡಿ.ಡಿ.ಯನ್ನಾಗಲೀ ತೆಗೆಸಿ ಕಳಿಸಬಹುದು. ಎರಡೂ ವಿಳಾಸಗಳನ್ನು ಕೆಳಗೆ ಕೊಡಲಾಗಿದೆ.

ಮುಸಲ್ಮಾನ್ ಧರ್ಮೀಯರಿಗೆ ಮೆಕ್ಕಾ, ಸಿಖ್ಖರಿಗೆ ಅಮೃತಸರ, ಬೌದ್ಧರಿಗೆ ಬುದ್ಧಗಯೆ ಧರ್ಮಕ್ಷೇತ್ರಗಳಾಗಿರುವಂತೆ ಲಿಂಗಾಯತ ಧರ್ಮಾನುಯಾಯಿಗಳಿಗೆ ವಿಶ್ವಗುರು ಬಸವಣ್ಣನವರ ಐಕ್ಯಸ್ಥಾನ ಕೂಡಲ ಸಂಗಮವೇ ಧರ್ಮಕ್ಷೇತ್ರ. ತನ್ನ ಜೀವಮಾನದಲ್ಲಿ ಆಯುಷ್ಯ, ಆರೋಗ್ಯ ಇರುವವರೆಗೆ ಎಷ್ಟು ಸಲ ಒಬ್ಬ ವ್ಯಕ್ತಿ ಶರಣ ಮೇಳದಲ್ಲಿ ಭಾಗಿಯಾಗುತ್ತಾನೋ ಆತ ನಿಜಕ್ಕೂ ಹೆಚ್ಚು ಪುಣ್ಯವಂತ. ಪ್ರತಿಯೊಬ್ಬ ಬಸವ ಧರ್ಮಾನುಯಾಯಿಯು ತನ್ನ ಜೀವಮಾನದಲ್ಲಿ ಎಷ್ಟೇ ಅನಾನುಕೂಲತೆ ಇದ್ದರೂ ಒಮ್ಮೆಯಾದರೂ ಶರಣ ಮೇಳದ (ಜನವರಿ 14ರಂದು ನಡೆಯುವ) ಸಮುದಾಯ ಪ್ರಾರ್ಥನೆಯಲ್ಲಿ ಭಾಗಿಯಾಗಿ, ಗಣಲಿಂಗ ದರ್ಶನ ಪಡೆದು ತನ್ನ ಧಾರ್ಮಿಕ ಅನುಯಾಯಿತ್ವವನ್ನು ಸ್ಥಿರೀಕರಿಸದೇ ಇದ್ದರೆ ಅವನು ಪ್ರಾಮಾಣಿಕ ಲಿಂಗಾಯತನಾಗನು. ಇಂತಹ ಪವಿತ್ರ ಶರಣ ಮೇಳಕ್ಕೆ ಸಹೋದರ ಭಾವನೆಯಿಂದ ಎಲ್ಲರೂ ಲಕ್ಷಗಟ್ಟಳೆ ಸಂಖ್ಯೆಯಲ್ಲಿ ಬನ್ನಿರಿ.

ಶರಣರ ಬರವೆಮಗೆ ಪ್ರಾಣ ಜೀವಾಳ

ಬೆಂಗಳೂರು ವಿಳಾಸ :
ಬಸವ ಮಂಟಪ, 2035
2ನೇ ಬ್ಲಾಕ್, 20ನೇ ಮುಖ್ಯರಸ್ತೆ
ರಾಜಾಜಿನಗರ, ಬೆಂಗಳೂರು-560010
ದೂರವಾಣಿ : 080-3325335, 3322790

ಪೂಜ್ಯ ಶ್ರೀ ಮಹಾಜಗದ್ಗುರು ಮಾತೆ ಮಹಾದೇವಿ
ಕಾರ್ಯಾಧ್ಯಕ್ಷೆ, ಶರಣ ಮೇಳ ಉತ್ಸವ ಸಮಿತಿ
ಕೂಡಲ ಸಂಗಮ-587115
ತಾ-ಹುನಗುಂದ, ಜಿಲ್ಲೆ-ಬಾಗಲಕೋಟ
ದೂರವಾಣಿ : 08351-58038, 58007, 58140

ಧರ್ಮಪಿತರ ಕರೆಯೋಲೆ

ಮಮತೆಯ ಮಕ್ಕಳೇ,

ಸೃಷ್ಟಿಕರ್ತ ಲಿಂಗದೇವನ ಸ್ಮರಣೆಯೊಡನೆ ನಿಮಗೆಲ್ಲ ಶುಭಹಾರೈಕೆಗಳು. ನೀವುಗಳೆಲ್ಲ ನನ್ನ ಮಹಾಮನೆಯ ಮಕ್ಕಳು. ಲಿಂಗದೇವನ ಪ್ರೇರಣೆಯಂತೆ ನಾನು ಮರ್ತ್ಯದಲ್ಲಿ ಒಂದು ಮಹಾಮನೆಯನ್ನು ಕಟ್ಟಿದೆ. ಇದು ಕೇವಲ ಕಲ್ಲು-ಮಣ್ಣು-ಇಟ್ಟಿಗೆ-ಕಟ್ಟಿಗೆಗಳ ಭೌತಿಕ ಮನೆಯಲ್ಲ; ಒಂದು ತತ್ತ್ವ ಸಂಹಿತೆಯನ್ನು ಒಳಗೊಂಡ ಧರ್ಮದ ಮಹಾಮನೆ. ಈ ಮಹಾಮನೆಯನ್ನು ನಾನು ಇದ್ದ ಕಾಲದಲ್ಲಿಯೇ ನೀವು ಪ್ರವೇಶಿಸಿರಬಹುದು, ನಂತರದ ಶತಮಾನದಲ್ಲಿ ಪ್ರವೇಶಿಸಿರಬಹುದು. ಇತ್ತೀಚೆಗೆ ಬಂದಿರಬಹುದು, ಇಂದೇ ನಂಬಿಕೆಯ ಮೂಲಕ, ದೀಕ್ಷೆಯ ಮೂಲಕ ಬಂದಿರಬಹುದು. ಎಂದೇ ಬಂದಿರಲಿ ನೀವು ನನ್ನವರು. ನನ್ನವರೆಲ್ಲರೂ ಜಾತಿ ಮತ ಪಂಥ ವೃತ್ತಿ ವರ್ಗ ಅಂತಸ್ತು ಭೇದವಿಲ್ಲದೆ ಒಂದು ಕಡೆ ಸೇರಬೇಕೆಂಬುದೇ ನನ್ನಿಚ್ಛೆ.

ನಿಮಗೆ ಲೌಕಿಕವಾಗಿ ಸೇರುವುದು ಗೊತ್ತು. ಹೆಣ್ಣು ಮಕ್ಕಳಿಗೆ ತೌರುಮನೆಯಲ್ಲಿ ಆಗಾಗ ಸೇರುವುದೂ ಗೊತ್ತು. ತಾಯಿ-ತಂದೆ, ಅಕ್ಕ-ತಂಗಿ, ಅಣ್ಣ-ತಮ್ಮಂದಿರೊಡನೆ ನಲಿದಾಡಲು ಅದೆಂತಹ ಕಾತುರದಿಂದ ಕಾಯುವರು ಎಂಬುದು ನಿಮಗೆಲ್ಲ ಗೊತ್ತು. ಆದರೆ ಭಕ್ತಿ ಸಂಬಂಧದಿಂದ ಒಂದು ಕಡೆ ಸೇರಬೇಕು; ಈ ಸಂಬಂಧ ರಕ್ತ ಸಂಬಂಧಕ್ಕಿಂತಲೂ ಶ್ರೇಷ್ಠ ಎಂಬುದನ್ನು ಇನ್ನೂ ನೀವು ಬಹಳ ಜನ ಅರಿತಿಲ್ಲ; ಈಗಲಾದರೂ ಅರಿಯಬೇಕು.

ತಮ್ಮ ಮಕ್ಕಳು ತೌರಿಗೆ ಬರಬೇಕು; ಪ್ರೀತಿಪೂರ್ವಕವಾಗಿ ಸೋದರ-ಸೋದರಿಯರೊಡನೆ ಬೆರೆಯಬೇಕು; ತಮ್ಮನ್ನು ಗೌರವಿಸಬೇಕು; ತಂದೆ ತಾಯಿಯರ ವಾತ್ಸಲ್ಯದಲ್ಲಿ ಮೀಯಬೇಕು ಎಂದು ಯಾವ ತಂದೆ-ತಾಯಿ ಬಯಸರು? ಸೃಷ್ಟಿಕರ್ತನೆಂಬ ತಂದೆಯ, ಮಾತೃಹೃದಯಿಯಾದ ನನ್ನ ಇಚ್ಛೆಯು ಅದೇ ಆಗಿದೆ. ಇದನ್ನು ನೀವೇಕೆ ಅರ್ಥ ಮಾಡಿಕೊಳ್ಳುತ್ತಿಲ್ಲ? ಇಷ್ಟು ದಿನ ನಿಮಗೆಲ್ಲ ಅಂಥ ಅವಕಾಶವಿರಲಿಲ್ಲ. ಇದೀಗ ನನ್ನ ಐಕ್ಯಕ್ಷೇತ್ರ ಕೂಡಲ ಸಂಗಮದಲ್ಲಿ ನಡೆಯುವ ಶರಣ ಮೇಳ ಅಂಥ ಅವಕಾಶ ಕಲ್ಪಿಸಿದೆ. ಸಮಾನತೆ-ಸೋದರತ್ವ-ಸ್ವಾತಂತ್ರ ಇವು ನನ್ನ ತತ್ತ್ವದ ಮುಖ್ಯಮೂರು ಸೂತ್ರಗಳು. ಇಲ್ಲಿ ಅವು ಮೂರನ್ನು ಕಾಣಬಹುದು. ಅದಕ್ಕಾಗಿ ನಾನು ನಿಮಗೆ ಹಾರ್ದಿಕ ಆಹ್ವಾನ ನೀಡುತ್ತಿದ್ದೇನೆ. ನೀವೆಲ್ಲರೂ ಬನ್ನಿರಿ, ಸಹಸ್ರ ಸಹಸ್ರ ಸಂಖ್ಯೆಯಲ್ಲಿ ಬನ್ನಿರಿ.

ಸೃಷ್ಟಿಕರ್ತ ಪರಮಾತ್ಮನೇ ನಮ್ಮೆಲ್ಲರ ತಂದೆ. ಒಂದೊಂದು ಕಾಲದಲ್ಲಿ ಒಬ್ಬೊಬ್ಬರನ್ನು ಲೋಕದ ಉದ್ಧಾರಕ್ಕಾಗಿ, ಜನರನ್ನು ಧರ್ಮ ಮಾರ್ಗಕ್ಕೆ ಕರೆತರಲು ಮಧ್ಯವರ್ತಿಗಳನ್ನಾಗಿ ಆಯ್ಕೆ ಮಾಡಿಕೊಂಡ. ಬುದ್ಧ, ಮೊಹಮ್ಮದ್, ಏಸು, ನಾನು ಎಲ್ಲ ಅಣ್ಣ ತಮ್ಮಂದಿರಂತೆ. ದೇವರೆಂಬ ತಂದೆಯ ಅವಿಭಾಜ್ಯ ಕಿರಣಗಳು. ದೇವರು ಪರಿಪೂರ್ಣನು, ನಿತ್ಯನು. ಅವನು ಸೀಮಿತರಾದ ತಾಯಿ ತಂದೆಗಳ ಹೊಟ್ಟೆಯಲ್ಲಿ ಹುಟ್ಟಿ ಬರುವುದಿಲ್ಲ ಮತ್ತು ಕರ್ತನು ಎಲ್ಲಿಯೋ ಒಂದು ಕಡೆ ಯಾವುದೋ ಲೋಕದಲ್ಲಿ ಸೀಮಿತನಾಗಿ ಇರುವುದಿಲ್ಲ. ಸೃಷ್ಟಿ-ಸ್ಥಿತಿ-ಲಯ- ತಿರೋದಾನ ಎಂಬ ನಾಲ್ಕು ಕಾರ್ಯಗಳನ್ನು ತಾನು ಮಾಡಿ, ತಾನು ನೇರವಾಗಿ ಕೆಲವು ವ್ಯಕ್ತಿಗಳನ್ನು ಆಯ್ಕೆ

ಮಾಡಿಕೊಂಡು, ಅವರಲ್ಲಿ ತನ್ನ ಅದ್ಭುತವಾದ ಕಾರುಣ್ಯವನ್ನು ಅವತೀರ್ಣಗೊಳಿಸಿ, ಸಾಮರ್ಥ್ಯವನ್ನು ನೀಡಿ, ಲೋಕದ ಜನತೆಯನ್ನು ಅನುಗ್ರಹಿಸಿ ಮುನ್ನಡೆಸಲು ಅವಕಾಶ ನೀಡುವನು. ಸೃಷ್ಟಿಕರ್ತನ ಉದ್ದೇಶ ಲೋಕದ ಮಾನವರು ಲೋಕದ ತಂದೆಯಾದ ದೇವನನ್ನು ಅರಿಯಬೇಕು. ಅವನ ಪ್ರೀತಿಯ ಕಾರುಣ್ಯ ಜಲದಲ್ಲಿ ಮೀಯಬೇಕು ಎಂಬುದೇ ಆಗಿದೆ. ಹೀಗಾಗಿ ಎಲ್ಲ ಧರ್ಮಗಳ ಏಕಮೇವ ಧ್ಯೇಯವು ಸೃಷ್ಟಿಕರ್ತನೇ ಆಗಿದ್ದಾನೆ.

ಈ ಸತ್ಯವನ್ನು ಗ್ರಹಿಸುವಲ್ಲಿ ಸೀಮಿತ ಬುದ್ಧಿಯ ಮಾನವರು ಹಲವಾರು ತಪ್ಪುಗಳನ್ನು ಎಸಗಿ ಮೂಢನಂಬಿಕೆ, ಬಹುದೇವತೋಪಾಸನೆ ಮುಂತಾದುವನ್ನು ರೂಢಿಸಿಕೊಂಡಿದ್ದರೆ ಸಮಾಜವನ್ನು ಒಡೆದು ಆಳಬೇಕೆಂಬ ಸ್ವಾರ್ಥ ಬುದ್ಧಿಯ ಜನರು ಅತ್ಯಂತ ವಿಷಮ ರೀತಿಯ ವರ್ಗೀಕರಣವಾದ ವರ್ಣವ್ಯವಸ್ಥೆ, ಜಾತಿ ಪದ್ಧತಿಯನ್ನು ಹುಟ್ಟು ಹಾಕಿ ಪೋಷಿಸುತ್ತ ಬಂದು ಅನೇಕ ಅನಿಷ್ಠ ಪರಿಣಾಮಗಳಿಗೆ ಕಾರಣರಾದರು. ಶೋಷಣೆಯು ಅಗಾಧವಾಗಿ ಸೃಷ್ಟಿಯ ಅರ್ಧ ಅಂಗವಾದ ಮಹಿಳೆಯರನ್ನು ಒಳಗೊಂಡು ಬಹಳ ಜನರು ದೇವರು-ಧರ್ಮ-ಸಂಸ್ಕಾರ-ಧಾರ್ಮಿಕ ಹಕ್ಕು ; ಇವುಗಳಿಂದ ವಂಚಿತರಾದರು.

ಮಮತೆಯ ಮಕ್ಕಳೇ, ತಾನೇ ಸೃಷ್ಟಿಸಿದ ಈ ಜಗತ್ತು, ಮಾನವ ಸಮಾಜ ದಾರಿ ತಪ್ಪುತ್ತ ಹೊರಟು, ಮಾನವ ಸಮಾಜವನ್ನು ಅಂದಗೆಡಿಸಿದ್ದನ್ನು ಕಂಡು ನೊಂದ ಕರ್ತನು, ನನ್ನಲ್ಲಿ ಅನುಗ್ರಹ ಇಳಿಸಿ, ಸಮಾಜ ಸುಧಾರಣೆಗೆ ನನ್ನನ್ನು ಆಯ್ಕೆ ಮಾಡಿಕೊಂಡನು.

ಕರ್ತನಟ್ಟಿದಡೆ ಮರ್ತ್ಯದಲ್ಲಿ ಮಹಾಮನೆಯ ಕಟ್ಟಿದೆ
ಸತ್ಯ ಶರಣರಿಗೆ ತೊತ್ತು ಭೃತ್ಯನಾಗಿ ಸವೆದು ಬದುಕಿದೆನು
ಕರ್ತನ ಬೆಸನು ಮತ್ತೆ ಬರಲೆಂದಟ್ಟಿದಡೆ
ಲಿಂಗದೇವರ ನಿರೂಪಕ್ಕೆ ಮಹಾಪ್ರಸಾದವೆಂದೆನು

ದೇವನ ಆಜ್ಞೆಯಂತೆ ನನ್ನ ಬದುಕು ನಡೆಯಿತು. ನಾನು ಆರಂಭಿಸಿದ ಸತ್ಯ ಸ್ಥಾಪನೆಯ ಕಾರ್ಯವನ್ನು ಅಸಂಖ್ಯಾತ ಶರಣರು ಮುಂದುವರಿಸಿದರು. ತಮ್ಮ ಪ್ರಾಣತೆತ್ತು ವಚನ ಸಾಹಿತ್ಯವನ್ನು ರಕ್ಷಿಸಿ, ನಿಮಗೆ ಅಮೂಲ್ಯ ಜ್ಞಾನ ಭಂಡಾರವನ್ನು ಕೊಟ್ಟಿದ್ದಾರೆ. ಮಾನವ ಸಮಾಜ ವರ್ಣ-ಜಾತಿ, ವರ್ಗ-ಅಂತಸ್ತು, ಮತ-ಪಂಥ, ಬಣ್ಣ-ಲಿಂಗ ಭೇದಗಳಿಂದ ಅಸಮಾನತೆಯನ್ನು ಸೃಷ್ಟಿಸಿರುವುದನ್ನು' ಕಂಡು ಇವೆಲ್ಲವುಗಳಿಂದ ಹೊರತಾದ "ಗಣಧರ್ಮ"ವನ್ನು ನಾನು ಕೊಟ್ಟಿದ್ದೇನೆ. ಇಂದು ನೀವು ಕೆಲವರು ಹುಟ್ಟಿನಿಂದಲೇ ಲಿಂಗವಂತರಾಗಿರಬಹುದು. ನಿಮ್ಮ ತಾಯಿ ತಂದೆ ಲಿಂಗವಂತರಾದ ಕಾರಣ. ಆದರೆ ಇದು ನನ್ನ ಆಶಯವಲ್ಲ. ಏಕೆಂದರೆ ಹುಟ್ಟಿನಿಂದ ಬರುವುದು ಜಾತಿ, ಸಂಸ್ಕಾರದಿಂದ ಬರುವುದು ಧರ್ಮ. ನೀವು ಸಂಸ್ಕಾರ ಹೊಂದಿ ಧರ್ಮಾಚರಣೆಯಿಂದ ಲಿಂಗವಂತರಾಗಬೇಕೇ ಹೊರತು, ಯಾವ ಸಂಸ್ಕಾರವನ್ನೂ ಹೊಂದದೆ ಜಾತಿಯಿಂದ ಲಿಂಗವಂತರು ಎಂದು ಹೇಳಿಕೊಳ್ಳುವುದು ನನಗೆ ಸಮ್ಮತವಾಗದ ವಿಷಯ. ನನ್ನ ತತ್ತ್ವಸಂಹಿತೆ ಯಾವುದೇ ಒಂದು ಜಾತಿ ವರ್ಣಕ್ಕೆ ಸೀಮಿತವಾಗದ 'ಗಣಧರ್ಮ'ವಾದ್ದರಿಂದ ಈ ಮಾರ್ಗವನ್ನು ಯಾರು ಬೇಕಾದರೂ ಸ್ವೀಕರಿಸಬಹುದು. ಹಾಗೆ ಸ್ವೀಕರಿಸಿದವರನ್ನು ಪ್ರೀತಿಯಿಂದ ನೀವು ಸ್ವಾಗತಿಸಿ ಬರಮಾಡಿಕೊಂಡು, ಸಮರಸ ಮಾಡಿಕೊಳ್ಳಬೇಕು.

ಇಂಥ ಸಾಮರಸ್ಯ ಮೂಡಬೇಕಾದರೆ ನೀವು ಆಗಾಗ ಒಂದೆಡೆ ಸೇರಬೇಕು.

ಕಾಗೆಯೊಂದಗುಳ ಕಂಡಡೆ
ಕರೆಯದೆ ತನ್ನ ಬಳಗವೆಲ್ಲವ?
ಕೋಳಿ ಒಂದು ಕುಟುಕ ಕಂಡಡೆ
ಕೂಗಿ ಕರೆಯದೆ ತನ್ನ ಕುಲವನೆಲ್ಲವ?
ಶಿವಭಕ್ತನಾಗಿ ಭಕ್ತಿ ಪಕ್ಷವಿಲ್ಲದಿದ್ದರೆ
ಆ ಕಾಗೆ ಕೋಳಿಯಿಂದ ಕರಕಷ್ಟ ಲಿಂಗದೇವಾ.

ಸೃಷ್ಟಿಕರ್ತನನ್ನು ಇಷ್ಟಲಿಂಗ ರೂಪದಲ್ಲಿ ನಿತ್ಯವೂ ಆರಾಧಿಸಿರಿ. ಇದು ವೈಯಕ್ತಿಕ ಆತ್ಮೋದ್ಧಾರಕ್ಕಾಗಿ. ಸಂಸ್ಕಾರ ಮತ್ತು ಸಂಘಟನೆಗಾಗಿ ಸಮುದಾಯ ಜೀವನದ ಸೂತ್ರಗಳಾಗಿ ಸಾಮೂಹಿಕ ಪ್ರಾರ್ಥನೆಯನ್ನು ಅಳವಡಿಸಿಕೊಳ್ಳಿರಿ.

ಕೌಟುಂಬಿಕ ಪ್ರಾರ್ಥನೆ: ಪ್ರತಿಯೊಬ್ಬ ವ್ಯಕ್ತಿಯ ಆತ್ಮೀಯ ವಲಯವೆಂದರೆ ಕುಟುಂಬ. ಕುಟುಂಬದವರೆಲ್ಲ ಕುಳಿತು ವಾರಕ್ಕೊಮ್ಮೆಯಾದರೂ ಸಾಮೂಹಿಕವಾಗಿ ಇಷ್ಟಲಿಂಗಾರ್ಚನೆ ಮಾಡಿರಿ. ಈ ಮೂಲಕ ಕೌಟುಂಬಿಕ ಸೌಹಾರ್ದತೆ ಬೆಳೆಯುವುದೇ ಅಲ್ಲದೆ ಎಲ್ಲರಲ್ಲೂ ಧರ್ಮಶ್ರದ್ಧೆ ಗಾಢವಾಗುವುದು. ದಿನ ನಿತ್ಯ ಸಂಜೆಯ ವೇಳೆಯಲ್ಲಿ ಹತ್ತು ಹದಿನೈದು ನಿಮಿಷ ಕಾಲವಾದರೂ ಮನೆಮಂದಿಯೆಲ್ಲ ಕುಳಿತು, ನೆನಹು ಸಂಜೆಯ ಪ್ರಾರ್ಥನೆ ಮಾಡಿರಿ.

ವಾರದ ಪ್ರಾರ್ಥನೆ : ಸಮುದಾಯ ಜೀವನದ ಶ್ರೇಷ್ಠ ಸೂತ್ರವೆಂದರೆ ಸಾಮೂಹಿಕ ಪ್ರಾರ್ಥನೆ. ವಾರಕ್ಕೊಮ್ಮೆ ಒಂದು ಸ್ಥಳದಲ್ಲಿ ಧರ್ಮಾನುಯಾಯಿಗಳು ಸೇರಿ ಸಾಮೂಹಿಕ ಪ್ರಾರ್ಥನೆ ಮಾಡಿ, ನಂತರ ವಚನಾನುಭವಗೋಷ್ಠಿ ಮಾಡಿರಿ. ಸೃಷ್ಟಿಕರ್ತನನ್ನು ಭಜಿಸಿ ಪ್ರಾರ್ಥಿಸಿ, ಸ್ತುತಿಸುವ ಮೂಲಕ ಅವನಿಗೆ ಕೃತಜ್ಞತೆ ಸಲ್ಲಿಸಿರಿ.

ನೆನಹು : ಪ್ರತಿದಿನ ಸಂಜೆ ೭ ಘಂಟೆಗೆ ಸರಿಯಾಗಿ ನೀವು ಎಲ್ಲಿಯೇ ಇದ್ದರೂ ಆ ಸ್ಥಳದಲ್ಲಿ ಐದು ನಿಮಿಷಗಳ ಪ್ರಾರ್ಥನೆಯನ್ನು ವೈಯಕ್ತಿಕವಾಗಿಯಾಗಲಿ ಸಾಮೂಹಿಕವಾಗಿಯಾಗಲಿ ಅಳವಡಿಸಿಕೊಂಡು ತಪ್ಪದೆ ಮಾಡಿರಿ.

ಗಣ ಮೇಳ : ನನ್ನ ವಚನಗಳನ್ನು ಗಮನಿಸಿರಿ. ಗಣ ಮೇಳಾಪಕ್ಕೆ ಎಷ್ಟು ಒತ್ತು ಕೊಟ್ಟಿದ್ದೇನೆ ನೋಡಿರಿ. ಪಕ್ಷಿಗಳು ಸಮೂಹ ಜೀವನವನ್ನು ಇಷ್ಟ ಪಡುತ್ತವೆ. ಆನೆಗಳು ಬಲಿಷ್ಠ ಪ್ರಾಣಿಗಳು, ಆದರೂ ಗುಂಪುಗೂಡಿಯೆ ಬದುಕಲು ಇಷ್ಟಪಡುತ್ತವೆ. ಸಮೂಹವನ್ನು ತೊರೆದ. ಮದವೇರಿದ ಸಲಗ ಎಷ್ಟು ಉನ್ಮತ್ತವಾಗಿ ವರ್ತಿಸುವುದೋ ಹಾಗೆ ಸಮಾಜದಿಂದ ಬೇರೆಯಾಗುವ ವ್ಯಕ್ತಿ ಸಹ ಪ್ರೇಮ ಸ್ವಭಾವವನ್ನು ತೊರೆದು ವಿಕೃತ ಮನಸ್ಕನಾಗುವನು. ಆಯಾ ಊರುಗಳಲ್ಲಿರುವ ಧರ್ಮ ಬಾಂಧವರು ಧಾರ್ಮಿಕ ಭ್ರಾತೃತ್ವ ಭಾವ ಬೆಳೆಸಿಕೊಂಡು ವರ್ಷದಲ್ಲಿ ಒಂದು ದಿನವಾದರೂ ಒಟ್ಟುಗೂಡಿ ಪ್ರಾರ್ಥನೆ-ಪೂಜೆ ಮಾಡಿರಿ. ಶಿವರಾತ್ರಿ- ಯಂದು ಬೆಳಿಗ್ಗೆ ವಿಶಾಲವಾದ ಮೈದಾನಗಳಲ್ಲಿ ಧರ್ಮಬಾಂಧವರೆಲ್ಲ ಸೇರಿ ಗಣ ಮೇಳದಲ್ಲಿ ಭಾಗಿಗಳಾಗಿರಿ.

ಶರಣ ಮೇಳ : ವ್ಯಕ್ತಿಯು ವೈಯಕ್ತಿಕ ಪೂಜೆ ಮಾಡುವುದು. ಕುಟುಂಬದವರೆಲ್ಲ ಒಂದಡೆ ಸೇರಿ ಪ್ರಾರ್ಥಿಸುವುದು ನಿತ್ಯ ವಿಧಿಗಳು. ಸಾಮೂಹಿಕ ಪ್ರಾರ್ಥನೆ ವಾರಕ್ಕೊಮ್ಮೆ ನಡೆಯುವುದಾದ್ದರಿಂದ, ವಿವಿಧ ಬಡಾವಣೆ ಪ್ರದೇಶಗಳ ಜನರು ಅಲ್ಲಲ್ಲೇ ಕಲೆತು ಅದನ್ನು

ಮಾಡುವರು. 'ಗಣ ಮೇಳ'ವು ಆಯಾ ಗ್ರಾಮ, ಊರು, ನಗರಗಳ ಧರ್ಮಬಾಂಧವರನ್ನು ಒಂದೆಡೆ ತರಲು ನೆರವಾಗುವುದು. ಇನ್ನು ಪ್ರಾದೇಶಿಕತೆ, ಭಾಷೆ, ಮುಂತಾದ ಎಲ್ಲ ಸೀಮೆಗಳನ್ನು ದಾಟಿ ಧಾರ್ಮಿಕ ಸೂತ್ರದ ಮೇಲೆ ನಮ್ಮ ತತ್ತ್ವಾನುಯಾಯಿಗಳನ್ನು ಬೆಸೆಯುವ ಸೂತ್ರವೇ ಶರಣ ಮೇಳ. ಆದ್ದರಿಂದ ನಿಮ್ಮ ಎಲ್ಲ ಕೆಲಸ ಕಾರ್ಯಗಳನ್ನು ಬದಿಗೊತ್ತಿ ಕೂಡಲ ಸಂಗಮಕ್ಕೆ ಧಾವಿಸಿ ಬಂದು ಜನವರಿ ೧೨ ರಿಂದ ೧೫ ರವರೆಗೆ ನಡೆಯುವ ಶರಣ ಮೇಳದಲ್ಲಿ ನೀವು ತಪ್ಪದೇ ಭಾಗಿಗಳಾಗಿರಿ.

ಸತ್ಯ ಸ್ಥಾಪನೆಗಾಗಿ, ಸಮಾನತೆಯ ಅನುಷ್ಠಾನಕ್ಕಾಗಿ ನಾವುಗಳೆಲ್ಲರೂ ಮಾಡಿದ ತ್ಯಾಗವನ್ನು ನೀವು ಮರೆಯಬಾರದು. ನಮ್ಮ ಅಂತಃಕರಣ ಪೂರ್ವಕ ಕಳಕಳಿಯನ್ನು ಪ್ರಾಂಜಲ ಮನಸ್ಸಿನಿಂದ ಅರಿಯಬೇಕು. ಜಗಬದುಕಲೆಂದು ಜನ ಬದುಕಲೆಂದು ವಚನ ವಾಙ್ಮಯವನ್ನು ಹೋರಾಡಿ ರಕ್ಷಿಸಿದ ಅಕ್ಕನಾಗಲಾಂಬಿಕೆ- ಮಡಿವಾಳ ಮಾಚಯ್ಯ-ಚನ್ನಬಸವಣ್ಣ ಮುಂತಾದವರ ಹೋರಾಟ ನಿಮ್ಮನ್ನು ಎಚ್ಚರಿಸದೆ? ಸಮಾನತೆಯ ಧ್ವಜವನ್ನು ಹಾರಿಸಲಿಕ್ಕಾಗಿ ಹರಳಯ್ಯ-ಮಧುವಯ್ಯ -ಶೀಲವಂತರು ಮಾಡಿದ ಪ್ರಾಣಾರ್ಪಣೆ, ಬಲಿದಾನ ನಿಮ್ಮ ಅಂತಃಕರಣವನ್ನು ಕಲಕದೆ?

ಹೆತ್ತ ತಂದೆ ಬಯಸುವುದೇನನ್ನು? ತನ್ನ ಮಕ್ಕಳೆಲ್ಲರೂ ಒಂದೆಡೆ ಸೇರಿ ಹಾಡಿ ಪಾಡಿ ನಲಿಯಬೇಕೆಂದು ತಾನೆ? ಅದೇ ನನ್ನ ಬಯಕೆ ಸಹ. ತೌರಿಗೆ ಬಂದರೆ ಏನು ಸಿಗುತ್ತದೆ ಎಂದು ನಿಮ್ಮ ಪ್ರಶ್ನೆಯೆ? ಜ್ಞಾನದ ವಸ್ತ್ರವನ್ನು ನನ್ನ ಪ್ರತಿನಿಧಿಗಳಾದ ಬೋಧಕರು ಉಡಿಸುವರು, ಸದ್ಗುಣಗಳ ಆಭರಣ ತೊಡಿಸುವರು. ವಚನ ಜ್ಞಾನದ ಸಂಪದವನ್ನು ಉಡಿ ತುಂಬಿ ಕಳಿಸುವರು ಐಹಿಕ ಜಗತ್ತಿನಲ್ಲಿ ನನಗೆ ಮೆಚ್ಚುಗೆಯಾಗುವಂತೆ ನೀವು ಹೇಗೆ "ಒಗೆತನವ" ಮಾಡಬೇಕೆಂಬುದನ್ನು ಕಲಿಸಿ ಕಳಿಸುವರು.

ಷಡಂಗ ದಾಸೋಹ ಮಾಡಿರಿ, ತನು-ಮನ-ಧನ-ಪ್ರಾಣ-ಅಭಿಮಾನ-ಸಮಯ; ಈ ಆರನ್ನೂ ಮೀಸಲಿರಿಸಿ ನಮ್ಮ ತತ್ತ್ವಗಳ ಪಾಲನೆಗಾಗಿ ಶ್ರಮಿಸಿರಿ. ಸಮಷ್ಟಿಯ ಉದ್ಧಾರಕ್ಕಾಗಿ ವೈಯಕ್ತಿಕ ಅಹಂಕಾರ-ಪ್ರತಿಷ್ಠೆ ತೊರೆಯಿರಿ. ಅನುಭವ ಮಂಟಪದ ಮೂಲಕ ನಾವು ಬೋಧಿಸಿದ ಮೌಲ್ಯಗಳು ಅನುಷ್ಠಾನಕ್ಕೆ ಬರದಿರಲು ಪರಸ್ಪರರ ಸ್ವಾರ್ಥ, ಅಹಂಕಾರ-ಪ್ರತಿಷ್ಠೆಗಳೇ ಕಾರಣ ಎಂಬುದನ್ನು ಈಗಲಾದರೂ ಅರಿತುಕೊಳ್ಳಿರಿ.

ನಿಮ್ಮನ್ನು ಯಾರಾದರೂ ಶರಣ ಮೇಳಕ್ಕೆ ಆಹ್ವಾನಿಸಬೇಕೆಂದು, ಕರೆ ಕಳುಹಿಸಬೇಕೆಂದು ನಿರೀಕ್ಷಿಸುವಿರೋ? ಕೂಡದು. ನದಿಯು ನಿರಂತರವಾಗಿ ಹರಿಯುತ್ತಿರುತ್ತದೆ; ಆದರಿಂದ ಯಾರು ಬೇಕಾದರೂ ನೀರನ್ನು ತುಂಬಿಕೊಳ್ಳಬಹುದು. ಹಾಗೆಯೇ ಶರಣ ಮೇಳದಲ್ಲಿ ವಚನ ವಾಙ್ಮಯ ಗಂಗೆ ಹರಿಯುತ್ತಿರುತ್ತಾಳೆ. ಬನ್ನಿ, ನಿಮ್ಮ ಹೃದಯ-ಮನ-ಬುದ್ಧಿ ಹಿಡಿಯುವಷ್ಟು ತುಂಬಿಕೊಳ್ಳಿರಿ. ನೀವು ನನಗಾಗಿ, ನಮ್ಮ-ನಿಮ್ಮೆಲ್ಲರ ತಂದೆಯಾದ ದೇವನನ್ನು ಆರಾಧಿಸಲು ಬರುತ್ತೀರೆಂದು ನಾನು ಸದಾ ನಿರೀಕ್ಷಿಸುತ್ತ ವಾತ್ಸಲ್ಯಪೂರ್ಣವಾಗಿ ನಿಮಗೆ ಈ ಆಹ್ವಾನ ನೀಡಿರುವೆನು.

ನಿಮ್ಮ ಪ್ರೀತಿಯ ತಂದೆ- ಬಸವಣ್ಣ
(ಗ್ರಹಿಸಿದವರು -ಬಸವಾತ್ಮಜೆ ಮಾತಾಜಿ)

ಅಖಿಲ ಭಾರತ ವೀರಶೈವ ಮಹಾಸಭೆಗೆ ಆಮಂತ್ರಣ ಪತ್ರ

ಮಾನ್ಯ ಅಧ್ಯಕ್ಷರು, ಕಾರ್ಯದರ್ಶಿಯವರು
ಹಾಗೂ ಪ್ರಮುಖ ಪದಾಧಿಕಾರಿಗಳು
ಅಖಿಲ ಭಾರತ ವೀರಶೈವ ಮಹಾಸಭೆ
ಮಾಧವನಗರ, ಬೆಂಗಳೂರು

ಬೆಂಗಳೂರು
ದಿ. 9-11-2000

ಇವರಿಗೆ ಶುಭಹಾರೈಕೆಗಳು

ಮಾನ್ಯರೇ,

ವಿಷಯ : ಲಿಂಗಾಯತ ಧರ್ಮೀಯರ ಸಮಾವೇಶದ ಚಿಂತನಗೋಷ್ಠಿಯಲ್ಲಿ ಭಾಗವಹಿಸಲು ಕರೆ

2001ನೆಯ ಇಸವಿಯಲ್ಲಿ ಭಾರತ ಸರ್ಕಾರವು ದಶವಾರ್ಷಿಕ ಕಾರ್ಯಕ್ರಮವಾದ ಜನಗಣತಿಯನ್ನು ನಡೆಸುತ್ತಿದ್ದು, ಇದು ಒಂದು ಮಹತ್ವಪೂರ್ಣವಾದ ಕಾರ್ಯಕ್ರಮ. ಭಾರತದ ಜನಗಣತಿಯು ಜಾತಿವಾರು ಆಗದೆ, ಧರ್ಮದ ಆಧಾರದ ಮೇಲೆ ಇರುವುದು. ಕರ್ನಾಟಕದಲ್ಲಿ ಪ್ರಧಾನವಾಗಿ, ಪಕ್ಕದ ರಾಜ್ಯಗಳಲ್ಲಿ ಗಮನಾರ್ಹವಾಗಿ ಇರುವ ಲಿಂಗಾಯತ ಧರ್ಮಾನುಯಾಯಿಗಳು ತಮ್ಮ ಧರ್ಮಾನುಯಾಯಿಗಳ ನಿಖರ ಸಂಖ್ಯೆ ತಿಳಿಯಲು ಕಾತುರರಾಗಿದ್ದಾರೆ.

ತಾವು ಅಖಿಲ ಭಾರತ ವೀರಶೈವ ಮಹಾಸಭೆ ಎಂಬ ಸಂಸ್ಥೆಯ ಮೂಲಕ ಪ್ರಚಾರ ಹಮ್ಮಿಕೊಂಡು ವೀರಶೈವ ಪದವು ಲಿಂಗಾಯತ ಧರ್ಮಕ್ಕೆ ಹೊಂದದೆ ಇದ್ದರೂ ವೀರಶೈವ/ಲಿಂಗಾಯತ ಎಂದು ಮೊದಲು ಹೇಳುತ್ತಿದ್ದು ಈಗ ವೀರಶೈವ ಅಥವಾ ಲಿಂಗಾಯತ ಎಂದು ಜನಗಣತಿಯ ಮತ (Religion) ಅಂಕಣದಲ್ಲಿ ಬರೆಸಿರಿ ಎಂದು ಹೇಳುತ್ತ ಜನರಲ್ಲಿ ಅನವಶ್ಯಕ ಗೊಂದಲ ಉಂಟು ಮಾಡುತ್ತಿದ್ದೀರಿ. ಜನರು ವ್ಯಾಪಕವಾಗಿ ಆಡುವ ಮಾತು, ನೀಡುವ ಸಲಹೆ ಏನೆಂದರೆ "ವೀರಶೈವ ಮಹಾಸಭೆ, ಲಿಂಗಾಯತ ಧರ್ಮ ಮಹಾಸಭೆ ಪ್ರತ್ಯೇಕ ಹೇಳಿಕೆ ಕೊಡದೆ, ಒಟ್ಟಾಗಿ ಚರ್ಚಿಸಿ ಒಂದು ನಿರ್ಣಯಕ್ಕೆ ಬಂದು ಘೋಷಿಸಲಿ. ಇದರಿಂದ ಗೊಂದಲ ನಿವಾರಣೆ ಆಗುವುದು."

ಈ ಹಿನ್ನೆಲೆಯಲ್ಲಿ ಭಾನುವಾರ ದಿ. 12-11-2000ದಂದು ಸರ್. ಪುಟ್ಟಣ್ಣಚೆಟ್ಟಿ ಪುರಭವನದಲ್ಲಿ ಬೆಳಿಗ್ಗೆ 10-30ರಿಂದ ಸಂಜೆ 5 ರವರೆಗೆ ಕಾರ್ಯಕ್ರಮ, ಚಿಂತನಗೋಷ್ಠಿ ಏರ್ಪಡಿಸಲಾಗಿದ್ದು ಅನೇಕ ವಿದ್ವಾಂಸರು ಭಾಗಿಗಳಾಗುತ್ತಲಿದ್ದಾರೆ.

ಪ್ರಜಾಪ್ರಭುತ್ವದಲ್ಲಿ ತಮ್ಮ ವಿಚಾರ ಪ್ರತಿಪಾದಿಸಲು ಎಲ್ಲರಿಗೂ ಹಕ್ಕಿದೆ, ಅವಕಾಶವಿರುತ್ತದೆ. ಈ ಹಿನ್ನೆಲೆಯಲ್ಲಿ 12ನೆಯ ಶತಮಾನದ ಅನುಭವ ಮಂಟಪದ ರೀತಿಯಲ್ಲಿ ವಿಷಯ ಮಂಡನೆ ಮಾಡಲು ಅವಕಾಶ ನೀಡಲಾಗುತ್ತದೆ. ಕೋಪ, ಉದ್ರೇಕ, ವೈಯಕ್ತಿಕ ಟೀಕೆ, ದಬಾವಣೆ ಇರದೆ ಮುಕ್ತ ಮನಸ್ಸಿನಿಂದ ಚರ್ಚೆ ಮಾಡಲು ಅವಕಾಶ ನೀಡಲಾಗುತ್ತದೆ. ಆದ್ದರಿಂದ ತಾವು ಅಖಿಲ ಭಾರತ ವೀರಶೈವ ಮಹಾಸಭೆಯ ವತಿಯಿಂದ ಚಿಂತನಗೋಷ್ಠಿಯಲ್ಲಿ ಭಾಗವಹಿಸಬೇಕು ಅಥವಾ ನಿಮ್ಮ ವತಿಯಿಂದ ಚರ್ಚೆ ಮಾಡಬಲ್ಲ ಯಾರನ್ನಾದರೂ ಕಳಿಸಿಕೊಟ್ಟು ಒಂದು ನಿರ್ಣಯಕ್ಕೆ ಬರಲು ಮನಸ್ಸು ಮಾಡಬೇಕೆಂದು ಕೋರಿ ಈ ಆಹ್ವಾನ ನೀಡಲಾಗುತ್ತಿದೆ. ನಮ್ಮ ಸಹೃದಯ ಪೂರ್ಣ ಆಹ್ವಾನವನ್ನು ಮನ್ನಿಸಿ ಆಗಮಿಸುವಿರಾಗಿ ನಂಬುತ್ತೇವೆ.

ವಿಶೇಷ ಒಕ್ಕಣಿಕೆ : ದಿ. 12-11-2000ದ ಆಹ್ವಾನ ಪತ್ರ ಕಳಿಸಲಾಗಿದೆ. ಈ ಮೊದಲೇ ಸಂಪರ್ಕಿಸಿ, ತಾವು ಒಪ್ಪಿದರೆ ಹೆಸರನ್ನು ಮುದ್ರಿಸುವುದು ಸೂಕ್ತವೆನಿಸುತ್ತಿತ್ತು. ಅಂಥದೊಂದು ಪ್ರಸಂಗ ಅಸಾಧ್ಯ ಎಂಬ ಕಲ್ಪನೆಯಿಂದ ಆಹ್ವಾನಿಸಲಿಲ್ಲ. ಆದರೆ, ಸಮಾಜದಲ್ಲಿ ಗೊಂದಲ ಉಂಟಾಗದೆ ಮುಂದಿನ ಜನಾಂಗಕ್ಕೆ

ಹಿತಫಾಗಬೇಕಾಗಿದ್ದರೆ ಗೊಂದಲ ಪರಿಹರಿಸಿಕೊಂಡು ಒಮ್ಮತಕ್ಕೆ ಬರಬೇಕಾದುದು ಅನಿವಾರ್ಯ ಎಂದು ತಡವಾಗಿ ಆಹ್ವಾನ ಕಳಿಸುತ್ತಿದ್ದೇವೆ. ತಾವು ಒಪ್ಪಿದರೆ ತಾವು ಸೂಚಿಸುವ ಹೆಸರನ್ನು/ ಹೆಸರುಗಳನ್ನು ಮುದ್ರಿಸಿ ವಿಶೇಷ ಆಹ್ವಾನ ಪತ್ರ ಸಿದ್ಧಪಡಿಸಲಾಗುವುದು. ನಮ್ಮ ಸಾಮಾಜಿಕ/ಧಾರ್ಮಿಕ ಕಳಕಳಿಯನ್ನು ಅರ್ಥ ಮಾಡಿಕೊಂಡು ಸ್ಪಂದಿಸಿ, ಸಹಕರಿಸುವಿರಾಗಿ ನಂಬಿದ್ದೇವೆ. ಹೃತ್ಪೂರ್ವಕ ಶುಭಹಾರೈಕೆಗಳೊಡನೆ,

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ
ಗೌರವಾಧ್ಯಕ್ಷರು, ಲಿಂಗಾಯತ ಧರ್ಮ ಮಹಾಸಭಾ
ಬೆಂಗಳೂರು

ಬೆಂಗಳೂರಿನಲ್ಲಿ ಲಿಂಗಾಯತ ಧರ್ಮೀಯರ ಸಮಾವೇಶ

ಲಿಂಗಾಯತವು ಒಂದು ಸ್ವತಂತ್ರ ಧರ್ಮ

-ಪ್ರೊ. ರವಿವರ್ಮ ಕುಮಾರ್

"ಲಿಂಗಾಯತವು ಒಂದು ಸ್ವತಂತ್ರ ಧರ್ಮ. ಇದಕ್ಕೆ ಒಬ್ಬ ಸ್ಥಾಪಕರಿದ್ದಾರೆ. ಒಂದು ವಿಶಿಷ್ಟ ಸಾಹಿತ್ಯವಿದೆ. ಖಚಿತವಾದ ಆಚಾರ-ವಿಚಾರ ಕ್ರಮವಿದೆ. ಪ್ರಗತಿಪರ ಚಿಂತನೆಯಿದೆ ಎಂಬುದರಲ್ಲಿ ಯಾವುದೇ ಸಂದೇಹವಿಲ್ಲ." ಎಂದು ಕರ್ನಾಟಕ ರಾಜ್ಯ ಹಿಂದುಳಿದ ಶಾಶ್ವತ ಆಯೋಗದ ಅಧ್ಯಕ್ಷರಾದ ಪ್ರೊ. ರವಿವರ್ಮ ಕುಮಾರ್ ಅವರು ಲಿಂಗಾಯತ ಧರ್ಮೀಯರ ಸಮಾವೇಶವನ್ನು ಉದ್ಘಾಟಿಸಿ ನುಡಿದರು.

ಮುಂದುವರಿದು ಮಾತನಾಡಿದ ಅವರು, "ಹಿಂದು ಒಂದು ಧರ್ಮ ; ಅದರಲ್ಲಿ ಲಿಂಗಾಯತ ಒಂದು ಜಾತಿ ಎಂಬುದು ತಪ್ಪು. ಏಕೆಂದರೆ ಹಿಂದುವಿಗೆ ಸ್ಪಷ್ಟವಾಗಿ ವ್ಯಾಖ್ಯಾನವೇ ಇಲ್ಲ. ಇಸ್ಲಾಂ, ಕ್ರೈಸ್ತ, ಬೌದ್ಧ ಜೈನ್, ಸಿಖ್ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಬಿಟ್ಟು ಉಳಿದವರನ್ನೆಲ್ಲ ಹಿಂದುಗಳೆಂದು ಗಣನೆ ಮಾಡಲಾಗುತ್ತಿದೆ. ಆದರೆ ತನ್ನದೇ ಆದ ವೈಶಿಷ್ಟ್ಯ ಪೂರ್ಣ ಆಚಾರ ವಿಚಾರಗಳಿಂದ ಕೂಡಿದ ಒಬ್ಬ ಗುರು, ಒಬ್ಬ ದೇವರು, ಒಂದು ಸಾಹಿತ್ಯ ಮುಂತಾದುವನ್ನು ಹೊಂದಿದ ಲಿಂಗಾಯತ ಧರ್ಮವು ಸ್ವತಂತ್ರ ಧರ್ಮವೆಂದು ಮಾನ್ಯತೆ ಪಡೆಯಲು ಮತ್ತು ಜನಗಣತಿಯಲ್ಲಿ ಸ್ವತಂತ್ರವಾಗಿ ಗಣನೆ ಮಾಡಿಸಿಕೊಳ್ಳಲು ಎಲ್ಲ ಅರ್ಹತೆಯನ್ನು ಹೊಂದಿದೆ." ಎಂದು ಹೇಳಿದರು.

ಬೆಂಗಳೂರು ನಗರದ ಪುಟ್ಟಣ್ಣಚೆಟ್ಟಿ ಪುರಭವನದಲ್ಲಿ ಲಿಂಗಾಯತ ಧರ್ಮೀಯರ ಸಮಾವೇಶದಲ್ಲಿ ಸನ್ನಿಧಿ ವಹಿಸಿದ್ದ ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರು ಪ್ರಾಸ್ತಾವಿಕವಾಗಿ ಮಾತನಾಡುತ್ತ 'ಹನ್ನೆರಡನೆಯ ಶತಮಾನದಲ್ಲಿ ವಿಶ್ವಗುರು ಬಸವಣ್ಣನವರು ಸ್ಥಾಪಿಸಿಕೊಟ್ಟ ಲಿಂಗಾಯತ ಧರ್ಮವು ಬೇರೆ ಯಾವುದೇ ಧರ್ಮದ ಒಂದು ಅಂಗ, ಜಾತಿ ಮತ ಪಂಥವಾಗದೆ ಸ್ವತಂತ್ರ ಮತ್ತು ಸ್ವಾವಲಂಬಿ ಧರ್ಮವಾಗಿದೆ. ಆದ್ದರಿಂದ ಅರ್ಜಿ ಪತ್ರಗಳಲ್ಲಿ ಧರ್ಮ ಅಂಕಣದಲ್ಲಿ ಹಿಂದು ಬರೆದು ಜಾತಿ ಅಂಕಣದಲ್ಲಿ ಲಿಂಗಾಯತ ಬರೆಸುವುದು ಶುದ್ಧ ತಪ್ಪು ; ರಾಷ್ಟ್ರೀಯತೆ ಭಾರತೀಯ ಎಂದು ಬರೆಸಿದರೆ, ಧರ್ಮವು ಲಿಂಗಾಯತ ಎಂದು ಬರೆಸಿ ಜಾತಿ ಎಂಬಲ್ಲಿ ಉಪಜಾತಿಯನ್ನು ಬರೆಸಬೇಕು. 2001ನೆಯ ಇಸವಿಯಲ್ಲಿ ಬರುವ ಜನಗಣತಿಯ ಸದುಪಯೋಗ ಪಡೆದುಕೊಳ್ಳಬೇಕು. ಮತ ಎಂಬ 7ನೆಯ ಪ್ರಶ್ನೆಗೆ ಉತ್ತರವಾಗಿ ಕೇವಲ ಲಿಂಗಾಯತ ಎಂದು ಬರೆಸಬೇಕೇ ವಿನಾ ವೀರಶೈವ-ಲಿಂಗಾಯತ, ವೀರಶೈವ ಅಥವಾ ಹಿಂದು ಲಿಂಗಾಯತ ಎಂದಲ್ಲ" ಎಂದು ಕರೆ ನೀಡಿದರು.

ಮುಂಬಯಿಯ ಉದ್ಯಮಿ ಆರ್.ಬಿ. ಹೆಬ್ಬಳ್ಳಿಯವರು 2001ನೆಯ ಇಸವಿಯ ಪಾಕೆಟ್

ಕ್ಯಾಲೆಂಡರನ್ನು ಬಿಡುಗಡೆ ಮಾಡಿದರು. ಶಾಸಕ ಎ.ಎಸ್.ಗುರುಸ್ವಾಮಿಯವರು, ಡಾ|| ಮನು ಕುಲಕರ್ಣಿಯವರು ಮುಖ್ಯ ಅತಿಥಿಗಳಾಗಿ ಮಾತನಾಡಿದರು. ಖ್ಯಾತ ನ್ಯಾಯವಾದಿಗಳಾದ ಪ್ರಮೀಳಾ ನೇಸರ್ಗಿ, ಆರ್. ಹೆಚ್. ಚಂದನಗೌಡರು, ವ್ಹಿ.ಟಿ. ರಾಯರೆಡ್ಡಿಯವರು ಉಪನ್ಯಾಸ ಮಾಡಿದರು. ರಾಷ್ಟ್ರಪ್ರಶಸ್ತಿ ವಿಜೇತ ಶಿಕ್ಷಕ ಕೊಂಡಾ ಬಸವರಾಜ್, ಬೆಂಗಳೂರು ನಗರ ಜಿಲ್ಲಾ ಪರಿಷತ್ತು ಅಧ್ಯಕ್ಷ ಹೆಚ್.ಎಸ್. ಬಸವರಾಜ ಕ್ರೀಡಾ ತರಬೇತುದಾರರಾದ ಪಿ.ಎಸ್. ವಿಶ್ವನಾಥ ಅವರನ್ನು ಸನ್ಮಾನಿಸಲಾಯಿತು. ಎನ್. ಪುಟ್ಟರುದ್ರ ಅವರು ಪ್ರಸ್ತಾವನಾ ಭಾಷಣ ಮಾಡಿದರು.

ಧಾರ್ಮಿಕ ಸಮಾವೇಶ ಕೈಗೊಂಡ ನಿರ್ಣಯಗಳು

1. ಲಿಂಗಾಯತ ಧರ್ಮವು ಒಂದು ಸ್ವತಂತ್ರ ಧರ್ಮ. ಇದು ಹಿಂದು ಧರ್ಮದ ಅಂಗವಲ್ಲ. ಅದರೊಳಗಣ ಒಂದು ಜಾತಿ ಮತ ಪಂಥವಲ್ಲ. ಆದ್ದರಿಂದ ಲಿಂಗಾಯತರು ತಮ್ಮ ಶಾಲೆಯ, ನೌಕರಿಯ ಅರ್ಜಿ ಪತ್ರಗಳಲ್ಲಿ ವಿವರಗಳನ್ನು ತುಂಬುವಾಗ ಧರ್ಮ ಎಂಬಲ್ಲಿ ಹಿಂದು, ಜಾತಿ ಎಂಬಲ್ಲಿ ಲಿಂಗಾಯತ ಎಂದು ದಾಖಲಿಸದೆ ಧರ್ಮ ಎಂಬಲ್ಲಿ ಲಿಂಗಾಯತ, ಜಾತಿ ಎಂಬಲ್ಲಿ ನಿಗದಿತ ಸೌಲಭ್ಯ ಪಡೆದುಕೊಳ್ಳಲು ಉಪಪಂಗಡದ ಹೆಸರನ್ನು ಬರೆಸಬೇಕು. ಈಗ ತಾತ್ಕಾಲಿಕವಾಗಿ ಉಪಜಾತಿಯ ಪಂಗಡದ ಹೆಸರನ್ನು ಬರೆದರೂ ಕಾಲಾನಂತರದಲ್ಲಿ ಧರ್ಮ-ಜಾತಿ ಎರಡೂ ಲಿಂಗಾಯತ ಎಂದೇ ಬರೆಸಬೇಕು.
2. ಕೆಲವರು ಬರವಣಿಗೆಯಲ್ಲಿ **ಲಿಂಗಾಯಿತ** ಎಂದು ಬರೆಯುತ್ತಾರೆ. ಇದು ತಪ್ಪು ಪ್ರಯೋಗ. ಈ ಹಿನ್ನೆಲೆಯಲ್ಲಿರುವ ತಪ್ಪು ಕಲ್ಪನೆ ಎಂದರೆ ಲಿಂಗಾಯತ ಎಂದರೆ ಧರ್ಮದ ಹೆಸರು, ಲಿಂಗಾಯಿತ ಎಂಬುದು ಅನುಯಾಯಿಯ ಹೆಸರು ಎಂದು ಕೆಲವರು ತಿಳಿದಿರುವುದು. ಲಿಂಗಾಯಿತ ಎಂಬ ಪದದ ಪ್ರಯೋಗವೇ ತಪ್ಪು ಎಂದು ನಿರ್ಣಯ ತೆಗೆದುಕೊಳ್ಳಲಾಯಿತು.
3. ಭಾರತ ದೇಶದಲ್ಲಿ ಹುಟ್ಟಿದರೂ ಯಾವ ತತ್ತ್ವ-ನೀತಿ ಸಂಹಿತೆಯ ಆಧಾರದ ಮೇಲೆ ಜೈನ-ಬೌದ್ಧ-ಸಿಖ್ ಧರ್ಮಗಳನ್ನು ಸ್ವತಂತ್ರ ಧರ್ಮಗಳೆಂದು ಪರಿಗಣಿಸಲಾಗಿದೆಯೋ ಅದೇ ಆಧಾರದ ಮೇಲೆ ಲಿಂಗಾಯತ ಧರ್ಮವನ್ನು ಸ್ವತಂತ್ರ ಧರ್ಮವೆಂದು ಸಂವಿಧಾನಾತ್ಮಕವಾಗಿ ಮನ್ನಿಸಲು ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರಗಳ ಮೇಲೆ ಒತ್ತಾಯ ತರಬೇಕು ಎಂದು ನಿರ್ಣಯಿಸಲಾಯಿತು.
4. ಕೇಂದ್ರ ಸರಕಾರವು ಲಿಂಗಾಯತ ಧರ್ಮವು ಒಂದು ಸ್ವತಂತ್ರ ಧರ್ಮವೆಂದು ಮನ್ನಿಸಿ, ಈಗಾಗಲೇ ಆರು ಧರ್ಮಗಳಾದ ಹಿಂದು, ಬೌದ್ಧ, ಜೈನ್, ಸಿಖ್, ಮುಸ್ಲಿಂ, ಕ್ರೈಸ್ತ ಧರ್ಮಗಳ ಅನುಯಾಯಿಗಳ ಪ್ರತ್ಯೇಕ ಗಣತಿ ಮಾಡಿದಂತೆ ಲಿಂಗಾಯತ ಧರ್ಮಾನುಯಾಯಿಗಳ ಪ್ರತ್ಯೇಕ ಜನಗಣತಿ ಮಾಡಬೇಕೆಂದು ನಿರ್ಣಯಿಸಲಾಯಿತು.
5. ಬೌದ್ಧ, ಜೈನ, ಸಿಖ್, ಮುಸ್ಲಿಂ, ಕ್ರೈಸ್ತ ಧರ್ಮಗಳಿಗೆ ರಾಷ್ಟ್ರೀಯ ಧಾರ್ಮಿಕ ಅಲ್ಪಸಂಖ್ಯಾತರೆಂದು ಮನ್ನಣೆಯನ್ನು ನೀಡಲಾಗಿರುವಂತೆ ಕೇಂದ್ರ ಸರಕಾರವು ಲಿಂಗಾಯತ ಧರ್ಮಾನುಯಾಯಿಗಳಿಗೂ ರಾಷ್ಟ್ರೀಯ ಧಾರ್ಮಿಕ ಅಲ್ಪಸಂಖ್ಯಾತರೆಂದು ಮನ್ನಣೆ ಮತ್ತು ಸೌಲಭ್ಯವನ್ನು ನೀಡುವಂತೆ ಪ್ರಯತ್ನವನ್ನು ಮಾಡಬೇಕೆಂದು ನಿರ್ಣಯ ತೆಗೆದುಕೊಳ್ಳಲಾಯಿತು. ಈ ನಿರ್ಣಯಗಳನ್ನು ಸಭೆಯು ಒಮ್ಮತದಿಂದ ಅನುಮೋದಿಸಿತು. □□

ಅಕ್ಟೋಬರ್-ನವೆಂಬರ್ ತಿಂಗಳಲ್ಲಿ ದೇಣಿಗೆ ಸಲ್ಲಿಸಿದ ದಾಸೋಹಿಗಳು

ಬಸವ ಧರ್ಮ ಪೀಠದ ಕಟ್ಟಡ ನಿಧಿಗೆ

ಶರಣರುಗಳಾದ :

1. ಡಾ|| ಶಿವಗೌಡ ಬಾಳಗೌಡ ಪಾಟೀಲ, ಸಂಕೇಶ್ವರ	ರೂ. 50,000-00
2. ಅನಂತಮ್ಮ ಮತ್ತು ಮೂಡ್ಲಗಿರಿ, ದಾವಣಗೆರೆ	ರೂ. 50,000-00
3. ಲಲಿತಮ್ಮ ಲಿಂ|| ಕೆ.ಪಿ.ಶಿವಲಿಂಗಯ್ಯ, ಬೆಂಗಳೂರು	ರೂ. 50,000-00

ಶರಣ ಮೇಳದ ನಿಧಿಗಾಗಿ (ಪುದುವಟ್ಟಿಗೆ)

ಶರಣರುಗಳಾದ :

1. ಜಗದಾಂಬಾ ಮತ್ತು ಡಾ|| ಷಡಕ್ಷರ ಮೂರ್ತಿ, ಮೈಸೂರು	ರೂ. 25,000-00
2. ಪ್ರೇಮಾ ಮತ್ತು ಚಂದ್ರಯ್ಯ, ದಾವಣಗೆರೆ	ರೂ. 10,000-00
3. ರಾಜಶೇಖರಯ್ಯ, ಮಧುಗಿರಿ	ರೂ. 5,000-00
4. ನೀಲಕಂಠ ಬಸಪ್ಪ ಪಾಪಡೆ, ಕೋಳಾರ, ಬೀದರ	ರೂ. 5,000-00
5. ಗಂಗಶೆಟ್ಟಿ ಪಾಟೀಲ್, ವಕೀಲರು, ಬೀದರ	ರೂ. 5,000-00

ಗುರುಕಾಣಿಕೆ

ಶರಣೆ. ಭಾಗ್ಯ D/o ಮಲ್ಲಮ್ಮ ನಾಗರಾಜ್, ಬೆಂಗಳೂರು	ರೂ. 10,000-00
ಶರಣೆ. ಚಂದ್ರಮ್ಮ ಅಣ್ಣೆಪ್ಪ ಪಾಟೀಲ್ (ಗಾದಗಿ), ಬೀದರ	ರೂ. 5,000-00
ಶರಣೆ. ಜಯಶ್ರೀ ಬಸವರಾಜ ಶಿವಪುರ, ಹೊಮ್ಮರಡಿ	ರೂ. 5,000-00
ಶರಣ. ಶಿವಮೂರ್ತಪ್ಪ ಭದ್ರಾವತಿ	ರೂ. 3,000-00

ಬೆಂಗಳೂರು ಬಸವ ಮಂಟಪದಲ್ಲಿ ಪ್ರತಿ ಭಾನುವಾರದ ಪ್ರಾರ್ಥನೆ-ಪ್ರವಚನದ ನಂತರ ನಡೆಯುವ ದಾಸೋಹಕ್ಕೆ 1500 ರೂ. ಕೊಟ್ಟವರು

5-11-2000 ಶರಣೆ. ಜಯಮ್ಮ ಗುರುಸಿದ್ದಪ್ಪ, ಬೆಂಗಳೂರು.
12-11-2000 ಬೆಂಗಳೂರು ಪುರಭವನದಲ್ಲಿ ಸಾಮೂಹಿಕ ದಾಸೋಹ
19-11-2000 ಶರಣ. ವಿಶ್ವೇಶ್ವರಯ್ಯ ಅಮ್ಮಸಂದ್ರ
26-11-2000 ಶರಣ. ಪರಮೇಶ್ವರಪ್ಪ ವಿಜಯನಗರ, ಬೆಂಗಳೂರು
3-12-2000 ಶರಣ. ಡಾ|| ಮಹಾದೇವಪ್ಪ ವಾಲಂಡಿಕರ್, ಧಾರವಾಡ

ದಾಸೋಹ ನಿಧಿಗೆ 1111ರೂ. ಕೊಟ್ಟ ದಾಸೋಹಿಗಳ ಯಾದಿ ಬಹಳ ದೊಡ್ಡದಾಗಿ ಇರುವುದರಿಂದ ಸ್ಥಳಾಭಾವದಿಂದ ಈ ಸಲ ಪ್ರಕಟಿಸಿಲ್ಲ. ಕ್ಷಮೆ ಇರಲಿ.

ಜನಗಣತಿ ಪ್ರಚಾರಕ್ಕಾಗಿ ಕರಪತ್ರ ಮುದ್ರಣಕ್ಕೆ ಧನ ದಾಸೋಹ ಮಾಡಿದ ಶರಣರು

(ನವೆಂಬರ್ ಸಂಚಿಕೆಯಿಂದ ಮುಂದುವರಿದ ಪಟ್ಟಿ)

50,000 (ಹತ್ತು ಸಾವಿರ) ಪ್ರತಿಗೆ 5500 ರೂ.

ಶರಣ. ಆರ್. ಕೆ. ಹೆಗ್ಗಣೆ. ಗುಲಬರ್ಗಾ
ಶರಣ. ಪ್ರಭುಶೆಟ್ಟಿ ಸಂಗಪ್ಪ ಅಲಶೆಟ್ಟಿ, ಬೀದರ
ಶರಣೆ. ವನಜಾಕ್ಷಮ್ಮ ಭೋಗ ನಂಜುಂಡಯ್ಯ, ಬೆಂಗಳೂರು.

10,000 (ಹತ್ತು ಸಾವಿರ) ಪ್ರತಿಗೆ 1100 ರೂ.

ಶರಣರುಗಳಾದ :

K. Sugurappa, Adoni

Kosigi Ramalingappa, Adoni
Lingayath (Veerashaiva) Sangham, Yemmiganoor
ಗುಂಜಹಳ್ಳಿ ರಾಜಶೇಖರಪ್ಪ, ಗಂಗಾವತಿ
Veerashaiva Samajam, Secunderabad (Basappa)
Sridevi Patil W/o Naganath Patil
ರಾಷ್ಟ್ರೀಯ ಬಸವ ದಳ, ಕುರುಬಖೇಳಗಿ, ಜಿ-ಬೀದರ
ಜಗಜ್ಯೋತಿ ಬಸವೇಶ್ವರ ಸಹಕಾರ ಸಂಘ, ಗೋರಟಾ-ಬಿ. ಜಿ-ಬೀದರ
ಬಾಲಚಂದ್ರ S/o ಅಂತಪ್ಪ ಗಂಗಾ, ದುಬಲಗುಂಡಿ. ಜಿ-ಬೀದರ
ಯಶವಂತ S/o ಬಸವಲಿಂಗಪ್ಪ ಶಿರಶೆಟ್ಟಿ, ದುಬಲಗುಂಡಿ. ಜಿ-ಬೀದರ
ಅಧ್ಯಕ್ಷರು, ರಾಷ್ಟ್ರೀಯ ಬಸವ ದಳ, ಸಿಕೆಂದ್ರಾಪುರ
Anand Fertilizers Agencies, Bidar
ರವೀಂದ್ರ ಯದ್ಲಾಪುರ, ಬೀದರ
ನಿರ್ಮಲಾ ಶಿವನಾಥ ನೀಲಂಗೆ. ಬೀದರ
ಬಸವರಾಜ್ ಗದಿಗೆಪ್ಪ ಗದಿಗೆಪ್ಪನವರು, ನಾವದಗಿ, ಜಿ-ಬೀದರ
ಇಂದುಮತಿ ಪದ್ಮಣ್ಣ ಪಾಟೀಲ. ಗುಲಬರ್ಗಾ
ವಿವೇಕ ಪಟ್ನೆ ಮತ್ತು ಕಾಶೀನಾಥ. ಬೀದರ
ಪರಮೇಶ್ವರ ಶಿವಧೆ, ಬೀದರ
ಗುರುನಾಥರಾವ್ ನಿಡಗುಂದೆ, ಬೀದರ
ಪಿ.ಎಸ್. ಮುದ್ದಾ ವೀರಣ್ಣ, ಬೀದರ
Sajjan Shetty, Bhosari, Pune
ವಿ. ನಂಜಮ್ಮ, ಮಾಲೂರ, ಬೆಂಗಳೂರು
B. Basavegowdaru S/o Veerabhadregowdaru. Chittor
ಮಧುಗಿರಿ ಶಿವಣ್ಣ. ತುಮಕೂರು
ಬಸವರಾಜೇಂದ್ರಪ್ಪ ಎಲೆ ಬಸಪ್ಪನವರು, ವಿಜಯಪುರ
ಎಮ್. ಜಯದೇವಪ್ಪ, ವಿಜಯಪುರ
ಶಂಕರಪ್ಪ ಕಲ್ಲಪ್ಪ ಪಡಶೆಟ್ಟಿ, ಗೊಬ್ಬೂರು. ಜಿ-ಗುಲಬರ್ಗಾ
ತುಳಜಪ್ಪ ಚಂದ್ರಾಮಪ್ಪ ಹರಳಯ್ಯ, ಗೊಬ್ಬೂರು (ಬಿ.) ಗುಲಬರ್ಗಾ
ಶಕುಂತಲಾ ಪುಟ್ಟಸಿದ್ಧಪ್ಪ, ಬೆಂಗಳೂರು
ಬಸವರಾಜ ಮಾಳಗಿ, ಬಸಾಪುರ. ಜಿಲ್ಲೆ-ಬೆಳಗಾವಿ
ಆಡಳಿತ ಮಂಡಳಿ ಅಧ್ಯಕ್ಷರು, ಉಪಾಧ್ಯಾಯ ವೃಂದ,
ಶ್ರೀ ಬಸವೇಶ್ವರ ಸಂಯುಕ್ತ ಪದವಿ ಪೂರ್ವ ವಿದ್ಯಾಲಯ, ಹುಲ್ಲೇಕೆರೆ, ಜಿ-ತುಮಕೂರು
ಚನ್ನಬಸಮ್ಮ, ಎಂ.ಎಸ್. ಚನ್ನಬಸಪ್ಪ, ಮಾಚೇನಹಳ್ಳಿ, ಜಿ-ತುಮಕೂರು
ಎಂ. ಶಿವಣ್ಣ (ರಾಜಣ್ಣನವರು) ಕಲಬೋರನಹಳ್ಳಿ, ತುಮಕೂರು ಜಿಲ್ಲೆ
ಎಮ್. ಆರ್. ಭವಾನಮ್ಮ , ಎಂ.ಎಸ್. ಗುರಿ. ಮಾಚೇನಹಳ್ಳಿ, ಜಿ-ತುಮಕೂರು
ಜಿ.ಟಿ. ಮಹಾಲಿಂಗಪ್ಪ, ಗುಡಿಗೊಂಡನಹಳ್ಳಿ, ಜಿ-ತುಮಕೂರು
ಸುಜಯಾದೇವಿ ಮಹಾಲಿಂಗಯ್ಯ. ಬೆಂಗಳೂರು
ಎ.ಎನ್. ಜಗದಾಂಬ ಶಂಕರಪ್ಪ, ತಿಪಟೂರು. ಜಿ-ತುಮಕೂರು
ಕೆ.ಜಿ.ಸುಕನ್ಯ C/o ಎಸ್. ಅಂಬುಜಾಕ್ಷಮ್ಮ. ಶಿವಮೊಗ್ಗ


5000ಪ್ರತಿಗೆ 650 ರೂ. ಕೊಟ್ಟವರು

ಬಸವರಾಜ ಕಾತರಕಿ S/o ಚನ್ನಪ್ಪ. ಕೊಪ್ಪಳ

Sajjan Shetty, Bhosari, Pune
ಶಿವಕುಮಾರ ಹಾವಗೆಪ್ಪಾ ತಮಾಸಂಗೆ, ದಾಡಗಿ, ಜಿ-ಬೀದರ
ಶಿವರಾಜ ಅಪ್ಪಾರಾವ್ ಮಾಶೆಟ್ಟಿ, ದಾಡಗಿ, ಜಿ-ಬೀದರ್
ರಾಷ್ಟ್ರೀಯ ಬಸವ ದಳ. ಗಂಗಾವತಿ
ಬಂಡೆಪ್ಪ ತಮಾಸಂಗೆ, ದಾಡಗಿ, ಜಿ-ಬೀದರ
ಸಂಜೀವಕುಮಾರ ಮಲ್ಲಿಕಾರ್ಜುನ ಮಾಕಾ, ದಾಡಗಿ, ಜಿ-ಬೀದರ
ಬಸವರಾಜ್ ಗದಿಗೆಪ್ಪ ಗದಿಗೆಪ್ಪನವರು, ಕುಮಾರ ಚಿಂಚೋಳಿ, ಜಿ-ಬೀದರ
ವೈಜನಾಥ ತಂದೆ ಬಸಪ್ಪಾ ಕನ್ನಕಟ್ಟ, ನಾವದಗಿ. ಜಿ-ಬೀದರ
ಬಸವರಾಜ ರಾಮಶೆಟ್ಟಿ ಹಮ್ಮಾ, ನಾವದಗಿ, ಜಿ-ಬೀದರ
ಶಾಂತವೀರಸ್ವಾಮಿ ನಾಗಭೂಷಣಸ್ವಾಮಿ ಸಂಸ್ಥಾನ ಮಠ, ನಾವದಗಿ, ಜಿ-ಬೀದರ
ಗುರುಪ್ಪಾ ನಂದೆಪ್ಪಾ ಕಣಜೆ, ಗೋರಟಾ-ಬಿ. ಜಿ-ಬೀದರ
ಶರದ್‌ಚಂದ್ರ ಶಂಕ್ರೆಪ್ಪ ಪತ್ತೆಪುರ. ದುಬಲಗುಂಡಿ, ಜಿ-ಬೀದರ
ರಾಮಣ್ಣಾ ಶಂಕ್ರೆಪ್ಪ ಗಂಗಾ ಪಾಟೀಲ. ದುಬಲಗುಂಡಿ. ಜಿ-ಬೀದರ
ಉಮಾಕಾಂತ್ S/o ಬಸಪ್ಪ ಖ್ಯಾಡೆ. ದುಬಲಗುಂಡಿ. ಜಿ-ಬೀದರ
ಶಿವರಾಜ S/o ಮಹಾದೇವಪ್ಪ ಗಂಗಾ, ದುಬಲಗುಂಡಿ, ಜಿ-ಬೀದರ
ಬಸವರಾಜ್ S/o ಗುಂಡಪ್ಪ ಚಿಕಟವಾರ್, ದುಬಲಗುಂಡಿ, ಜಿ-ಬೀದರ
ಶಕುಂತಲಾ W/oಭಾರತ ಪಾಟೀಲ, ಸಿಕೆಂದ್ರಾಪುರ. ಜಿ-ಬೀದರ
ಬಾಬುರಾವ್ S/o ಮಲ್ಲಪ್ಪ ಗಿರಿ. ಬೀದರ
ನಾಗಯ್ಯ ಸ್ವಾಮಿ S/o ಗುರುಶಾಂತಯ್ಯ ಸ್ವಾಮಿ, ಬೀದರ
ಚಂದ್ರಕಾಂತ S/o ಕಾಮಶೆಟ್ಟಿ ಪಾಟೀಲ, ಬೀದರ
ಶೋಭಾದೇವಿ ಪಂಡಿತ್ ವಲ್ಲೇಪುರೆ, ಬೆಳಕುಣಿ ಚೌಧರಿ, ಬೀದರ
ಶ್ರೀದೇವಿ ಸಂಗ್ರಾಮ್ ಹೊಕ್ರಾಣಾ. ಔರಾದ್-ಎಸ್, ಬೀದರ
ಮಲ್ಲಿಕಾರ್ಜುನ ಶಹಾಪುರ, ಬೀದರ
ಮಹಾರುದ್ರಪ್ಪ ಕೋಡಗೆ ಚಿಮಕೋಡ, ಬೀದರ
ವೈಜನಾಥ S/o ಕರಬಸಪ್ಪ ಸೇರೆ, ಬೀದರ
ಶಿವಾನಂದ S/o ಶಂಕರಯ್ಯ ಸ್ವಾಮಿ, ಬೀದರ
ಚಂದ್ರಶೇಖರ ಪಾಟೀಲ, ಚೊಂಡಿ. ಜಿ-ಬೀದರ
ವೈಜನಾಥ ಮತ್ತು ಶ್ರೀನಾಥ ಕೋರೆ, ಮೈಲೂರು, ಜಿ-ಬೀದರ್
ಚಂದ್ರಶೇಖರ್ S/o ನಾಗಶೆಟ್ಟಪ್ಪ ಪಾಟೀಲ, ಬೀದರ
ಶಕುಂತಲಾ ವಿಶ್ವನಾಥ ಬಿರಾದಾರ, ಬೀದರ
ನಾಗೇಶ ಬಾಬುರಾವ್ ಹಳ್ಳಿ, ಬೀದರ
ಬಸವಂತರಾವ್ ಸಿದ್ದಪ್ಪ ಬಿರಾದಾರ, ಬೀದರ
ಮಲ್ಲಿಕಾರ್ಜುನ, ಬೀದರ
ಕಲ್ಪನಾ ಮಲ್ಲಿಕಾರ್ಜುನ ಸಾವಳೆ, ವಡಗಾಂವ, ಜಿ-ಬೀದರ
ಸಂಗಮೇಶ್ವರ, ಶಿವನಾಪುರ, ಬೆಂಗಳೂರು ಗ್ರಾಮಾಂತರ
ಎ.ಎಸ್. ಶಿವಲಿಂಗಣ್ಣನವರು, ಕಲಕುಂಟೆ. ಬೆಂಗಳೂರು ಗ್ರಾಮಾಂತರ
ಸುರೇಶ ಮತ್ತು ಸಂಗಡಿಗರು, ಬೆಂಗಳೂರು
ಎಮ್. ಮಂಜುನಾಥ S/o ಎಮ್. ಮಲ್ಲೇಶಯ್ಯ ಆರಾಧ್ಯ

-ಮುಂದುವರಿಯುವುದು

ಕರಪತ್ರ ಮುದ್ರಣಕ್ಕೆ ದೇಣಗೆ ಕೊಟ್ಟವರ ಹೆಸರು ಇನ್ನು ಬಹಳವಿದ್ದು ಸ್ಥಳಾಭಾವದಿಂದ ಮುದ್ರಿಸಲಾಗಿಲ್ಲ. ಮುಂದಿನ ಸಂಚಿಕೆಯಲ್ಲಿ ಮುದ್ರಿಸಲಾಗುವುದು. ಎಲ್ಲ ದಾನಿಗಳಿಗೆ ಶುಭಹಾರೈಕೆಗಳು. -ಮಾತಾಜಿ



ಬೀದರ್ ಜಿಲ್ಲಾ ಕಾರಾಗೃಹದಲ್ಲಿ ಪ್ರವಚನ ಕಾರ್ಯಕ್ರಮ
ಪೂಜ್ಯ ಮಾತಾಜಿಯವರನ್ನು ಸ್ವಾಗತಿಸುತ್ತಿರುವ ಜೇಲ್ ಅಧಿಕಾರಿ ಶರಣ ಮಲ್ಲಿಕಾರ್ಜುನಪ್ಪ, ಜೊತೆಯಲ್ಲಿ ಬಸವ ಕುಮಾರ ಸ್ವಾಮಿಗಳು, ಚನ್ನಬಸವರಾಜ ಸ್ವಾಮಿಗಳು

ಕಲ್ಯಾಣ ಕಿರಣ CPMG/KA/BGW - 50 ಡಿಸೆಂಬರ್ -2000
R.NO. 19980/70 WPP (W) - 17

